32೮8

# Life of David

FROM THE ENGLISH OF

REV. P. THOMSON, A.M.

# ಅರಸನಾದ ದಾವೀದನ ಚರಿತ್ರೆ

ಕನ್ನಡ ಸಾಹಿತ್ಯ ಪರಿಷತ್ತು, ಸಂಸ್ಕೃತ ಭಂಡಾರ, ಬೆಂಗಳೂರು-೧೮.

TRANSLATED BY

MR. M. SUSHILA

*...rst Edition—500 Copies.*

BANGALORE:
...ract and Book Society,
...he Wesleyan Mission Press, Mysore.
1904.

[ಕ್ರಯ, ಆರು ಪೈ.

Q, 6:2 N
4536

ಸರಸ್ವತೀ ಭಂಡಾರ
ಪರಿಷತ್ತು
...ತ್ತ ೪೭೬
...ಸಂ ೨೭೫೧

Digitized by ROJA MUTHIAH RESEARCH LIBRARY

4538

ಕರ್ನಾಟಕ ಸಾಹಿತ್ಯ ಪರಿಷತ್ತು
ಪುಸ್ತಕ ಭಂಡಾರ
ಕ್ರಮ ಸಂಖ್ಯೆ 4538 ವರ್ಗ ಸಂಖ್ಯೆ
ತಾರೀಖು
ಬೆಲೆ

32-7

ಕನ್ನಡ ಸಾಹಿತ್ಯ ಪರಿಷತ್ತು, ಸರಸ್ವತಿ ಭಂಡ
ಬೆಂಗಳೂರು-೧೮.

Digitized by ROJA MUTHIAH RESEARCH LIBRARY

Q, 6:2 H
A/4538

# ...ರಸನಾದ ದಾವೀದನ ಚರಿತ್ರೆ

## ಮೊದಲನೇ ಅಧ್ಯಾಯ.

ಕುರುಬನಾಗಿದ್ದವನು ರಾಜಾಸ್ಥಾನವನ್ನು ಸೇರಿದ್ದು.

### ಬೆತ್ಲೆಹೇಮು.

ರೂಸಲೇಮೆಂದು ತರುವಾಯ ಹೆಸರ್ಗೊಂಡ ಯೆಬೂಸಿಯರ ದುರ್ಗದ ನೈಋತ್ಯ
ಮಾರು ಎರಡು ಹರದಾರಿ ದೂರದಲ್ಲಿದ್ದ ಸುದ್ದಗುಡ್ಡದ ಮೇಲೆ ಬೆತ್ಲೆಹೇಮು
ತ್ತು. ಈ ಊರಿನ ಸುತ್ತುಮುತ್ತಲು ಸಾರವತ್ತಾದ ಹೊಲಗಳಿದ್ದದರಿಂದ, "ರೊಟ್ಟಿ
ಎಂತಲೂ, ಪೂರ್ವದಲ್ಲಿ "ಎಫ್ರಾತ" "ಫಲವತ್ತಾದದ್ದು" ಎಂತಲೂ ಹೆಸರ್ಗೊಂ
ನ್ನು ಈ ಚರಿತ್ರೆಯು ನಡೆದ ಕಾಲದಲ್ಲಿ ಇದಕ್ಕೆ ಸಮೀಪವಾಗಿ ನೆಲೆಗೊಂಡಿದ್ದ
ತ್ರದವರಿಗೆ ಭದ್ರವಾದ ದುರ್ಗವಾಗಿತ್ತು. ಬೆತ್ಲೆಹೇಮಿನ ನಿವಾಸಿಗಳು ಸುತ್ತು
ಗುವಳಿಮಾಡುತ್ತಾ ತಮ್ಮ ಪಶುಗಳನ್ನು ದೂರದಲ್ಲಿದ್ದ ಹುಲ್ಲುಗಾವಲುಗಳಲ್ಲಿ
ತ್ತಾ ಜೀವಿಸುತಿದ್ದರು. ಮತ್ತು ಪಾಳ್ಯಗಾರರ ದಂಡನ್ನು ಕಂಡರೆ ಗುಡ್ಡದ ಮೇಲಿ
ಳಗೆ ಸೇರಿಕೊಂಡು ತಮ್ಮನ್ನೂ ತಮ್ಮ ಆಸ್ತಿಪಾಸ್ತಿಗಳನ್ನೂ ಕಾಪಾಡಿಕೊಳ್ಳುತ್ತಿ

ನ್ನು ಒಂದು
ದೆ.

ನ್ನು ಮಾತ್ರ ಬರೆದಿದೆ. ಆ ಕಾಲ
ದರಲ್ಲಿ ಪಡುವ ಪ್ರಯಾಸವನ್ನು
ಗಿದೆ. ಬೆತ್ಲೆಹೇಮಿನ ಪಾಶ್ಚಾತ್ಯ
ರ್ಜನಪ್ರದೇಶವಾಗಿದ್ದುದರಿಂದಲೂ
ರುತ್ತೆ. ದಾವೀದನು ಮಾಡಿದ
ಡಿಯ ಶತ್ರುಗಳ ಸಂಗಡ ದ್ವಂದ್ವ
ರೂ ಸಿಂಹವನ್ನು ಒಂದು ದೊಣ್ಣೆ
ಳಿಸುತ್ತಾರೆ. ದಾವೀದನು ಕುರೀ
ಕ್ರೂರಸ್ವಭಾವವುಳ್ಳ ಕರಡಿಯನ್ನು
ನೆ. ತಾನು ಈ ಮೃಗಗಳನ್ನು
ಬಲದಿಂದಲೇ ಅವುಗಳ ಕತ್ತನ್ನು
ನೆ.

ಕ್ಷಿಸಲ್ಪಟ್ಟದ್ದು.

.3.]

ಗಳನ್ನು ಸೇರಿಸಿ ಒಬ್ಬನೇ ಅರಸನ
ಪ್ರಾರಂಭವಾಗಿತ್ತು. ಸೌಲನು
ರಾಜ್ಯಾಧಿಕಾರವನ್ನು ಕೊಟ್ಟ
ಮುಖ್ಯವೆಂದೆಣಿಸಿ ರಾಜ್ಯಪರಿಪಾ
ಹೋವನ ಬುದ್ಧಿವಾದವು ಪರಿ
ಳನ್ನು ತನಗೆ ಪ್ರಾಮಾಣ್ಯವಾಗಿ
ಳ್ಳೆಯ ದ್ರವ್ಯವನ್ನು ಸಂಪಾದಿಸು
ಡೆಯುತ್ತಾಬಂದನು. ಇವನನ್ನು
ರೇಲನು ಇವನ ಗುಣಲಕ್ಷಣಗ
ಂದ ಅಭಿವೃದ್ಧಿಯಾಗಲಾರದೆಂ
ಲೂ ನಂಬಿ ಮನಗುಂದಿದವನಾ
ಬಗ್ಗೆ ದೇವರ ಆಜ್ಞೆಯಾಯಿತು.
ಸ್ರಾಯೇಲಿನಮೇಲೆ ಅರಸನಾಗಿ

Digitized by ROJA MUTHIAH RESEARCH LIBRARY

## ದಾವೀದನ ಜನನವೂ ಬಾಲ್ಯವೂ.

ದಾವೀದನು ಬೆತ್ಲೆಹೇಮಿನ ನಿವಾಸಿಗಳಲ್ಲೊಬ್ಬನಾಗಿದ್ದ ಯಿಶಾಯಿ ಎಂಬವನ ಎಂಟನೇ ಮಗನಾಗಿದ್ದನು. ದಾವೀದನನ್ನು ಜನರು—ಯಿಶಾಯಿಯ ಮಗನು ಎಂದು ಧಿಕ್ಕರಿಸಿ ಕರೆಯುತ್ತಿದ್ದದರಿಂದಲೂ, ಆತನ ತಂದೆಯು ಆ ಊರಿನ "ಹಿರಿಯರ" ಲ್ಲೊಬ್ಬನಾಗಿ ಎಣಿಸಲ್ಪಡದೆ ಇದ್ದುದರಿಂದಲೂ, ಆತನ ಕುಟುಂಬವು ಅಷ್ಟು ನೆಮ್ಮದಿಯಾಗಿರಲಿಲ್ಲವೆಂದು ತೋರುತ್ತೆ. ದಾವೀದನ ದೇಹಲಕ್ಷಣವನ್ನು ಕುರಿತು "ಕೆಂಪು ಕೂದಲೂ (ಇದು ಪೂರ್ವಾರ್ತ್ಯರಿಂದ ಸೌಂದರ್ಯವೆಂದೆಣಿಸಲ್ಪಡುತಿತ್ತು.) ಸುಂದರವಾದ ಕಣ್ಣುಗಳೂ ಮುಖವೂ ಉಳ್ಳವನು" ಎಂಬುವದಕ್ಕಿಂತಲೂ ಹೆಚ್ಚಾಗಿ ಏನೂ ಬರೆದಿಲ್ಲ. ಮತ್ತು ಆತನು ತಾಯಿತಂದೆಗಳನ್ನು ತನ್ನ ಸೌಂದರ್ಯದಿಂದ ಉಲ್ಲಾಸಗೊಳಿಸಿದ್ದರಿಂದ ಅವರು ಆತನ ಸೌಂದರ್ಯಕ್ಕೆ ಮೆಚ್ಚಿ, ಮುಂದಕ್ಕೆ ಈತನಿಗೆ ದೊಡ್ಡಸ್ತಿಕೆಯೂ ಉಂಟಾಗುವದೆಂದು ನಿರೀಕ್ಷಿಸಿ, ಆತನಿಗೆ "ಪ್ರೇಮಪಾತ್ರನು" ಎಂದರ್ಥವುಳ್ಳ ದಾವೀದನೆಂಬ ಹೆಸರನ್ನಿಟ್ಟರು. ಅವರ ಬಯಕೆಯು ಈಡೇರಿತೆಂದು ದಾವೀದನ ಚರಿತ್ರೆಯಿಂದ ನಮಗೆ ತಿಳಿದುಬರುತ್ತೆ. ಆ ಕಾಲದಲ್ಲಿ ವಿದ್ಯೆಯು ಪ್ರವಾದಿಗಳ ಶಾಲೆಗಳಲ್ಲಿಯೂ ಯಾಜಕರ ಕುಟುಂಬಗಳಲ್ಲಿಯೂ ಮಾತ್ರವೇ ಅಭ್ಯಾಸಿಸಲ್ಪಡುತ್ತಿದ್ದುದರಿಂದ ಸಾಧಾರಣವಾಗಿ ಹುಡುಗರು ವಿದ್ಯೆಯನ್ನು ಕಲಿಯದೆ, ತಮ್ಮ ಜೀವನೋಪಾಯಕ್ಕಾಗಿ ಯಾವದಾದರೊಂದು ಕೆಲಸ ಮಾಡುವದನ್ನು ಕಲಿಯ ಬೇಕಾಗಿತ್ತು. ಆದಕಾರಣ ಯಿಶಾಯಿಯ ಕಿರೀ ಮಗನಾದ ಈ ದಾವೀದನು ತನ್ನ ಚಿಕ್ಕತನದಲ್ಲಿಯೇ ತಂದೆಯ ಮಂದೆಗಳನ್ನು ಬೆತ್ಲೆಹೇಮಿನವರೆಲ್ಲರಿಗೆ ಹುದುವಾಗಿದ್ದ, ಹುಲ್ಲುಗಾವಲುಗಳಲ್ಲಿ ಮೇಯಿಸುವದಕ್ಕೆ ನೇಮಿಸಲ್ಪಟ್ಟನು. ಗರಕಲತರಕಲಾದ ಯೂದಾಯದ ಉನ್ನತ ಪ್ರದೇಶಗಳಲ್ಲಿ ಭಗವಂತನೇ ಸೃಷ್ಟಿಸಿರುವ ಶಾಲೆಯಲ್ಲಿ ಶಿಕ್ಷಿತನಾಗಿ ಕಷ್ಟವಾದ ಕೆಲಸಗಳನ್ನು ಮಾಡುವದಕ್ಕೂ ದೇಹಶ್ರಮವನ್ನು ತಾಳುವದಕ್ಕೂ ಚನ್ನಾಗಿ ಕಲಿತುಕೊಂಡನು. ಆದಕಾರಣ ಆತನು ಬೆಳೆದ ಮೇಲೆ ನಿರ್ಭಯವೂ ದೇಹದಾರ್ಢ್ಯವೂ ಉಳ್ಳವನಾದನು. ಆತನ ಲೌಕಿಕ ವೈದಿಕ ವಿದ್ಯೆಗಳ ವಿಷಯವಾಗಿಯೋ ಅಂದರೆ—ಆತನು ಮೊದಲು ತಾಯಿಯಿಂದ ಬೋಧಿಸಲ್ಪಟ್ಟು ತರುವಾಯ ಕುಟುಂಬಕೂಟಗಳಲ್ಲಿ ತಮ್ಮ ಜನಾಂಗದ ಹಿರಿಯರ ಕಥಾಶ್ರವಣವಾಗುವಾಗ ಕೇಳಿ ತಿಳುಕೊಳ್ಳುವನು. ಮತ್ತು ವರ್ಷಕ್ಕೊಂದು ಸಾರಿ ಹಬ್ಬದಲ್ಲಿ ಲೇವಿಯನಾಗಲಿ ಯಾಜಕನಾಗಲಿ ನೀತಿಸಂಬಂಧವಾದ ಧರ್ಮಾನುಶಾಸನ ವಿವರಿಸುವದನ್ನು ಕೇಳುವನು. ದಾವೀದನು ಪ್ರತಿದಿನವೂ ತನ್ನ ಮಂದೆಯನ್ನು ಮೇಯಿಸುವದಕ್ಕೆ ನಡಿಸಿಕೊಂಡು ಹೋಗಿ ತನ್ನ ಕಾಲವನ್ನು ಕೊಳಲೂದುವದರಲ್ಲಿಯೂ ವೀಣೆ ಬಾಜಿಸುವದರಲ್ಲಿಯೂ ಕಳೆಯುತ್ತಾ ಇರುವಾಗ ಪುರಾತನ ಚರಿತ್ರೆಗಳಲ್ಲಿ ವ್ಯಕ್ತವಾಗುವ ದೇವರ ವಿಷಯವಾದ ಜ್ಞಾನವನ್ನು ಭಗವಂತನ ನಿರ್ಮಾಣಕೃತ್ಯಗಳು ಒಂದು ದೊಡ್ಡ ಪುಸ್ತಕದ ಹಾಗೆ ಬಟ್ಟಬಯಲಾಗಿ ಮಾಡುತ್ತ ಆತನ ಕಣ್ಣು ಮುಂದೆ ಇದ್ದದರಿಂದ ಆತನ ಎಳೇ ಮನಸ್ಸು ಆ ಬೋಧನೆಯನ್ನೆಲ್ಲಾ ಚನ್ನಾಗಿ ಗ್ರಹಿಸಿಕೊಂಡಿತೆನ್ನುವದಕ್ಕೇನಾದರೂ ಸಂದೇಹವಿಲ್ಲ.

Digitized by ROJA MUTHIAH RESEARCH LIBRARY



## ದಾವೀದನು ಒಂದು ಸಿಂಹವನ್ನೂ ಒಂದು ಕರಡಿಯನ್ನೂ ಕೊಂದದ್ದು.

ದಾವೀದನ ಈ ಕಾಲದ ಚರಿತ್ರೆಯ ಒಂದು ಅಂಶವನ್ನು ಮಾತ್ರ ಬರೆದಿದೆ. ಆ ಕಾಲದಲ್ಲಿ ಕುರುಬನಾದವನು ತನ್ನ ಮಂದೆಯನ್ನು ಕಾಯುವದರಲ್ಲಿ ಪಡುವ ಪ್ರಯಾಸವನ್ನು ತೋರಿಸುವದಕ್ಕೆ ಈ ವಿಷಯವು ಸಾಕಾದ ದೃಷ್ಟಾಂತವಾಗಿದೆ. ಬೆತ್ಲೆಹೇಮಿನ ಪಾರ್ಶ್ವಾಂತರವಿದ್ದ ಪ್ರದೇಶವು ಮಲೆನಾಡಾಗಿದ್ದುದರಿಂದಲೂ ನಿರ್ಜನಪ್ರದೇಶವಾಗಿದ್ದುದರಿಂದಲೂ ಕಾಡುಮೃಗಗಳು ಇನ್ನೂ ಪ್ರಬಲವಾಗಿದ್ದಹಾಗೆ ತೋರುತ್ತೆ. ದಾವೀದನು ಮಾಡಿದ ಮೊದಲನೇ ಪರಾಕ್ರಮಕಾರ್ಯವು ಯಾವದಂದರೆ—ಮಂದೆಯ ಶತ್ರುಗಳ ಸಂಗಡ ದ್ವಂದ್ವಯುದ್ಧ ಮಾಡಿದುದೇ. ಕಿರಾತರಾದ ಅರಾಬ್ಯರು ಈಗಲಾದರೂ ಸಿಂಹವನ್ನು ಒಂದು ದೊಣ್ಣೆಯಿಂದಲೇ ಎದುರಿಸಬಲ್ಲರೆಂದು ಪ್ರಯಾಣಿಕರಲ್ಲಿ ಅನೇಕರು ತಿಳಿಸುತ್ತಾರೆ. ದಾವೀದನು ಕುರೀಮರಿಗಳನ್ನು ಅಪಹರಿಸುತ್ತಿದ್ದ ಸಿಂಹವನ್ನು ಮಾತ್ರವಲ್ಲದೆ ಕ್ರೂರಸ್ವಭಾವವುಳ್ಳ ಕರಡಿಯನ್ನು ಸಹಾ ಕೊಂದೆನೆಂದು ಶೌರ್ಯಭಾವದಿಂದ ಹೇಳಿಕೊಳ್ಳುತ್ತಾನೆ. ತಾನು ಈ ಮೃಗಗಳನ್ನು ಯುಕ್ತಿಯಿಂದಲ್ಲ ಮುಖಾಮುಖಿಯಾಗಿ ಎದುರಿಸಿ ಭುಜಬಲದಿಂದಲೇ ಅವುಗಳ ಕತ್ತನ್ನು ಹಿಡಿದು ದೊಣ್ಣೆಯಿಂದ ಹೊಡೆದು ಕೊಂದೆನೆಂದು ತಿಳಿಸುತ್ತಾನೆ.

## ದಾವೀದನು ಸಮುವೇಲನಿಂದ ಅಭಿಷೇಕಿಸಲ್ಪಟ್ಟದ್ದು.

[i ಸಮುವೇಲನು xvi. 1—13.]

ಬೇರೆಬೇರೆಯಾಗಿದ್ದ ಇಸ್ರಾಯೇಲಿನ ಎಲ್ಲಾ ಗೋತ್ರಗಳನ್ನು ಸೇರಿಸಿ ಒಬ್ಬನೇ ಅರಸನ ಕೆಳಗೆ ಒಂದೇ ಜನಾಂಗವಾಗಮಾಡುವ ಕೆಲಸವು ಆಗತಾನೆ ಪ್ರಾರಂಭವಾಗಿತ್ತು. ಸೌಲನು ಅರಸನಾಗಿ ನೇಮಿಸಲ್ಪಟ್ಟ ಕೊಂಚಕಾಲದೊಳಗಾಗಿ ತನಗೆ ರಾಜ್ಯಾಧಿಕಾರವನ್ನು ಕೊಟ್ಟ ದೇವರ ಆಜ್ಞೆಗಳನ್ನು ನಡಸುವದಕ್ಕಿಂತ ಸ್ವಂತ ಶ್ರೇಯಸ್ಸನ್ನು ಮುಖ್ಯವೆಂದೆಣಿಸಿ ರಾಜ್ಯಪರಿಪಾಲನೆ ಮಾಡತೊಡಗಿದನು. ಯಾರ ಬುದ್ಧಿವಾದಕ್ಕಿಂತಲೂ ಯೆಹೋವನ ಬುದ್ಧಿವಾದವು ಪರಿಶುದ್ಧವಾದದ್ದೆಂದು ಅವನು ತಿಳಿಯದೆಹೋದನು. ಈ ಆಜ್ಞೆಗಳನ್ನು ತನಗೆ ಪ್ರಾಮಾಣ್ಯವಾಗಿ ಮಾಡಿಕೊಳ್ಳದೆ, ತನ್ನ ಮನಸ್ಸಾಕ್ಷಿಗಾದರೂ ಒಳಬೀಳದೆ, ಕೊಳ್ಳೆಯ ದ್ರವ್ಯವನ್ನು ಸಂಪಾದಿಸುವದೇ ತನ್ನ ಜೀವಮಾನದ ಮುಖ್ಯೋದ್ದೇಶವಾಗಿದ್ದಹಾಗೆ ನಡೆಯುತ್ತಾಬಂದನು. ಇವನನ್ನು ದೇವರ ಆಜ್ಞೆಯ ಮೇರೆಗೆ ಅಭಿಷೇಕಿಸಿದ ವೃದ್ಧನಾದ ಸಮುವೇಲನು ಇವನ ಗುಣಲಕ್ಷಣಗಳನ್ನು ನೋಡಿ, ದೇವರ ರಾಜ್ಯವು ಇಂಥಾ ನಡತೆಯುಳ್ಳವನಿಂದ ಅಭಿವೃದ್ಧಿಯಾಗಲಾರದೆಂತಲೂ ಸೌಲನು ದೇವರ ಚಿತ್ತಕ್ಕೆ ಸರಿಯಾದ ಅರಸನಲ್ಲವೆಂತಲೂ ನಂಬಿ ಮನಗುಂದಿದವನಾದನು. ಹೀಗಿರುವಲ್ಲಿ ಸಮುವೇಲನು ಬೆತ್ಲೆಹೇಮಿಗೆ ಹೋಗುವ ಬಗ್ಗೆ ದೇವರ ಆಜ್ಞೆಯಾಯಿತು. ಬೆತ್ಲೆಹೇಮಿನೊಳಗೆ ಯಿಶಾಯಿಯ ಮಕ್ಕಳಲ್ಲೊಬ್ಬನನ್ನು ಇಸ್ರಾಯೇಲಿನಮೇಲೆ ಅರಸನಾಗಿ

ಆದುಕೊಳ್ಳಬೇಕಾಗಿತ್ತು. ದೇವರ ಆಜ್ಞೆಯು ಮೇರೆಗೆ ಸಮುವೇಲನು ಬೆತ್ಲೆಹೇಮಿಗೆ ಬಂದಾಗ ಆ ಊರಿನ ಹಿರಿಯರು ಈತನನ್ನು ನೋಡಿ ಕಳವಳಗೊಂಡರು. ಆದರೆ ಸಮುವೇಲನು ಒಂದು ಯಾಗವನ್ನು ನಡಸುವ ನೆವದಲ್ಲಿ ಆ ಯಾಗಭೋಜನಕ್ಕೆ ಪಟ್ಣದ "ಹಿರಿಯರನ್ನೂ" ಯಿಶಾಯಿಯ ಕುಟುಂಬದವರನ್ನೂ ಕರೆಯಿಸಿದನು. ಇವರೆಲ್ಲರು ಬಂದಾಗ ಸಮುವೇಲನು ಆ ಯಿಶಾಯಿಯ ಮಕ್ಕಳಲ್ಲಿ ಒಬ್ಬೊಬ್ಬರ ಮುಖವನ್ನೂ ಚನ್ನಾಗಿ ದೃಷ್ಟಿಸಿ ನೋಡಿದನು. ಮೊದಲು ಚೊಚ್ಚಲಮಗನಾದ ಎಲ್ಯಾಬನ ಮುಖರೂಪವು ಸಮುವೇಲನಿಗೆ ಸಂತೋಷವನ್ನುಂಟು ಮಾಡಿದಾಗ್ಯೂ ದೇವರು ಆದುಕೊಂಡವನು ಅವನಲ್ಲವೆಂಬುದು ಸಮುವೇಲನಿಗೆ ಗೊತ್ತಾಯಿತು. ಅದೇಪ್ರಕಾರ ಮಿಕ್ಕ ಆರು ಮಂದಿಯನ್ನೂ ದೇವರು ನಿಷೇಧಿಸಿದನು. ತರುವಾಯ ದಾವೀದನು ಬಂದಾಗ ಸಮುವೇಲನು ದೇವರಿಂದ ಬೋಧಿಸಲ್ಪಟ್ಟವನಾಗಿ ಅಭಿಷೇಕದ ಎಣ್ಣೆಯನ್ನು ದಾವೀದನಮೇಲೆ ಹೊಯಿದನು. ತಾನು ದಾವೀದನನ್ನು ಅಭಿಷೇಕಿಸಿದ್ದಕ್ಕೆ ಕಾರಣವನ್ನು ಯಾರಿಗೂ ತಿಳಿಸಲಿಲ್ಲ. ದಾವೀದನಾಗಲಿ ಆತನ ಅಣ್ಣಂದಿರಾಗಲಿ ನೆರೆಹೊರೆಯವರಾಗಲಿ ಈ ಅಭಿಷೇಕದ ಅರ್ಥವನ್ನು ಗ್ರಹಿಸಲಿಲ್ಲ. ಕೆಂಪು ಕೂದಲೂ ಹೊಳವು ಕಣ್ಣೂ ಉಳ್ಳವನಾದ ದಾವೀದನು ಯಥಾಪ್ರಕಾರ ತಿರಿಗಿ ತನ್ನ ಮಂದೆಯ ಬಳಿಗೆ ಹೋದನು. ಪ್ರವಾದಿಯ ಈ ಮರ್ಮವನ್ನು ಯಾರು ತಿಳುಕೊಳ್ಳಬಲ್ಲರು? ಆದರೂ ಅಂದಿನಿಂದ ದಾವೀದನ ನಡತೆಯು ಬದಲಾಗಿ ಆತನು ಬುದ್ಧಿಕುಶಲತೆಯಲ್ಲಿಯೂ ಲೌಕಿಕ ಪಾರಮಾರ್ಥಿಕ ಕಾರ್ಯಗಳಲ್ಲಿಯೂ ಅಭಿವೃದ್ಧಿ ಹೊಂದುತ್ತಾಬಂದನು. ಹೀಗೆ ದಾವೀದನು ದೇವರಿಗೆ ಅನುಕೂಲವಾದ ನಡತೆಯಲ್ಲಿ ನೆಲೆಗೊಳ್ಳುತ್ತಾ ಇರುತ್ತಿರಲು ಸೌಲನು ಸದ್ಗುಣವನ್ನು ತೊರೆದು ಕ್ಷೀಣದಶೆಗೆ ಬಂದನು. ಕರ್ತನ ಆತ್ಮವು ಒಬ್ಬನಿಂದ ತೊಲಗಿ ಮತ್ತೊಬ್ಬನನ್ನು ಹೊಂದಿಕೊಂಡಿತು.

## ದಾವೀದನು ಸೌಲನಿಗೆ ಭೇಟಿಯಾದದ್ದು.

[i ಸಮುವೇಲನು xvi. 19—23.]

ಸೌಲನ ಚಿಕ್ಕತನದ ಸೌಮ್ಯಗುಣವೆಲ್ಲಾ ಅಳಿದುಹೋಗಿ ಅವನು ಕ್ಷೀಣದಶೆಗೆ ಬಂದಿದ್ದದರಿಂದ ಅವನು ಆಗಾಗ್ಗೆ ಕೋಪದಿಂದುಂಟಾಗುವ ಚಿತ್ತಭ್ರಮಣೆಗೆ ಪರವಶನಾಗಿ ಬಾಧಿಸಲ್ಪಡುತ್ತಿದ್ದನು. ಸೌಲನ ಮಂತ್ರಿಗಳು ಇಂಥಾ ಸಮಯದಲ್ಲಿ ಆತನಿಗೆ ಉಪಶಾಂತಿಯನ್ನು ಮಾಡಿಸುವದಕ್ಕೆ ಗಾನೋಪಕರಣವೇ ಯುಕ್ತವೆಂದರಿತು ಕಿನ್ನರಿಬಾಜಿಸುವದರಲ್ಲಿ ದಾವೀದನು ಅತಿಸಮರ್ಥನೆಂದು ತಿಳಿದು ಅವನನ್ನು ಕುರಿತು ಅರಸನಿಗೆ ತಿಳಿಯಪಡಿಸಿದರು. ದಾವೀದನು ತನ್ನ ತಂದೆಯ ಅಪ್ಪಣೆಯನ್ನು ಹೊಂದಿ ಬಹುಮಾನಸಮೇತ ಅರಮನೆಗೆ ಬಂದುಸೇರಿದನು. ತಾನು ಅಡವಿಯಲ್ಲಿ ಮಂದೆಯನ್ನು ಕಾಯುತ್ತಾ ಕಿನ್ನರಿಬಾಜಿಸುವದನ್ನು ಕಲಿತುಕೊಂಡಿದ್ದುದು ಈಗ ಉಪಯೋಗಕ್ಕೆ ಬಂದಿತು. ದಾವೀದನ ಗಾಯನದಿಂದ ಅರಸನು ಉಪಶಮನವನ್ನು ಹೊಂದುತ್ತಾಬಂದನು. ಆದಕಾರಣ ಸೌಲನು ಸ್ವಲ್ಪಕಾಲದಲ್ಲಿಯೇ ದಾವೀದನನ್ನು ಬಹಳವಾಗಿ ಪ್ರೀತಿಸತೊಡಗಿದನು. ಮತ್ತು ಅವನನ್ನು ಅರಮನೆಯಲ್ಲಿಯೇ ಇರಿಸಿಕೊಳ್ಳುವ

Digitized by ROJA MUTHIAH RESEARCH LIBRARY



ದಕ್ಕೆ ಅವನ ತಂದೆಯಿಂದ ಅನುಮತಿಯನ್ನು ತರಿಸಿಕೊಂಡು ಅತಿಘನವಾದ ಒಂದು ಉದ್ಯೋಗವನ್ನು ಕೊಟ್ಟನು.

## ಫಿಲಿಷ್ಟಿಯರ ಸಂಗಡ ಯುದ್ಧ; ಗೊಲಿಯಾತನ ಸಂಹಾರ.

[i ಸಮುವೇಲನು xvii.]

ಬಹಳ ಕಾಲದಿಂದ ಫಿಲಿಷ್ಟಿಯರಿಗೂ ಇಸ್ರಾಯೇಲರಿಗೂ ಹೊಗೆ ಹಾಯುವ ಬೆಂಕಿಯಂತಿದ್ದಂಥ ಯುದ್ಧವು ಇದ್ದಕ್ಕಿದ್ದಹಾಗೇ ದೊಡ್ಡ ಜ್ವಾಲೆಯಾಗಿ ಉರಿಯುವದಾಯಿತು. ಹ್ಯಾಗಂದರೆ ಫಿಲಿಷ್ಟಿಯರು ಗಾತು ಊರಿನವನಾದ ಗೊಲಿಯಾತನನು ತಮ್ಮ ರಣವೀರನಾಗಿ ಆರಿಸಿಕೊಂಡು ಇಸ್ರಾಯೇಲರ ಮೇಲೆ ಯುದ್ಧಕ್ಕೆ ಸಿದ್ಧರಾಗಿ ಬಂದರು. ಇಬ್ರಿಯರ ಮೊಳದ ಲೆಕ್ಕದಂತೆ ಈ ಗೊಲಿಯಾತನು ಹೆಚ್ಚುಕಡಿಮೆ ಹತ್ತು ಅಡಿಗಳು ಎತ್ತರವಾಗಿದ್ದನು. ಅವನ ಬಲಸಾಮರ್ಥ್ಯಗಳಿಗೆ ಸರಿಯಾಗಿ ಅವನ ಯುದ್ಧೋಪಕರಣಗಳೂ ಕಬ್ಬಿಣದಿಂದಲೂ ಕಂಚಿನಿಂದಲೂ ಮಾಡಿದುವುಗಳಾಗಿದ್ದವು. ಇವನು ಹಿತ್ತಾಳಿಯ ಕವಚವನ್ನು ತೊಟ್ಟಿದ್ದನು. ಉಭಯ ಸೇನೆಗಳು ಟೆರಿಬಿಂತೆಂಬ ಏಲಾ ತಗ್ಗಿನ ಇಕ್ಕಡೆಗಳಲ್ಲಿದ್ದ ಗುಡ್ಡಗಳ ಮೇಲೆ ದಂಡಿಳಿದಿದ್ದವು. ಈ ತಗ್ಗು ಬೆತ್ಲೆಹೇಮಿಗೆ ಸುಮಾರು ಹದಿನೆಂಟು ಮೈಲುಗಳ ದೂರದಲ್ಲಿದೆ. ಅದು ಈಗ ವಾಡಿಎಸ್ಸಂಟ್ (ಕಗ್ಗಲಿಮರದ ತಗ್ಗು) ಎಂದು ಹೆಸರ್ಗೊಂಡಿದೆ. ಪೂರ್ವಕಾಲದಲ್ಲಿ ದ್ವಂದ್ವಯುದ್ಧಗಳೇ ಬಹಳ ವಾಡಿಕೆಯಾಗಿದ್ದವು. ಇಂಥಾ ವಾಡಿಕೆಯು ಮಹಮ್ಮದನು ಹುಟ್ಟುವದಕ್ಕಿಂತ ಮುಂಚೆ ಅರಾಬ್ಯರಲ್ಲಿ ಸರ್ವಸಾಧಾರಣವಾಗಿತ್ತು. ಅದೇ ವಾಡಿಕೆಯ ಮೇರೆಗೆ ಫಿಲಿಷ್ಟಿಯರ ವೀರನು ತನ್ನ ಸಂಗಡ ಕಾದಾಡುವದಕ್ಕೆ ಒಬ್ಬನನ್ನು ಕಳುಹಿಸಿಕೊಡಿರೆಂದು ಇಸ್ರಾಯೇಲರನ್ನು ಕೆಣಕಿ ಕರೆದನು. ಅವನ ಸಂಗಡ ಕಾದುವವನಿಗೆ ತನ್ನ ಮಗಳನ್ನು ಕೊಟ್ಟು ಮದುವೆಮಾಡುವದಲ್ಲದೆ ಬಹುಮಾನಗಳನ್ನು ಸಹಾ ಕೊಡುತ್ತೇನೆಂದು ಸೌಲರಾಜನು ಹೇಳಿದ್ದಾಗ್ಗೂ ಯಾರೂ ಅವನ ಕೂಡ ಯುದ್ಧಕ್ಕೆ ನಿಲ್ಲಲಾರದೆಹೋದರು. ಹೀಗೆ ಗೊಲಿಯಾತನು ನಾಲ್ವತ್ತು ದಿನಗಳವರೆಗೂ ಯುದ್ಧಕ್ಕೆ ಕರೆಯುತ್ತಿದ್ದನು. ದಾವೀದನ ಅಣ್ಣಂದಿರು ಮೂವರು ದಂಡಿನೊಳಗೆ ಸೇರಿದ್ದರು. ಯಿಶಾಯಿಯು ಮುದುಕನಾದುದರಿಂದ ದಂಡಿನ ಉದ್ಯೋಗವನ್ನು ಬಿಟ್ಟಿದ್ದನು. ದಾವೀದನು ಕೂಡ ತನ್ನ ಮಂದೆಯನ್ನು ಕಾಯುವದಕ್ಕೆ ಹೊರಟುಹೋಗಿದ್ದಹಾಗೆ ತೋರುತ್ತೆ. ದಾವೀದನು ತನ್ನ ತಂದೆಯ ಅಪ್ಪಣೆಯ ಮೇರೆಗೆ ತನ್ನ ಅಣ್ಣಂದಿರಿಗೆ ಭೋಜನಪದಾರ್ಥಗಳನ್ನು ಸಿದ್ಧಮಾಡಿಕೊಂಡು ಅವರ ಕ್ಷೇಮಸಮಾಚಾರವನ್ನು ವಿಚಾರಿಸಿಕೊಂಡು ಬರುವ ಬಗ್ಯೆ ಹೋದನು. ಅವನು ಯುದ್ಧರಂಗಕ್ಕೆ ಬಂದಾಗ ಆ ಫಿಲಿಷ್ಟಿಯನು ಕಾಳಗಕ್ಕೆ ಕರೆಯುವದನ್ನು ಕೇಳಿ ತಾನೇ ಅವನ ಸಂಗಡ ಕಾದುವೆನೆಂದು ತಿಳಿಸಿದಾಗ ಸೌಲನು ದಾವೀದನಿಗೆ ತನ್ನ ಆಯುಧಗಳನ್ನು ತೊಡಿಸಿದನು. ಆದರೆ ಇಂಥಾ ಆಯುಧಗಳ ಅಭ್ಯಾಸವು ಅವನಿಗಿಲ್ಲದ್ದರಿಂದ ಗೊಲ್ಲನ ಆಯುಧಗಳಾದ ಕೋಲು ಕವಣೆಗಳಿಂದಲೇ ಅವನನ್ನು ಎದುರಿಸುವೆನೆಂದು ಸಿದ್ಧವಾಗಿ ಹೊರಟನು. ದಾವೀದನು ಗುರಿಇಟ್ಟು ಎಸೆದ ಕಲ್ಲು ಗೊಲಿಯಾತನ ಹಣೆಗೆ ತಾಗಿದ್ದರಿಂದ ಅವನು ಸ್ತಬ್ಧನಾಗಿ ನೆಲಕ್ಕೆ ಬಿದ್ದನು. ಆಗ ದಾವೀದನು

ಓಡಿಹೋಗಿ ಆ ಫಿಲಿಷ್ಟಿಯನ ತಲೆಯನ್ನು ಅವನ ಕತ್ತಿಯಿಂದಲೇ ಖಂಡ್ರಿಸಿ ಅದನ್ನು ಜಯಚಿನ್ಹೆಯಾಗಿ ಬೆತ್ಲೆಹೇಮಿಗೋ ಇಲ್ಲವೆ ಗಿಬಿಯಕ್ಕೋ ತಕ್ಕೊಂಡು ಹೋದನು. ಅವನ ಕವಚವನ್ನು ಕೂಡ ಕಿತ್ತುಕೊಂಡನು. ಆಗ ಇಸ್ರಾಯೇಲರು ಧೈರ್ಯಗೊಂಡು ಹಿಮ್ಮೆಟ್ಟಿ, ಚದರಿ ಓಡಿ ಹೋಗುತ್ತಿದ್ದ ಫಿಲಿಷ್ಟಿಯರನ್ನು ಅಲ್ಲಿಗೆ ಅತ್ಯಂತ ಸಮೀಪವಾಗಿದ್ದ ಎಕ್ರೋನು ಗಾತುಪಟ್ಟಣಗಳವರೆಗೂ ಬೆನ್ನಟ್ಟಿ ಓಡಿಸಿ ಅವರಲ್ಲನೇಕರನ್ನು ಕೊಂದರು. ಮೊದಲು ಸೌಲನಾಗಲಿ ಅವನ ಸೇನಾನಿಯಾದ ಅಬ್ನೇರನಾಗಲಿ ದಾವೀದನನ್ನು ಗುರ್ತುಹಿಡಿಯಲಿಲ್ಲ. ಆದರೆ ಗೊಲಿಯಾತನನ್ನು ಕೊಂದವನು ದಾವೀದನೆಂದು ಸೌಲನಿಗೆ ತಿಳಿಯಬಂದಾಗ ಅವನನ್ನು ಅರಮನೆಗೆ ಕರೆದುಕೊಂಡು ಹೋದನು. ಇಲ್ಲಿ ಸೌಲನ ಮಗನಾದ ಯೋನತಾನನಿಗೂ ದಾವೀದನಿಗೂ ತುಂಬಾ ಸ್ನೇಹವು ಬೆಳೆಯಿತು. ಯೋನತಾನನು ತನ್ನ ತಂದೆಗೆ ಬದಲಾಗಿ ದಾವೀದನೇ ಅರಸನಾಗಲು ಯೋಗ್ಯನೆಂದು ಅರಿತು ಅವನಿಗೆ ತನ್ನ ಸ್ವಂತ ಉಡುಪನ್ನೂ ಕವಚವನ್ನೂ ತೊಡಿಸಿದನು. ಹೀಗೆ ತನ್ನ ಸ್ವಂತ ಉಡುಪನ್ನು ಅವನಿಗೆ ತೊಡಿಸಿದ್ದು ತನ್ನ ಅಧಿಕಾರಪರಿತ್ಯಾಗಸೂಚನೆಯೇ ಹೊರತು ಮತ್ತೇನೂ ಅಲ್ಲವು.

## ದಾವೀದನು ಸೌಲನ ಮತ್ಸರಕ್ಕೆ ಗುರಿಯಾದದ್ದು.

[i ಸಮುವೇಲನು xviii. 6—16.]

ಫಿಲಿಷ್ಟಿಯರ ಪಾಳ್ಯವನ್ನು ಸುಲುಕೊಂಡು ಇಸ್ರಾಯೇಲರು ಮರಳಿ ಬರುತ್ತಿರುವಾಗ ವಾಡಿಕೆಯ ಮೇರೆಗೆ ಆಯಾ ಊರು ನಾಡುಗಳ ಸ್ತ್ರೀಯರಲ್ಲನೇಕರು ಜಯಶಾಲಿಗಳಾದ ಇವರನ್ನು ಎದುರ್ಗೊಂಡು ವಂದಿಸಿ ಅವರ ಜಯವನ್ನು ಗೀತಗಳಿಂದಲೂ ನರ್ತನದಿಂದಲೂ ಕೊಂಡಾಡಿದರು. ಆ ದಿನ ರಾಕ್ಷಸನ ಹಾಗೆ ಇದ್ದ ಗೊಲಿಯಾತನನ್ನು ಕೊಂದ ಸಾಹಸಕಾರ್ಯವು ನಡೆದುದರಿಂದಲೂ ಶತ್ರುಗಳನೇಕರು ಕೊಲ್ಲಲ್ಪಟ್ಟಿದ್ದದರಿಂದಲೂ ಈ ಸ್ತ್ರೀಯರು ಆಗಲೇ ಒಂದು ಚಿಕ್ಕಪದವನ್ನು ಕಟ್ಟಿ

ಸೌಲನು ಸಾವಿರ ಮಂದಿಯನ್ನು ಕೊಂದನು
ದಾವೀದನು ಹತ್ತುಸಾವಿರ ಮಂದಿಯನ್ನು ಕೊಂದನು

ಎಂದು ಹಾಡಿದರು. ಈ ಗೀತದಲ್ಲಿ ದಾವೀದನಿಗೆ ಅಧಿಕಘನವು ಕೊಡಲ್ಪಟ್ಟದರಿಂದ ಸೌಲನಿಗೆ ತುಂಬಾ ಮನೋವ್ಯಥೆ ಆಯಿತು. ಯಾಕಂದರೆ ಅವನು ತನ್ನ ಶೌರ್ಯದಿಂದ ರಾಜ್ಯವನ್ನು ಸಂಪಾದಿಸಿದನು. ಆ ಕಾಲದಲ್ಲಿ ಒಬ್ಬನು ರಾಜ್ಯವನ್ನು ಉಳಿಸಿಕೊಳ್ಳಬೇಕಾಗಿದ್ದರೆ ಸ್ವಂತ ಧೈರ್ಯ ಪರಾಕ್ರಮಗಳಿಂದಲೆ ಹೊರತು ಜನ್ಮವಿಶೇಷದಿಂದ ಸಾಧ್ಯವಾಗುತ್ತಿರಲಿಲ್ಲ. ಹೀಗೆ ದಾವೀದನ ಪರಾಕ್ರಮವನ್ನು ಸೌಲನು ನೋಡಿ ತನಗೆ ಬದಲಾಗಿ ಹುಡುಗನಾದ ಇವನು ಅರಸನಾಗುವದರಲ್ಲಿ ಸಂಶಯವಿಲ್ಲವೆಂದು ತಿಳುಕೊಂಡನು. ಈ ಪ್ರಕಾರ ಅವನಲ್ಲಿ ಹುಟ್ಟಿದ ಅಸೂಯೆಯೂ ಕೋಪವೂ ಚಿತ್ತಭ್ರಮಣೆಯಾಗಿ ಪರಿಣಮಿಸಿತು. ಆಗ ದಾವೀದನು ಮುಂಚಿನಂತೆ ಸೌಲನ ಉಪಶಮನಕ್ಕಾಗಿ ಕಿನ್ನರಿಯನ್ನು ಬಾಜಿಸ ತೊಡಗಲು, ದಾವೀದನ ಕಾರ್ಯವು ವಿಫಲವಾದ



ದ್ದಲ್ಲದೆ ಸೌಲನು ಕೋಪಾವೇಶಪರವಶನಾಗಿ ತನ್ನ ಹತ್ತರ ರಾಜದಂಡಕ್ಕೆ ಬದಲಾಗಿಟ್ಟಿದ್ದ ಈಟಿಯನ್ನು ದಾವೀದನ ಮೇಲೆ ಎಸೆದನು. ಆದರೆ ದಾವೀದನು ಅತಿ ಚಮತ್ಕಾರದಿಂದ ತಪ್ಪಿಸಿಕೊಂಡದನ್ನು ನೋಡಿ ಸೌಲನು ದಾವೀದನಿಗೆ ಭಯಪಟ್ಟು ಅವನನ್ನು ತನ್ನ ಸಮುಖದ ಸೇವೆಯಿಂದ ಬಿಡಿಸಿ ದಂಡಿನಲ್ಲಿ ಸಾವಿರ ಮಂದಿಗೆ ಪ್ರಧಾನನನ್ನಾಗಿ ನೇಮಿಸಿದನು. ಈ ಉದ್ಯೋಗದಲ್ಲಿ ದಾವೀದನು "ಮಹಾ ಬುದ್ಧಿವಂತನಾಗಿ ನಡೆದು" ಫಿಲಿಷ್ಟಿಯರ ಸಂಗಡ ನಿರಂತರವಾಗಿ ಯುದ್ಧಗಳನ್ನು ಮಾಡಿ ಜಯಶಾಲಿಯಾಗುತ್ತಾ ಬಂದುದರಿಂದ ಪ್ರಜೆಗಳೆಲ್ಲರು ಇವನನ್ನು ಅಧಿಕಾಧಿಕವಾಗಿ ಸನ್ಮಾನಿಸಿದರು.

## ದಾವೀದನನ್ನು ಕೊಲ್ಲುವದಕ್ಕೆ ಸೌಲನು ಬಗೆದ ಕುಯುಕ್ತಿಗಳು.

[i ಸಮುವೇಲನು xviii. 17—30.]

ತರುವಾಯ ಸೌಲನು ದಾವೀದನನ್ನು ಕೊಲ್ಲುವದಕ್ಕೆ ಬಹು ನೀಚವಾದ ಒಂದು ಉಪಾಯವನ್ನು ಬಗೆದನು. ಏನಂದರೆ ದಾವೀದನು ಯುದ್ಧಾಸಕ್ತನಾಗಿರುವದರಿಂದ ಅವನನ್ನು ಯುದ್ಧದಲ್ಲಿಯೇ ಕೊಲ್ಲಿಸಬೇಕೆಂದು ಯೋಚಿಸಿ, ಫಿಲಿಷ್ಟಿಯರ ಯುದ್ಧದಲ್ಲಿ ದಾವೀದನು ಜಯಶಾಲಿಯಾಗಿ ಹೆಸರ್ಗೊಂಡರೆ ತನ್ನ ಮಗಳಾದ ಮೆರಾಬಳನ್ನು ಕೊಡುತ್ತೇನೆಂದು ವಾಗ್ದತ್ತ ಮಾಡಿದನು. ತನ್ನ ಮಗಳ ಆಶೆಯಿಂದ ದಾವೀದನು ಯುದ್ಧದಲ್ಲಿ ಪ್ರಾಣವಿಪತ್ತಿನ ಮೇಲೆಯೂ ಲಕ್ಷ್ಯವಿಡದೆ ಯುದ್ಧಮಾಡಿ ಕಡೆಗೆ ಸಾಯುವನೆಂದು ಸೌಲನು ಈ ಉಪಾಯವನ್ನು ಮಾಡಿದನು. ಆದರೆ ಮೆರಾಬಳು ಪ್ರಬುದ್ಧೆಯಾದಾಗ ಅವಳನ್ನು ಅಬೆಲ್‌ಮಹೋಲವೆಂಬ ಕುಲದವನೊಬ್ಬನಿಗೆ ಮದುವೆ ಮಾಡಿಕೊಟ್ಟನು. ಈ ಮನುಷ್ಯನನ್ನು ಕುರಿತು ಇಷ್ಟಕ್ಕಿಂತ ಹೆಚ್ಚಾಗಿ ಚರಿತ್ರೆಯಲ್ಲಿ ನಾವೇನೂ ಕಾಣೆವು. ಇಷ್ಟಾದರೂ ಸೌಲನು ತನ್ನ ಕುಯುಕ್ತಿಯನ್ನು ಬಿಡಲಿಲ್ಲ. ತನ್ನ ಕಿರೀ ಮಗಳಾದ ಮೀಕಳಿಗೆ ದಾವೀದನ ಮೇಲೆ ಪ್ರೀತಿಯಿದೆಯೆಂದು ತಿಳಿದು, ತನ್ನ ಮಗಳನ್ನು ವಿವಾಹಕ್ಕೆ ಕೇಳುವ ಹಾಗೆ ದಾವೀದನನ್ನು ಪ್ರೇರೇಪಿಸಿರೆಂದು ತನ್ನ ಮಂತ್ರಿಗಳಿಗೆ ಹೇಳಿದನು. ಪೂರ್ವಕಾಲದಲ್ಲಿ ಅಳಿಯನಾಗ ಬೇಕೆಂದಿರುವವನು ತನ್ನ ಹೆಂಡತಿಯನ್ನು ಕ್ರಯಕೊಟ್ಟು ಕೊಳ್ಳುವ ಪದ್ಧತಿ ಇತ್ತು. ತಾನು ವಿವಾಹವಾಗುವ ಸ್ತ್ರೀಯ ತಂದೆಯು ಎಷ್ಟು ಊಚಸ್ಥಿತಿಯಲ್ಲಿರುವನೋ ಅಷ್ಟು ಭಾರಿ ಒಳುವಳಿಯನ್ನು ಕೊಡಬೇಕಾಗಿತ್ತು. ಆದರೆ ದಾವೀದನ ಮನೆತನವು ಅಷ್ಟು ನೆಮ್ಮದಿಯಾಗಿರಲಿಲ್ಲವಾದುದರಿಂದ ಅರಸನ ಮಗಳಿಗೆ ಸರಿಯಾದ ಕನ್ಯಾಶುಲ್ಕವನ್ನು ಕೊಡಲಶಕ್ತನಾಗಿದ್ದೇನೆಂದು ತಿಳಿಯ ಮಾಡಿದನು. ಸೌಲನು ಇದನ್ನು ಕೇಳಿ, ದಾವೀದನು ನೂರು ಮಂದಿ ಫಿಲಿಷ್ಟಿಯರನ್ನು ಕೊಂದು ಅದಕ್ಕೆ ಗುರುತು ತಂದು ತೋರಿಸಿದರೆ ತನ್ನ ಮಗಳನ್ನು ಕೊಡುತ್ತೇನೆಂದನು. ದಾವೀದನು ತಕ್ಷಣವೇ ಹೋಗಿ ನೂರು ಮಂದಿ ಫಿಲಿಷ್ಟಿಯರನ್ನು ಕೊಂದು ಅವರ ತಲೆಗಳನ್ನು ತಂದು ಅರಸನಿಗೆ ತೋರಿಸಲು ಅವನು ವಿಸ್ಮಿತನಾದನು. ಸೌಲನು ದಾವೀದನನ್ನು ಕೊಲ್ಲುವದಕ್ಕೆ ಮಾಡಿದ ಕುಯುಕ್ತಿಗಳ ದೆಸೆಯಿಂದ ಪ್ರಜೆಗಳು ಅವನನ್ನು ಮೆಚ್ಚಿಕೊಂಡು ಹೆಚ್ಚೆಚ್ಚಾಗಿ ಪ್ರೀತಿಮಾಡುವದಕ್ಕೆ ಕಾರಣ

Digitized by ROJA MUTHIAH RESEARCH LIBRARY

ವಾಯಿತು. ಸೌಲನಾದರೋ ದಾವೀದನಿಗೆ ಮತ್ತಷ್ಟು ಭಯಪಟ್ಟು ಅವನನ್ನು ಹೆಚ್ಚಾಗಿ ಹಗೆ ಮಾಡ ತೊಡಗಿದನು.

### ದಾವೀದನು ರಾಮದಲ್ಲಿದ್ದ ಸಮುವೇಲನ ಬಳಿಗೆ ಓಡಿ ಹೋದದ್ದು.

[i ಸಮುವೇಲನು xix.]

ಸೌಲನು ದಾವೀದನ ಮೇಲೆ ತನಗಿದ್ದ ವಿರೋಧವನ್ನು ಬಹು ಕಾಲ ಮರೆಮಾಡಿಕೊಂಡಿರುವದಕ್ಕಾಗದೆ, ದಾವೀದನನ್ನು ಕೊಲ್ಲಿಸಬೇಕೆಂದು ತನ್ನ ಮಂತ್ರಿಗಳಿಗೆ ಬಹಿರಂಗವಾಗಿ ತಿಳಿಸಿದನು. ಇದನ್ನು ದಾವೀದನು ಕೇಳಿ ಅರಮನೆಯನ್ನು ಬಿಟ್ಟು ಓಡಿ ಹೋಗುವದೇ ಒಳ್ಳೇದೆಂದು ಗ್ರಹಿಸಿದನು. ಆದರೆ ಯೋನತಾನನು ಮಿತ್ರನಾದ ದಾವೀದನಿಂದ ಅಗಲುವದಕ್ಕೆ ಇಷ್ಟಪಡದೆ, ತನ್ನ ತಂದೆಯು ಇಂಥಾ ನೀಚಾಲೋಚನೆಯನ್ನು ಮಾಡಿದ್ದಾನೆಂದು ತೀರ್ಮಾನಿಸುವದಕ್ಕೆ ಮನಸ್ಸು ಒಡಂಬಡದೆ ಒಂದು ಉಪಾಯವನ್ನು ಮಾಡಿದನು. ಹ್ಯಾಗಂದರೆ, ಯೋನತಾನನು ದಾವೀದನನ್ನು ಒಂದು ಸ್ಥಳದಲ್ಲಿ ಅಡಗಿಕೊಂಡಿರುವಂತೆ ಮಾಡಿ ತಂದೆಯನ್ನು ಆ ಸ್ಥಳಕ್ಕೆ ಕರೆತಂದು ದಾವೀದನ ಯೋಗ್ಯತೆಯನ್ನೂ ಸಾಹಸಕಾರ್ಯಗಳನ್ನೂ ಶ್ರುತಪಡಿಸಿದನು. ಆಗ ಸೌಲನು ತನ್ನ ಮನಸ್ಸನ್ನು ತಿರುಗಿಸಿಕೊಂಡು ಇನ್ನು ಮೇಲೆ ದಾವೀದನನ್ನು ಕೊಲ್ಲಹುಡುಕುವದಿಲ್ಲವೆಂದು ಯೋನತಾನನಿಗೆ ಆಣೆಯಿಟ್ಟು ಹೇಳಿದನು. ಹೀಗೆ ದಾವೀದನು ಸೌಲನ ಬಾಯಿಂದಲೇ ಹೊರಟ ಅಭಯವಾಕ್ಯನ್ನು ಕೇಳಿ ತಿರಿಗಿ ಅರಮನೆಯಲ್ಲಿ ಮೊದಲಿನಂತೆ ಉದ್ಯೋಗಕ್ಕೆ ಬಂದನು. ಕೊಂಚಕಾಲದ ವರೆಗೂ ದಾವೀದನಿಗೆ ಸಮಾಧಾನವಿತ್ತು. ಆದರೆ ತಿರುಗಿ ಫಿಲಿಷ್ಟಿಯರಿಗೂ ಇಸ್ರಾಯೇಲರಿಗೂ ಉಂಟಾದ ಯುದ್ಧದೊಳಗೆ ದಾವೀದನಿಗೆ ಪುನಃಪುನಃ ಜಯಪ್ರದವಾಗಲು ಸೌಲನಿಗೆ ಹುಚ್ಚು ತಲೆಗೇರಿತು. ಸೌಲನ ರೋಷಾವೇಶದ ಚಿತ್ತಭ್ರಮಣೆಯನ್ನು ಶಾಂತಿಪಡಿಸುವದಕ್ಕೆ ದಾವೀದನು ತನ್ನ ವೀಣೆಯನ್ನು ಬಾಜಿಸುತ್ತಿರುವಾಗ ಅವನ ಮೇಲೆ ಸೌಲನು ತನ್ನ ಈಟಿಯನ್ನು ಎಸೆಯಲು, ದಾವೀದನು ತಿರಿಗಿ ತಪ್ಪಿಸಿಕೊಂಡು ತನ್ನ ಮನೆಗೆ ಓಡಿ ಹೋದನು. ಆ ದಿನ ರಾತ್ರಿಯಲ್ಲಿ ಸೌಲನು ತನ್ನ ಅಧಿಕಾರಬಲವನ್ನು ಪ್ರಯೋಗಿಸಿ ದಾವೀದನ ಹೆಸರನ್ನು ಅಳಿಸಿಬಿಡಲುದ್ಯುಕ್ತನಾದನು. ಆದರೆ ರಾತ್ರಿಯಲ್ಲಿ ಒಬ್ಬನು ಸಕುಟುಂಬಿಯಾಗಿರುವ ವೇಳೆಯಲ್ಲಿ ಒಳಗೆ ಹೊಕ್ಕು ಬಲಾತ್ಕಾರ ನಡಿಸುವದು ಪದ್ಧತಿಗೆ ವಿರೋಧವಾಗಿದ್ದುದರಿಂದ ಅಂದು ರಾತ್ರಿ ಅರಸನು ದಾವೀದನ ಮನೆಯ ಸುತ್ತಲು ದೂತರನ್ನು ಕಾವಲಾಗಿಟ್ಟು ಹೊತ್ತಾರೆ ಅವನನ್ನು ಹಿಡಿಯಲುದ್ದೇಶಿಸಿದನು. ಆದರೆ ಅರಸನ ಉದ್ದೇಶವು ಮೀಕಳಿಗೆ ತಿಳಿದು ಬಂದಾಗ ಅವಳು ದಾವೀದನನ್ನು ಮನೆಯ ಆಚೆಕಡೆ ಕಿಟಿಕಿಯಿಂದ ಇಳಿಸಿ ಕಳುಹಿಸಿಬಿಟ್ಟಳು. ಮತ್ತು ಹೊತ್ತಾರೆ ತನ್ನ ಮನೆಯಲ್ಲಿದ್ದ ಒಂದು ಮರದ ವಿಗ್ರಹವನ್ನು ದಾವೀದನು ಮಲಗಿದ್ದ ಮಂಚದ ಮೇಲೆ ಮಲಗಿಸಿ ಆ ಗೊಂಬೆಯ ತಲೆಯನ್ನು ಕುರಿಯ ಉಣ್ಣೆಯ ದುಪ್ಪಟಿಯಿಂದ ಮುಚ್ಚಿದ್ದಳು. ಸೌಲನ ದೂತರು ಆ ಮನೆಯೊಳಗೆ

Digitized by ROJA MUTHIAH RESEARCH LIBRARY



ಪ್ರವೇಶಿಸಿದಾಗ ಅವಳು ಅವರಿಗೆ ಮಂಚವನ್ನು ತೋರಿಸಿ, ದಾವೀದನು ಅಸ್ವಸ್ಥನಾಗಿದ್ದಾನೆಂದು ಹೇಳಿದಳು. ದೂತರು ಈ ವರ್ತಮಾನವನ್ನು ಅರಸನಿಗೆ ತಿಳಿಸಿದಾಗ ಆತನು—ದಾವೀದನು ನಡೆಯಲಾರದಷ್ಟು ಬಲಹೀನನಾಗಿದ್ದರೆ, ಆ ಮಂಚದೊಂದಿಗೆ ಅವನನ್ನು ಹೊತ್ತುಕೊಂಡು ಒರುವ ಹಾಗೆ ತಿರಿಗಿ ತನ್ನ ದೂತರನ್ನು ಕಳುಹಿಸಿದನು. ದೂತರು ತಿರಿಗಿ ಬಂದು ಮೀಕಳ ಕುಯುಕ್ತಿಯನ್ನು ಕಂಡುಕೊಂಡರು. ಇಷ್ಟರಲ್ಲಿ ದಾವೀದನು ಬಹುದೂರ ತಪ್ಪಿಸಿಕೊಂಡು ಹೋಗಿದ್ದನು. ಹೀಗೆ ತಪ್ಪಿಸಿಕೊಂಡು ಆತನು ಸೌಲನ ಸ್ವಗ್ರಾಮವಾಗಿದ್ದ ಗಿಬಿಯದ ಪಶ್ಚಿಮಕ್ಕೆ ಒಂದು ಹರದಾರಿ ದೂರದಲ್ಲಿ ದಿನ್ನೆಯ ಮೇಲಿದ್ದ ರಾಮಕ್ಕೆ ಸಮುವೇಲನ ಬಳಿಗೆ ಬಂದನು. ಸೌಲನಿಗೂ ದಾವೀದನಿಗೂ ನಡೆದ ಸಮಾಚಾರವನ್ನೆಲ್ಲಾ ಕೇಳಿ ತಿಳುಕೊಂಡು ಸಮುವೇಲನು ದಾವೀದನನ್ನು ನಯೋತ್ ಎಂಬುವ ಪ್ರವಾದಿಗಳ ಶಾಲೆಯಲ್ಲಿ ಸೇರಿಸಿಕೊಂಡನು ದಾವೀದನು ಸಮುವೇಲನ ಬಳಿಯಲ್ಲಿದ್ದಾನೆಂದು ಸೌಲನಿಗೆ ಸುದ್ದಿ ಮುಟ್ಟಿದಾಗ ಅವನನ್ನು ಹಿಡಿದು ತರಬೇಕೆಂದು ಭಟರ ಗುಂಪುಗಳನ್ನು, ಒಂದು ಗುಂಪಿನ ಹಿಂದೆ ಮತ್ತೊಂದು, ಹೀಗೆ ಮೂರು ಗುಂಪುಗಳನ್ನು ಕಳುಹಿಸಿದನು. ಆದರೆ ಇವರೆಲ್ಲರು ಸಮುವೇಲನ ಶಿಷ್ಯರ ಮತಾಸಕ್ತಿಯ ಬಲದಿಂದ ಆವೇಶವುಳ್ಳವರಾಗಿ ತಾವು ಬಂದ ಕಾರ್ಯವನ್ನು ಮರೆತುಬಿಟ್ಟರು. ಕಡೆಯಲ್ಲಿ ಸೌಲನೇ ಅವರನ್ನು ಹಿಡಿಯಲುದ್ದೇಶಿಸಿ ಹೊರಟು ಆ ಎರಡು ಊರುಗಳ ನಡುವೆ ಇದ್ದ ತಗ್ಗನ್ನು ಸೇರಿದಾಗ ತನ್ನ ಭಟರ ಹಾಗೆಯೇ ತಾನೂ ಆಂತರ್ಯಭಕ್ತಿಯಿಂದ ಪರವಶನಾಗಿ ಒಂದು ಹಗಲು ಒಂದು ಇರುಳು ದಿಗಂಬರನಾಗಿ ಬಿದ್ದಿದ್ದನು. ಸೌಲನಿಗಾದ ಈ ಅಪೂರ್ವ ಕಾರ್ಯದಿಂದ ಇಸ್ರಾಯೇಲರೊಳಗೆ "ಸೌಲನು ಕೂಡ ಪ್ರವಾದಿಗಳಲ್ಲಿ ಇದ್ದಾನೋ ?" ಎಂಬುವ ಮಾತು ವಾಡಿಕೆಗೆ ಬಂತು.

[ಪ್ರಾಯಶಃ XI ನೇ ಕೀರ್ತನೆಯನ್ನು ಈ ಸಂದರ್ಭದಲ್ಲಿಯೇ ದಾವೀದನು ರಚಿಸಿದನೆಂದು ತೋರುತ್ತೆ. ಆದಕಾರಣ ಅದನ್ನು ಓದುವಾಗ ದಾವೀದನ ಚರಿತ್ರೆಯ ಈ ಭಾಗವನ್ನು ಅದರೊಂದಿಗೆ ಓದತಕ್ಕದ್ದು.]

### ದಾವೀದನ ವಿಷಯ ಯೋನತಾನನು ತನ್ನ ತಂದೆಯ ಬಳಿಯಲ್ಲಿ ಮಾಡಿದ ಕಡೇ ಪ್ರಯತ್ನ.

[i ಸಮುವೇಲನು xx]

ಸಮುವೇಲನು ಸಹಾ ತನಗೆ ತಕ್ಕ ಆಶ್ರಯವನ್ನು ಕೊಡಲಾರನೆಂದು ದಾವೀದನಿಗೆ ಶೀಘ್ರದಲ್ಲಿಯೇ ಗೊತ್ತಾಯಿತು. ಯೋನತಾನನು ಅರಸನ ಹತ್ತರ ತನಗಾಗಿ ಮಧ್ಯಸ್ತಮಾಡುವದೊಂದೇ ತನಗೆ ಅಭಯವೆಂದು ದಾವೀದನು ತಿಳುಕೊಂಡನು. ಆದಕಾರಣ ದಾವೀದನು ಯೋನತಾನನನ್ನು ರಹಸ್ಯವಾಗಿ ಸಂಧಿಸಲಾಗಿ ಇಬ್ಬರು ನಿರಂತರವಾದ ಸ್ನೇಹಿತರಾಗಿದ್ದು ಪರಸ್ಪರ ಸಹಾಯಮಾಡುವದಕ್ಕೂ ಮತ್ತು ತಮ್ಮ ತರುವಾಯ ವಂಶಪಾರಂಪರ್ಯವಾಗಿ ಸಹಾಯಮಾಡುವದಕ್ಕೂ ಬಂಧಿತರಾಗಿದ್ದೇವೆಂದು ಒಬ್ಬರಿಗೊಬ್ಬರು "ಯೆಹೋವನೇ ಸಾಕ್ಷಿ"

ಎಂದು ಪ್ರತಿಜ್ಞೆ ಮಾಡಿಕೊಂಡರು. ತದನಂತರ ಸೌಲನ ಹಗೆತನವು ದೀರ್ಘವಾದದ್ದೋ ಅಲ್ಲವೋ ಎಂದು ಕಂಡುಕೊಳ್ಳುವಬಗ್ಯೆ ಯೋನತಾನನು ತನ್ನ ತಂದೆಯ ಹತ್ತರ ದಾವೀದನ ವಿಷಯವಾಗಿ ಮಾತನಾಡಬೇಕೆಂದು ಏರ್ಪಾಟುಮಾಡಿಕೊಂಡರು. ಮಾರಣೆ ದಿನ ಶುದ್ಧ ಪಾಡ್ಯದ ಹಬ್ಬವಾದುದರಿಂದ ಔತಣಕ್ಕೆ ದಾವೀದನು ಬಾರದೆ ನಿಂತುಬಿಡುವಂತೆಯೂ ಅರಸನು ದಾವೀದನ ಪ್ರಸ್ತಾಪ ತೆಗೆದರೆ ಅವನು ವರ್ಷಾಂತದ ಬಲಿಗೋಸ್ಕರ ಸ್ವಂತ ಊರಾದ ಬೆತ್ಲೆಹೇಮಿಗೆ ಹೋಗಿದ್ದಾನೆಂದು ಯೋನತಾನನು ತಿಳಿಸಬೇಕೆಂತಲೂ, ಈ ಪ್ರಕಾರ ಅರಸನ ಮನಸ್ಸನ್ನು ಕಂಡುಕೊಳ್ಳಬೇಕೆಂತಲೂ ಕ್ಲುಪ್ತಮಾಡಿಕೊಂಡರು. ಇಷ್ಟರೊಳಗೆ ದಾವೀದನು ಮೊದಲು ಅಡಗಿಕೊಂಡಿದ್ದ "ಆ ಕಲ್ಲುಕುಪ್ಪೆಗಳ" ಬಳಿಯ (xix. 2) ಅಡಗಿಕೊಂಡಿರುವಂತೆಯೂ ಯೋನತಾನನು ಪ್ರಯತ್ನದ ಫಲಾಫಲಗಳನ್ನು ಒಂದು ಸಂಜ್ಞೆಯಿಂದ ತಿಳಿಸುವಂತೆಯೂ ಗೊತ್ತುಮಾಡಿಕೊಂಡರು ಆ ಸಂಜ್ಞೆ ಏನಂದರೆ —ಯೋನತಾನನು ಅಂಬುಗಳನ್ನು ಕಲ್ಲುತಿಟ್ಟೆಯ ಕಡೆಗೆ ಅದರ ಆಚೆಗಾದರೂ ಈಚೆಗಾದರೂ ಬೀಳುವಂತೆ ಎಸೆಯಬೇಕು. ಆಚೆ ಬಿದ್ದರೆ ದಾವೀದನು ಓಡಿಹೋಗತಕ್ಕದ್ದು, ಈಚೆ ಬಿದ್ದರೆ ಅರಮನೆಗೆ ಹಿಂತಿರುಗಿ ಬರಬಹುದು ಎಂಬುದೇ ಆ ಸಂಜ್ಞೆ. ಅತ್ತ ಅರಮನೆಯಲ್ಲಿ ದಾವೀದನು ಸಮುಖದ ಆರೋಗಣೆಗೆ ಬಾರದೆಹೋದದ್ದು ಮೊದಲನೆ ದಿನ ಪ್ರಸ್ತಾಪಕ್ಕೆ ಬರಲಿಲ್ಲ. ಬರುವದಕ್ಕೆ ಆಕಸ್ಮಾತ್ತಾದ ಯಾವದೋ ಒಂದು ಸೂತಕ ಕಳೆಯುವ ಆಚಾರದಿಂದ ಅಭ್ಯಂತರಿಸಲ್ಪಟ್ಟಿರಬಹುದೆಂದು ಅರಸನು ನೆನಸಿಕೊಂಡನು. ಮಾರಣೆ ದಿನ ದಾವೀದನು ಕುಳಿತುಕೊಳ್ಳುತ್ತಿದ್ದ ಸ್ಥಳವು ತಿರಿಗಿ ಬರಿದಾಗಿರುವದನ್ನು ಸೌಲನು ಕಂಡು ಇದಕ್ಕೆ ಕಾರಣವೇನೆಂದು ತನ್ನ ಮಗನನ್ನು ಕೇಳಿದನು. ಅದಕ್ಕೆ ಯೋನತಾನನು ತಾನು ದಾವೀದನ ಸಂಗಡ ಮಾಡಿಕೊಂಡ ಏರ್ಪಾಟಿನ ಪ್ರಕಾರ ಪ್ರತ್ಯುತ್ತರಕೊಟ್ಟನು. ಆ ಕ್ಷಣವೇ ಸೌಲನು ಕೋಪೋದ್ದೀಪಿತನಾಗಿ ತನ್ನ ಮಗನನ್ನು ಬೈದು ನೀನು ಯಿಶಾಯಿಯ ಮಗನ ಸ್ನೇಹವನ್ನು ಕೋರಿದ್ಧೀ ಎಂತ ಹೇಳಿ ತನ್ನ ಕೈಯಲ್ಲಿದ್ದ ಈಟಿಯನ್ನು ಯೋನತಾನನ ಮೇಲೆ ಎಸೆದನು. ಯೋನತಾನನು ಅತಿಕೋಪವುಳ್ಳವನಾಗಿ ಭೋಜನದಲ್ಲಿ ಒಂದು ತುತ್ತನ್ನಾದರೂ ಮುಟ್ಟದೆ ಎದ್ದು ದಾವೀದನು ಅಡಗಿಕೊಂಡಿದ್ದ ಸ್ಥಳಕ್ಕೆ ಬಂದನು. ಸುತ್ತುಮುತ್ತಲೂ ಯಾರೂ ಇಲ್ಲದ್ದರಿಂದ ಈ ಇಬ್ಬರು ಸ್ನೇಹಿತರೂ ಸೇರಿ ಅತಿಪ್ರೀತಿಯಿಂದ ಮಾತನಾಡಿ ಒಬ್ಬರಿಗೊಬ್ಬರು ಧೈರ್ಯ ಹೇಳಿಕೊಂಡು ಅಗಲಿಹೋದರು. ದಾವೀದನು ಗಿಬಿಯದಿಂದ ತಪ್ಪಿಸಿಕೊಂಡು ಅತಿತ್ವರೆಯಾಗಿ ಓಡಿಹೋದನು.

# ಎರಡನೇ ಅಧ್ಯಾಯ

## ಧಾವೀದನು ತಾನೂ ದೇಶಭ್ರಷ್ಟನಾಗಿ, ತನ್ನಂತೆ ದೇಶಭ್ರಷ್ಟರಾದವರಿಗೆ ನಾಯಕನಾದದ್ದು.

### ದಾವೀದನು ನೋಬಿಗೆ ಐತಂದದ್ದು.

[i ಸಮುವೇಲನು xxi. 1—9]

ನೋಬು ಯೆರೂಸಲೇಮಿನ ಉತ್ತರದಲ್ಲಿರುವ ಒಂದು ಪರ್ವತ ಶ್ರೇಣಿಯಮೇಲೆ ಕೂಗಳತೆ ದೂರದಲ್ಲಿಯೂ, ಗಿಬಿಯದ ನೈಋತ್ಯಕ್ಕೆ ಸುಮಾರು ಐದು ಮೈಲು ದೂರದಲ್ಲಿಯೂ ಇತ್ತು. ದಾವೀದನು ತಪ್ಪಿಸಿಕೊಂಡು ಓಡಿಹೋದ ಮೇಲೆ ಇಳುಕೊಂಡ ಮೊದಲನೆಯ ಸ್ಥಳವಿದೇ. ಒಡಂಬಡಿಕೆ ಪೆಟ್ಟಿಗೆಯು ಕಿರ್ಯಾತ್ ಯಾರೀಮಿನಲ್ಲಿ ಇದ್ದಾಗ್ಯೂ ಇಸ್ರಾಯೇಲರಿಗೆ ನೋಬು ಪಟ್ಟಣವು ಪರಿಶುದ್ಧ ಸ್ಥಳವಾಗಿದ್ದ ಹಾಗೆ ತೋರುತ್ತೆ. ದಾವೀದನು ಇಲ್ಲಿ ತನ್ನ ಪ್ರಯಾಣದ ಶುಭಾಶುಭಗಳನ್ನು "ಯೆಹೋವನಿಂದ ವಿಚಾರಿಸಿಕೊಂಡು" ಸಾಧ್ಯವಾದರೆ ಸ್ವಲ್ಪ ಆಹಾರವನ್ನೂ ಆಯುಧಗಳನ್ನೂ ಕೂಡ ಸಂಪಾದಿಸಿಕೊಳ್ಳಬೇಕೆಂದು ಇಲ್ಲಿಗೆ ಬಂದನು. ಪರಿಶುದ್ಧ ಸ್ಥಳವನ್ನು ಮುಟ್ಟಿದಾಗ, ತನ್ನನ್ನು ಅರಸನು ಅವಸರವಾದ ಕೆಲಸದ ಮೇಲೆ ಕಳುಹಿಸಿರುವದರಿಂದ ಪರಿವಾರದವರು ಯಾರೂ ತನ್ನ ಸಂಗಡ ಬರಲಿಲ್ಲವೆಂತಲೂ ಅವರು ನೇಮಿಸಿದ ಒಂದು ಸ್ಥಳದಲ್ಲಿ ತನ್ನನ್ನು ಕಲೆತುಕೊಳ್ಳುವಂತೆ ಅರಸನ ಆಜ್ಞೆಯಾಗಿದೆಯೆಂತಲೂ ತಾನೊಬ್ಬನೇ ಯೆಹೋವನ ಬಳಿಯ ವಿಚಾರಿಸ ಬಂದೆನೆಂತಲೂ ಅಲ್ಲಿ ಯಾಜಕನಾಗಿದ್ದ ಅಹಿಮೆಲೇಕನಿಗೆ ದಾವೀದನು ತಿಳಿಸಿದನು. ಆಗ ಅಹಿಮೆಲೇಕನು, ಅದು ಅರಸನ ಕೆಲಸವಾದುದರಿಂದ ಪ್ರಯಾಣವು ಶುಭವಾಗಿ ಮುಗಿಯುವದೆಂತ ತಿಳಿಸಿ, ದಾವೀದನೂ ಆತನ ಸಂಗಡಲಿದ್ದವರೂ ಶುಚಿರ್ಭೂತರಾಗಿದ್ದಾರೆಂದು ತಿಳುಕೊಂಡನಂತರ ಅಲ್ಲಿದ್ದ ಸಮುಖದ ರೊಟ್ಟಿಗಳನ್ನು ಆತನಿಗೆ ಕೊಟ್ಟನು. ದಾವೀದನು ತನ್ನ ಜಯಚಿನ್ಹೆಯಾಗಿ ತೂಗು ಹಾಕಿಟ್ಟಿದ್ದ ಗೊಲ್ಯಾತನ ಕತ್ತಿಯ ಹೊರತು ಬೇರೆ ಯಾವ ಆಯುಧವೂ ಇಲ್ಲದ್ದರಿಂದ ಯಾಜಕನು ಅದನ್ನೇ ದಾವೀದನಿಗೆ ಕೊಟ್ಟನು. ದಾವೀದನು ಅದನ್ನು ತಕ್ಕೊಂಡು ಯಾಜಕನನ್ನು ವಂದಿಸಿ ಹೊರಟುಹೋದನು.

Digitized by ROJA MUTHIAH RESEARCH LIBRARY

## ದಾವೀದನು ಗಾತು ಊರನ್ನು ಸೇರಿಕೊಂಡದ್ದು.

[i ಸಮುವೇಲನು xxi. 10—15]

ದಾವೀದನು ಇಸ್ರಾಯೇಲರ ದೇಶದಿಂದ ಹೊರಡಿಸಲ್ಪಟ್ಟ ಬಳಿಕ ಫಿಲಿಷ್ಟಿಯರ ಸಂಸಾನವಾದ ಗಾತಿನ ಅರಸನಾದ ಅಕೀಷನ ಬಳಿಯ ಚಾಕರಿಯನ್ನು ಸಂಪಾದಿಸಿಕೊಳ್ಳುವ ನಿಮಿತ್ತ ಅವನಲ್ಲಿಗೆ ಹೋದನು. ತಾನು ಶತ್ರುಗಳ ಬಳಿಯಿಂದ ಓಡಿ ಬಂದವನಾಗಿದ್ದರೂ ಯುದ್ಧದೊಳಗೆ ಸಮರ್ಥನಾಗಿದ್ದುದರಿಂದ ತನ್ನನ್ನು ಆ ಅಕೀಷನು ಸೇರಿಸಿಕೊಳ್ಳುವನೆಂದು ದಾವೀದನು ನಂಬಿದ್ದನು. ಆತನ ನಂಬಿಕೆಯ ಮೇರಿಗೆ ಅರಸನು ಸಹಾ ಆತನನ್ನು ತನ್ನ ಚಾಕರಿಯಲ್ಲಿರಿಸಿಕೊಳ್ಳುವದಕ್ಕೊಪ್ಪಿದನು. ಆದರೆ ಮಂತ್ರಿಗಳು ಮುಂತಾದ ಪರಿವಾರದವರು, ತಮ್ಮ ದೇಶವನ್ನು ಗೆದ್ದುಕೊಂಡ ದಾವೀದನನ್ನು ಅಕೀಷನು ಅತಿ ಸ್ನೇಹಭಾವದಿಂದ ಸೇರಿಸಿಕೊಂಡದ್ದನ್ನು ನೋಡಿ ದಾವೀದನನ್ನು ಕೊಲ್ಲಬೇಕೆಂತಲೂ ಆ ಕಾರ್ಯವು ಕೈಗೂಡದಿದ್ದರೆ ಆತನನ್ನು ಸೆರೆಯಲ್ಲಿಡಿಸಬೇಕೆಂತಲೂ ಆಲೋಚಿಸಿದರೆಂದು ತೋರುತ್ತೆ. ದಾವೀದನಿಗೆ ಇವರ ಆಲೋಚನೆಯು ತಿಳಿಯ ಬಂದಾಗ ಅವನು ತನ್ನ ಬಾಯಿಯೊಳಗಿಂದ ಜೊಲ್ಲನ್ನು ಗಡ್ಡದ ಮೇಲೆ ಸೋರಿಸುತ್ತಾ ಊರಿನ ಹೆಬ್ಬಾಗಲಿನ ಕದಗಳ ಮೇಲೆ ಮೇಳ ಬಾರಿಸುತ್ತಾ ಹುಚ್ಚನ ಹಾಗೆ ನಟಿಸಿದನು. ಯಾಕಂದರೆ ತನಗೆ ಮಂತ್ರಿ ಮುಂತಾದವರಿಂದ ಬರುವದಕ್ಕಿದ್ದ ಕೇಡಿನಿಂದ ತಪ್ಪಿಸಿಕೊಳ್ಳುವದಕ್ಕೆ ಆತನಿಗೆ ಇದೇ ತಕ್ಕ ಹಂಚಿಕೆಯಾಗಿತ್ತು. ಹೀಗೆ ದಾವೀದನು ನಟಿಸಿದ ಸಮಾಚಾರವು ಅಕೀಷನಿಗೆ ತಿಳಿದಾಗ ಇದ್ದ ಹುಚ್ಚರು ಸಾಲದೆ ಇನ್ನೊಬ್ಬ ಹುಚ್ಚನನ್ನು ಕರತಂದರೋ ಎಂತ ಹೇಳಿ ಆತನನ್ನು ಹೊರಡಿಸಿ ಬಿಟ್ಟನು. ಈ ಪ್ರಕಾರ ದಾವೀದನು ಪೂರ್ಣ ನಿರಾಶ್ರಯನಾಗಿ ಅಲೆದಾಡ ಬೇಕಾಯಿತು.

## ದಾವೀದನು ಅದುಲ್ಲಮ್ ದುರ್ಗವನ್ನಾಶ್ರಯಿಸಿಕೊಂಡದ್ದು.

[i ಸಮು. xxii. 1—4 ; i ದಿನಚರ್ಯೆ. xii. 8—19.]

ದಾವೀದನು ಗಾತು ಸಂಸ್ಥಾನದಿಂದ ಓಡಿಸಲ್ಪಟ್ಟನಂತರ ಆತನು ಅದುಲ್ಲಮ್‌ಗುಹೆ ಇಲ್ಲವೆ ಅದುಲ್ಲಮ್ ದುರ್ಗವೆಂಬ ಸ್ಥಳದಲ್ಲಿ ಸೇರಿಕೊಂಡನು. ಇದು ಬೆತ್ಲೆಹೇಮಿನ ನೈಋತ್ಯಕ್ಕೆ ಸುಮಾರು ಆರು ಮೈಲು ದೂರದಲ್ಲಿ ಈಗಲೂ ಇದೆ. ಈ ಕಾಲದಲ್ಲಿ ಇದು ಇನ್ನು ಯೂದನ ಗೋತ್ರದವರ ವಶಕ್ಕೆ ಬಂದಿರಲಿಲ್ಲವೆಂದು ತೋರುತ್ತೆ. ಈ ಸ್ಥಳದಲ್ಲಿ ದಾವೀದನ ಒಡಹುಟ್ಟಿದವರೂ ನೆಂಟರೂ ಅನೇಕಮಂದಿ ಬಂದು ಆತನನ್ನು ಸೇರಿಕೊಂಡರು. ಮತ್ತು ದಾವೀದನು ಮೋವಾಬಿನ ಅರಸನ ಅಪ್ಪಣೆತಕ್ಕೊಂಡು ತನ್ನ ತಾಯಿತಂದೆಗಳಿಗೆ ಮೋವಾಬಿಗೆ ಸೇರಿದ ಮಿಚ್ಪೆಯಲ್ಲಿ ಒಂದು ನಿವಾಸಸ್ಥಳವನ್ನು ನೇಮಿಸಿಕೊಟ್ಟನು. ಆತನು ಸೌಲನ ಅಧಿಕಾರವನ್ನು ಎದುರಿಸಿ ದೇಶಭ್ರಷ್ಟನಾಗಿ ತಿರುಗುತ್ತಾನೆಂದು ಜನರಿಗೆ ತಿಳಿಯ ಬಂದಾಗ ಸರ್ಕಾರದಲ್ಲಿ ಅತೃಪ್ತರಾದವರೂ ಅರಮನೆಯಿಂದ ತಪ್ಪಿಸಿಕೊಂಡವರೂ ಅನೇಕ ಮಂದಿ ಈತನನ್ನು ಸೇರಿಕೊಂಡರು. ಹೀಗೆ ಸ್ವಲ್ಪಕಾಲದಲ್ಲಿಯೇ ಆತನು ನಾಲ್ಕು ನೂರು

Digitized by ROJA MUTHIAH RESEARCH LIBRARY



ಮಂದಿಗೆ ನಾಯಕನಾದನು. ದಾವೀದನನ್ನು ಸೇರಿಕೊಂಡವರೊಳಗೆ ಗಾದನ ಗೋತ್ರದವರೊಳಗೆ ಯುದ್ಧದಲ್ಲಿ ಧೈರ್ಯಶಾಲಿಗಳೂ ತ್ವರಿತಗಮನರೂ ಆಗಿದ್ದ ಹೆಸರುಗಳು ಬರೆಯಲ್ಪಟ್ಟವೆ (1 ದಿನಚ. xii. 8—13). ತರುವಾಯ ಇವರು ದಾವೀದನ ದಂಡಿನೊಳಗೆ ದಳಪತಿಗಳಾದರು. ಕೆಲವು ಸಮಯಗಳಲ್ಲಿ ಹೊಸದಾಗಿ ಬಂದು ಆತನನ್ನು ಸೇರಿಕೊಂಡವರು ಆತನಿಗೆ ಮೋಸಮಾಡಿ ತೊಂದರೆಕೊಟ್ಟಹಾಗೆ ಕಾಣಬರುತ್ತೆ. ಹ್ಯಾಗಂದರೆ ಸೌಲನ ಗೋತ್ರವಾದ ಬೆನ್ಯಮೀನನ ಗೋತ್ರದವರಲ್ಲಿ ಕೆಲವರು ಅಮಸಾಯಿಯನ್ನು ತಮಗೆ ಪ್ರಧಾನನನ್ನಾಗಿ ಮಾಡಿಕೊಂಡುಬಂದು ದಾವೀದನ ದಂಡಿನೊಳಗೆ ಸೇರುವೆವೆಂದು ತಿಳಿಸಿದಾಗ ಆತನು ಇವರು ದ್ರೋಹಿಗಳಾಗಿರಬಹುದೆಂದು ಸಂಶಯಪಟ್ಟು ಅವರು ತನ್ನ ಆಜ್ಞೆಗೊಳಪಟ್ಟು ನಡೆಯುವರೋ ಇಲ್ಲವೋ ಹೇಳಬೇಕೆಂದು ಪ್ರಮಾಣಮಾಡಿಸಿ ಕೇಳಿದನು. ಅವರು ಆತನಿಗೆ ಕೊಟ್ಟ ಪ್ರತ್ಯುತ್ತರವು ಅತಿ ತೃಪ್ತಿಕರವಾಗಿದ್ದುದರಿಂದ ಆತನು ಸಂದೇಹವೆಲ್ಲಾ ಬಿಟ್ಟು ಅವರನ್ನು ತನ್ನ ದಂಡಿನೊಳಗೆ ಸೇರಿಸಿಕೊಂಡನು.

## ಬೆತ್ಲೆಹೇಮಿನ ಭಾವಿಯ ನೀರು.

[ii ಸಮು. xxiii. 13—17.]

ದಾವೀದನ ಈ ಕಾಲದ ಚರಿತ್ರೆಯಲ್ಲಿ ಸೈನಿಕರು ಆತನಮೇಲೆ ಇಟ್ಟ ಪ್ರೇಮಾಸಕ್ತಿಯನ್ನು ತೋರಿಸುವಂಥ ಒಂದೇ ಒಂದು ವೃತ್ತಾಂತವು ಬರೆಯಲ್ಪಟ್ಟಿರುತ್ತದೆ. ಮತ್ತು ಇದರಿಂದ ಸೌಲನ ರಾಜ್ಯಭಾರವು ಎಷ್ಟುಮಟ್ಟಿಗೆ ಬಿಗಿತಪ್ಪಿಹೋಗಿತ್ತೆಂಬುದೂ ಗೊತ್ತಾಗುತ್ತದೆ. ಫಿಲಿಷ್ಟಿಯರನ್ನು ಆಗಾಗ್ಯೆ ಓಡಿಸುವದಕ್ಕೆ ಸಮರ್ಥನಾಗಿದ್ದ ಪ್ರಧಾನನನ್ನು ಅರಸನು ಹೋಗಲಾಡಿಸಿಕೊಂಡದುದರಿಂದ ಅವರು ತಂಡತಂಡಗಳಾಗಿ ದೇಶದ ಮೇಲೆ ಸಂಚರಿಸುತ್ತಾ ಯೆರೂಸಲೇಮಿನ ಹತ್ರವಿದ್ದ ರಿಫಾಯಿಮ್ ತಗ್ಗಿನಲ್ಲಿ ಠಾಣ್ಯಮಾಡಿಕೊಂಡಿದ್ದರು. ಒಂದು ಗುಂಪು ಬೆತ್ಲೆಹೇಮಿಗೆ ಮುತ್ತಿಗೆಹಾಕಿತ್ತು. ಇಂಥಾ ಕಾಲದಲ್ಲಿ ದಾವೀದನು ಚಿಕ್ಕತನದಲ್ಲಿ ಮಂದೆಯನ್ನು ಅನೇಕಾವರ್ತಿ ನೀರು ಕುಡಿಯುವದಕ್ಕೆ ನಡಿಸುತ್ತಾ ಹೋಗುತ್ತಿದ್ದ ಭಾವಿಯ ನೀರಿನ ಮೇಲೆ ಆತನಿಗೆ ಬಯಕೆ ಹುಟ್ಟಿತು. ಈ ತನ್ನ ಬಯಕೆಯನ್ನು ತನ್ನ ಬಂಟರಿಗೆ ತಿಳಿಸಿದಾಗ ಅವರಲ್ಲಿ ಮೂವರು ಅತಿ ಸಾಹಸದಿಂದ ಫಿಲಿಷ್ಟಿಯರ ದಂಡಿನೊಳಗೆ ನುಗ್ಗಿಹೋಗಿ ಬೆತ್ಲೆಹೇಮಿನ ಹೆಬ್ಬಾಗಿಲ ಬಳಿಯಲ್ಲಿದ್ದ ಭಾವಿಯ ನೀರನ್ನು ತಂದರು. ಆ ನೀರನ್ನು ನೋಡಿ ದಾವೀದನು ಸ್ವಪ್ರಯೋಜನಕ್ಕಾಗಿ ಜನರ ಪ್ರಾಣಗಳನ್ನು ವಿಪತ್ತಿಗೊಳಗಾಗಮಾಡುವದು ಸರಿಯಲ್ಲವೆಂಬ ನಿಜವಾದ ಹೇಮಭಾವವುಳ್ಳವನಾಗಿ ಆ ನೀರು ಅವರ ರಕ್ತಕ್ಕೆ ಸಮಾನವೆಂಥೇಳಿ ಅದನ್ನು "ಯೆಹೋವನ ಮುಂದೆ" ಪೇಯದ್ರವ್ಯದಂತೆ ನೆಲದಮೇಲೆ ಹೊಯಿದುಬಿಟ್ಟನು. ದಾವೀದನಿಗೆ ನೀರು ತಂದುಕೊಟ್ಟ ಆ ಮೂರು ಮಂದಿ ದಾವೀದನ ಶೂರರೊಳಗೆ ಅತಿ ಶ್ರೇಷ್ಠರೆಂದು ಸಹಜವಾಗಿ ಹೆಸರ್ಗೊಂಡರು. ಸ್ವಲ್ಪಕಾಲವಾದಮೇಲೆ ಗಾದನೆಂಬ ಪ್ರವಾದಿಯು ಬಂದು

ಅಡುಲ್ಲಮ್ ದುರ್ಗವು ಅಷ್ಟು ಭದ್ರವಾದ ಸ್ಥಾನವಲ್ಲವೆಂದು ಹೇಳಿ ಯೂದಾಯ ಪ್ರದೇಶಗಳಿಗೆ ಹೋಗಿ ಸೇರಿಕೊಳ್ಳಬೇಕೆಂದು ದಾವೀದನಿಗೆ ತಿಳಿಸಿದುದರಿಂದ ದೇಶಭ್ರಷ್ಟರ ಈ ದಂಡು ಅಡುಲ್ಲಮ್ ದುರ್ಗವನ್ನು ಬಿಟ್ಟು ಹಾರೆತ್ ಅರಣ್ಯವನ್ನು ಸೇರಿತು.

### ಸೌಲನು ನೋಬಿನೊಳಗಣ ಯಾಜಕರನ್ನು ಸಂಹರಿಸಿದ್ದು.

[i ಸಮು.xxii. 6—23.]

ದಾವೀದನನ್ನು ನೋಬಿನಲ್ಲಿ ಅಹಿಮೆಲೇಕನು ಸತ್ಕರಿಸಿದ್ದನ್ನು ಸೌಲನ ಪರಿಚಾರಕರ ಮೇಲ್ಪರಿಚಾರಕನಾದ ದೋಯೆಗನು ನೋಡಿದ್ದನು. ಇವನು ಎದೋಮ್ಯನಾಗಿದ್ದನು. ಇವನಿಗೆ ಕುಷ್ಠರೋಗವಿದೆಯೆಂಬುವ ಸಂದೇಹದಿಂದ ಇಲ್ಲಿಗೆ ಕಳುಹಿಸಲ್ಪಟ್ಟು ಇವನು ಕರ್ತನ ಸಮುಖದಲ್ಲಿ ತಡೆಯಲ್ಪಟ್ಟಿದ್ದನು. ಇವನ ಸೌಲನ ದಯೆಯನ್ನು ಸಂಪಾದಿಸುವ ನಿಮಿತ್ತ ಈ ಸಂಗತಿಯನ್ನು ಸೌಲನಿಗೆ ಅರಿಕೆ ಮಾಡಿದನು. ದಾವೀದನ ಮೇಲಿದ್ದ ಸೌಲನ ರೋಷವು ನಿರಪರಾಧಿಗಳಾದ ಯಾಜಕರಮೇಲೆ ಉದ್ರೇಕವಾಯಿತು. ಆದಕಾರಣ ಸೌಲನು ಆ ಕ್ಷಣವೇ ನೋಬಿನಲ್ಲಿದ್ದ ಯಾಜಕರ ಕುಟುಂಬಗಳನ್ನೆಲ್ಲಾ ಸಂಹರಿಸಲಾಜ್ಞಾಪಿಸಿದನು. ಆತನು ಇಂಥಾ ದೈವದ್ರೋಹಕಾರ್ಯವನ್ನು ಮಾಡಿಸಿದುದರಿಂದ ಎಲ್ಲರ ದೃಷ್ಟಿಯಲ್ಲಿ ಅತಿ ನೀಚನಾಗಿ ಎಣಿಸಲ್ಪಟ್ಟನು. ಯಾಕಂದರೆ ಅವನ ಭಟರು ಕೂಡ ಇಂಥಾ ಕಾರ್ಯವನ್ನು ಮಾಡುವದಕ್ಕೆ ಒಪ್ಪಲಿಲ್ಲ. ಆದರೆ ದೋಯೆಗನು ಮಾತ್ರ ಸೌಲನು ತನಗೆ ಅಪ್ಪಣೆಕೊಟ್ಟ ಕ್ಷಣವೇ ಯಾಜಕರ ವಂಶದವರಾದ ಎಂಭತ್ತೈದು ಮಂದಿಯನ್ನು ಕತ್ತಿಯಿಂದ ಸಂಹಾರಮಾಡಿ ಪಟ್ಣವನ್ನು ಕೊಳ್ಳೆಹೊಡೆದು ಹಾಳುಮಾಡಿದನು. ಆದರೆ ಅಹಿಮೆಲೇಕನ ಮಗನಾದ ಅಬಿಯಾತರನು ಮಾತ್ರ ತಪ್ಪಿಸಿಕೊಂಡು ದುಃಖಕರವಾದ ಈ ಸುದ್ದಿಯನ್ನು ದಾವೀದನಿಗೆ ತಿಳಿಸುವದಕ್ಕೆ ಆತನಲ್ಲಿಗೆ ಬಂದನು. ಆತನು ಅವನಿಗೆ ಅಭಯವನ್ನು ಕೊಟ್ಟು ಬಹಳ ಸತ್ಕಾರದಿಂದ ಅವನನ್ನು ಅಂಗೀಕರಿಸಿದನು. ಆಗಿನಿಂದ ಅಬಿಯಾತರನು ದಾವೀದನ ಜೊತೆಯಲ್ಲೇ ಇರುವಂಥವನಾದನು.

### ಕೆಯಿಲಾ ಬಿಡುಗಡೆ ಹೊಂದಿದ್ದು.

[i ಸಮು. xxiii. 1—14.]

ಈಗ ಮೇತಿಂಗಳಲ್ಲಿ ಸುಗ್ಗಿ ಕಾಲವು ಮುಗಿಯುವಹಾಗೆ ಇತ್ತು. ಇಂಥಾ ಸಮಯದಲ್ಲಿ ಫಿಲಿಷ್ಟಿಯರ ಪಾಳ್ಯಗಾರರ ದಂಡು ಪಶ್ಚಿಮ ಸರಹದ್ದಿನ ಬಳಿಯಲ್ಲಿದ್ದ ಕೆಯಿಲಾಪಟ್ಟಣವನ್ನು ಮುತ್ತಿಗೆ ಹಾಕಿತ್ತು. ಈ ಪಟ್ಣವು ಯೂದಾಯ ರಾಜ್ಯದೊಳಗಿಲ್ಲದುದರಿಂದ ಅದನ್ನು ಕಾಪಾಡುವದಕ್ಕೆ ಸೌಲನು ಸ್ವಲ್ಪವೂ ಪ್ರಯತ್ನಿಸಲಿಲ್ಲ. ಶತ್ರುಗಳು ಆ ಪಟ್ಣದ ಜನರನ್ನು ಈಚೆಗೆ ಬಾರದಹಾಗೆ ಮಾಡಿಬಿಟ್ಟು, ಪಟ್ಣದ ಹೊರಗೆ ಅವರ ಕಣಜಗಳಲ್ಲಿ ತುಂಬಿದ ಧಾನ್ಯವನ್ನು ದೋಚಿಕೊಳ್ಳುತ್ತಿದ್ದರು. ಅಬಿಯಾತರನು ನೋಬಿನಿಂದ ದಾವೀದನ ಬಳಿಗೆ ಓಡಿಬಂ



ದಾಗ ಎಫೋದನ್ನು ತನ್ನೊಡನೆ ತಂದಿದ್ದನು. ಆದಕಾರಣ ದಾವೀದನು ಫಿಲಿಷ್ಟಿಯರನ್ನು ಎದುರಿಸಬಹುದೋ ಎಂದು ಅವನ ಮೂಲಕವಾಗಿ ಯೆಹೋವನನ್ನು ಕೇಳಿದನು. ಯೆಹೋವನು ಎರಡು ಸಾರಿಯೂ ಜಯವುಂಟಾಗುವದೆಂದು ದಾವೀದನಿಗೆ ತಿಳಿಸಿದನು. ಆದರೆ ಆತನ ಭಟರು ಈ ಅಪಾಯ ಕಾರ್ಯದೊಳಗೆ ಪ್ರವೇಶಿಸುವದಕ್ಕೆ ಹಿಂದೆಗೆದರು. ಆದರೆ ದೇವವಾಕ್ಯದಪ್ರಕಾರ ದಾವೀದನೂ ಆತನ ಭಟರೂ ಯೂದಾಯದ ಉನ್ನತ ಪ್ರದೇಶಗಳ ಮಾರ್ಗವಾಗಿ ಹೋಗಿ ಫಿಲಿಷ್ಟಿಯರ ಮೇಲೆ ಅಕಸ್ಮಾತ್ತಾಗಿ ಬಿದ್ದು ಅವರನ್ನು ಹಿಮ್ಮೆಟ್ಟಿದರು. ಇದರಲ್ಲಿ ಫಿಲಿಷ್ಟಿಯರು ಬಹಳ ನಷ್ಟಪಟ್ಟರು. ದಾವೀದನಿಗೆ ಕೊಳ್ಳೆ ಬಹಳವಾಗಿ ಸಿಕ್ಕಿತು. ಆತನು ಕೊಂಚಕಾಲದವರೆಗೆಮಾತ್ರ ಇಲ್ಲಿ ಇದ್ದನು. ಯಾಕಂದರೆ ಆತನು ಇಲ್ಲಿ ಇರುವದು ಸೌಲನಿಗೆ ತಿಳಿಯಬಂತು. ಸೌಲನು ಆ ಕ್ಷಣವೇ ಇಸ್ರಾಯೇಲರನ್ನು ಗುಂಪು ಕೂಡಿಸಿಕೊಂಡು ಇಷ್ಟುವರೆಗೂ ತಾನು ಹುಡುಕುತ್ತಿದ್ದ ದಾವೀದನು ಈಗ ತನ್ನ ಕೈಯಲ್ಲಿ ಸಿಕ್ಕಿದನೆಂದು ಸಂತೋಷಭರಿತನಾಗಿ, ದಾವೀದನ ಸಂಗಡ ನಾನೂರು ಮಂದಿ ಇದ್ದಾಗ್ಯೂ ಅವರು ಕೋಟೆಯೊಳಗೆ ಸಿಕ್ಕಿಕೊಂಡಿರುವದರಿಂದ, ಸ್ವಲ್ಪತಡವಾದರೂ ಅವರನ್ನು ಸುಲಭವಾಗಿ ಕೈವಶಮಾಡಿಕೊಳ್ಳಬಹುದೆಂದು ಹೊರಟನು. ಸೌಲನ ಉದ್ದೇಶವೂ ಅವನು ಸಿದ್ಧಪಡಿಸಿಕೊಂಡು ಬರುತ್ತಿರುವದೂ ದಾವೀದನಿಗೆ ತಿಳಿಯಬಂತು. ಮತ್ತು ಕೆಯಿಲದ ಪ್ರಜೆಗಳು ತಮ್ಮ ಸ್ವಂತ ರಕ್ಷಣೆಗಾಗಿ ತನ್ನನ್ನು ಸೌಲನಿಗೆ ಒಪ್ಪಿಸಿಕೊಡುವರೆಂದು ಯಾಜಕನು ಆತನಿಗೆ ತಿಳಿಸಿದಾಗ ದಾವೀದನು ಹೆಬ್ರೋನಿನ ಆಗ್ನೇಯದಲ್ಲಿ ಮೂರು ಮೈಲು ದೂರದಲ್ಲಿದ್ದ ಜಿಫ್ (ಈಗ ಟೆಲ್ ಜಿಫ್) ಎಂಬ ಜಿಲ್ಲೆಯ ಮಲೆನಾಡುಗಳಲ್ಲಿರುವ ಗುಹೆಗಳನ್ನು ಆಶ್ರಯ ಮಾಡಿಕೊಳ್ಳುವದಕ್ಕಾಗಿ ಅಲ್ಲಿಗೆ ಸಾಗಿಹೋದನು.

### ಯೋನತಾನನು ದಾವೀದನನ್ನು ದರ್ಶಿಸುವದಕ್ಕೆ ಬಂದದ್ದು.

[i ಸಮು. xxiii. 15—18.]

ದಾವೀದನು ಜಿಫ್ ಅರಣ್ಯದೊಳಗೆ ಕಾಲಹರಣ ಮಾಡಿಕೊಂಡಿರುವಾಗ ತನಗೆ ಸೌಲನ ದೆಸೆಯಿಂದ ಸಂಭವಿಸಿದ ಸಕಲ ಕಷ್ಟಗಳನ್ನು ನೆನಸಿ ಮನಗುಂದಿ ಇದ್ದನು. ಇಂಥಾ ಸಮಯದಲ್ಲಿ ಆತನ ಆಪ್ತಸ್ನೇಹಿತನಾದ ಯೋನತಾನನು ರಹಸ್ಯವಾಗಿ ಈತನ ಬಳಿಗೆ ಬಂದು ಈತನನ್ನು ಆದರಿಸಿದನು. ಸೌಲನು ದಾವೀದನನ್ನು ಕಂಡುಹಿಡಿಯುವದಕ್ಕೆ ಅಲ್ಲಲ್ಲಿ ಚಾರರನ್ನು ಇಟ್ಟಿದ್ದುದರಿಂದ ಆತನು ಮನಸ್ಸಿನಲ್ಲಿ ಕಂಗೆಟ್ಟು ಧೈರ್ಯವನ್ನು ಬಿಟ್ಟುಬಿಟ್ಟಿದ್ದನು. ಆದರೆ ಯೋನತಾನನು ದಾವೀದನ ಆದರಣೆಗಾಗಿ ದೇವರು ಇಸ್ರಾಯೇಲಿನ ಸಿಂಹಾಸನವನ್ನು ದಾವೀದನಿಗೆ ನೇಮಿಸಿದ್ದಾನೆಂತಲೂ ಆದುಕಾರಣ ತನ್ನ ತಂದೆಯ ಹಗೆಯು ಆತನಿಗೆ ಯಾವ ಕೇಡನ್ನೂ ಮಾಡಲಾರದೆಂತಲೂ ದೃಢವಾಗಿ ಹೇಳಿದನು. ತಾನು ಅರಸನಾದ ಸೌಲನ ಮಗನಾಗಿಯೂ ವಯಸ್ಸಿನಲ್ಲಿ ದೊಡ್ಡವನಾಗಿಯೂ ಇದ್ದರೂ ತನ್ನನ್ನು ದಾವೀದನಿಗಿಂತ

Digitized by ROJA MUTHIAH RESEARCH LIBRARY

ಎಷ್ಟೋ ಕಡಿಮೆಯಾಗಿ ಎಣಿಸಿಕೊಂಡನು. ಹೀಗೆ ಈ ಇಬ್ಬರು ಗೆಳೆಯರು "ದೇವರ ಮುಂದೆ" ಅಂದರೆ ಬಲಿಯರ್ಪಣೆಮಾಡಿ ಒಡಂಬಡಿಕೆಯನ್ನು ಸ್ಥಿರಪಡಿಸಿ ಅಗಲಿಹೋದರು. ಮತ್ತು ನಮಗೆ ತಿಳಿದಮಟ್ಟಿಗೆ ಅವರ ಜೀವಿತಕಾಲದಲ್ಲಿ ಪುನಃ ಒಬ್ಬರನ್ನೊಬ್ಬರು ಸಂಧಿಸಲಿಲ್ಲ.

## ಜೀಫ್ ಊರಿನವರು ದಾವೀದನ ವಿಷಯವಾಗಿ ಸೌಲನಿಗೆ ಅರಿಕೆ ಮಾಡಿದ್ದು ; ದಾವೀದನು ಅತಿಪ್ರಯಾಸದಿಂದ ತಪ್ಪಿಸಿಕೊಂಡದ್ದು.

[i ಸಮು. xxiii. 19—29]

ದಾವೀದನೂ ಆತನ ಭಟರೂ ಕೊಳ್ಳೆ ಹೊಡೆಯುವದರಿಂದಲೂ ಕುರುಬರಿಂದ ತಮಗೆ ಸಿಕ್ಕುವ ಬಹುಮಾನಗಳಿಂದಲೂ ಜೀವಿಸಬೇಕಾಗಿದ್ದಿತು. ದಕ್ಷಿಣ ಕಡೆಯಿಂದ ಬಂದು ಕುರಿಗಳನ್ನು ಅಪಹರಿಸಿಕೊಂಡು ಹೋಗುತ್ತಿದ್ದ ಚೋರರಿಂದ ಕುರುಬರ ಮಂದೆಗಳನ್ನು ತಪ್ಪಿಸಿ ದಾವೀದನೂ ಆತನ ಕಡೆಯವರೂ ಕಾಯುತ್ತಿದ್ದುದರಿಂದ ಧನವಂತರಾದ ಕುರುಬರು ಇವರಿಗೆ ಸಂಭಾವನೆಯನ್ನು ಕೊಡುತ್ತಿದ್ದರು. ಆದಕಾರಣ ಜೀಫ್ ಜಿಲ್ಲೆಯ ನಿವಾಸಿಗಳು ದಾವೀದನನ್ನು ಮತ್ತು ಆತನ ನಾನೂರು ಮಂದಿ ಭಟರನ್ನೂ ಕಾಪಾಡುವದರಲ್ಲಿ ಇಕ್ಕಟ್ಟಾದುದರಿಂದ ದಾವೀದನು ತಮ್ಮ ಜಿಲ್ಲೆಯೊಳಗೆ ಅಡಗಿಕೊಂಡಿದ್ದಾನೆಂದು ಇವರು ಸೌಲನಿಗೆ ಹೇಳಿ ಕಳುಹಿಸಿದರು. ಆಗ ಸೌಲನು ಅವರನ್ನು ಮೆಚ್ಚಿಕೊಂಡು ದಾವೀದನಿದ್ದ ಸ್ಥಳವನ್ನು ಗೊತ್ತಾಗಿ ತಿಳಿಯುವದಕ್ಕೆ ಅವರನ್ನು ಮುಂಚಿತವಾಗಿ ಕಳುಹಿಸಿದನು. ಇಷ್ಟರೊಳಗೆ ದಾವೀದನು ಜೀಫಿಗೆ ಏಳುಮೈಲು ದೂರದಲ್ಲಿದ್ದ ಮಾವೋನು (ಈಗ ಮಾಯಿನ್) ಜಿಲ್ಲೆಯ ಕೂಚಾದ ಬಂಡೆಗಳುಳ್ಳ ಗುಡ್ಡವನ್ನಾಶ್ರಯಿಸಿಕೊಂಡಿದ್ದನು. ಸೌಲನೂ ಅವನ ಭಟರೂ ದಾವೀದನೂ ಆತನ ಭಟರೂ ಇದ್ದ ಕೂಚಾದ ಬಂಡೆಯ ಅಡಿಯ ವರೆಗೂ ಬರುವ ತನಕ ದಾವೀದನ ಕಾವಲಿನವರು ಯಾರೂ ಕಂಡುಕೊಳ್ಳಲಿಲ್ಲ. ಆದರೆ ಅವರು ಬಹಳ ಹತ್ತರಕ್ಕೆ ಬಂದಾಗ ದಾವೀದನೂ ಆತನ ದಂಡಿನವರೂ ಗುಡ್ಡದ ಮತ್ತೊಂದು ಕಡೆಗೆ ಇಳಿದು ಓಡಿ ಹೋದರು. ಇವರು ಇಷ್ಟು ಆಶ್ಚರ್ಯವಿಧವಾಗಿ ತಪ್ಪಿಸಿಕೊಂಡಾಗಲೆ, ಫಿಲಿಷ್ಟಿಯರು ಯುದ್ಧಕ್ಕೆ ಬಂದಿದ್ದಾರೆಂದು ಸೌಲನಿಗೆ ಸಮಾಚಾರವು ಬಂದಿತು. ಆದಕಾರಣ ಸೌಲನು ತಕ್ಷಣವೇ ತೀವ್ರವಾಗಿ ಶತ್ರುಸೇನೆಯನ್ನು ಎದುರಿಸುವದಕ್ಕೆ ಹೊರಟು ಹೋದನು. ಹೀಗೆ ಅವರು ಅತಿ ಪ್ರಯಾಸದಿಂದ ತಪ್ಪಿಸಿಕೊಂಡ ಆ ಗುಡ್ಡಕ್ಕೆ "ಜಾರಿಕೆ ಸ್ಥಳಗಳ ಬಂಡೆ" ಎಂದು ಹೆಸರು ಬಂತು.



## ದಾವೀದನು ಸೌಲನ ಪ್ರಾಣವನ್ನು ಉಳಿಸಿದ್ದು : ಇಬ್ಬರೂ ಸಮಾಧಾನವಾದದ್ದು.

[i ಸಮು. xxiv.]

ದಾವೀದನು ಅಲ್ಲಿಂದ ತಪ್ಪಿಸಿಕೊಂಡನಂತರ ಗುಡ್ಡಗಳಿಂದಲೂ ಆಳವಾದ ತಗ್ಗುಗಳಿಂದಲೂ ಮನೋಹರವಾದ ಹುಲ್ಲುಗಾವಲುಗಳಿಂದಲೂ ತುಂಬಿದ್ದ ಎಂಗೇದಿ (ಕಾಡಾಡಿನ ಭಾವಿ) ಪ್ರದೇಶವನ್ನು ಸೇರಿಕೊಂಡನು. ಇದು ಮೃತ್ಯುಕಡಲಿನ ಪಡುವಲು ಕರೆಯ ಮೇಲೆ ಹೆಬ್ರೋನಿಗೆ ಎದುರಾಗಿ ಇತ್ತು. ಇವರು ಸೇರಿದ ಸ್ಥಳವು ಕಲ್ಲುಗಳಿಂದ ತುಂಬಿ ಕಾಡು ಆಡುಗಳಿಗೆ ವಾಸಸ್ಥಾನವೂ, ಭದ್ರವಾದ ದುರ್ಗವೂ ಆಗಿತ್ತು. ಫಿಲಿಷ್ಟಿಯರನ್ನು ಓಡಿಸಿದ ಮೇಲೆ ಸೌಲನು ಆಯಲ್ಪಟ್ಟ ಮೂರು ಸಾವಿರ ಮಂದಿಯೊಡನೆ ದಾವೀದನನ್ನು ಬೆನ್ನಟ್ಟಿ ಬಂದನು. ಸೌಲನು ಇವರನ್ನು ಹುಡುಕುತ್ತಾ ದಾವೀದನೂ ಆತನ ಬಂಟರೂ ಅಡಗಿಕೊಂಡಿದ್ದ ಗುಹೆಯೊಳಗೆ ಒಂದು ರಾತ್ರಿ ಹೋಗಿ ವಿಶ್ರಮಿಸಿಕೊಂಡನು. ಸೌಲನು ಒಂಟಿಗನಾಗಿ ದಾವೀದನಿದ್ದ ಗುಹೆಯೊಳಗೆ ಹೊಕ್ಕದ್ದರಿಂದ ಅವನ ಪ್ರಾಣವು ದಾವೀದನ ಕೈಯಲ್ಲಿ ಸಿಕ್ಕಿತು. ಆದಕಾರಣ ದಾವೀದನ ಭಟರು ಸೌಲನನ್ನು ಕೊಲ್ಲುವ ಹಾಗೆ ಆತನನ್ನು ಬಲವಂತಮಾಡಿದರು. ಆದರೆ ಸೌಲನ ಅಕ್ರಮಗಳಿಗೋಸ್ಕರ ಅವನನ್ನು ಶಿಕ್ಷಿಸುವದು ತನ್ನ ಕಾರ್ಯವಲ್ಲವೆಂತಲೂ ಸೌಲನು ದೇವರಿಂದ ಅರಸನಾಗ ನೇಮಿಸಲ್ಪಟ್ಟದ್ದರಿಂದ ದೇವರಿಗೆ ಮಾತ್ರವೇ ಅವನು ಉತ್ತರವಾದಿಯಾಗಿದ್ದಾನೆಂತಲೂ ಸೌಲನ ಕೈಯಿಂದ ತಾನು ಹೊಂದುವ ಹಿಂಸೆಯಿಂದ ತಪ್ಪಿಸಿಕೊಳ್ಳುವ ಕಾರ್ಯವು ತನ್ನದಾಗಿದ್ದರೂ ಆ ಕಾರ್ಯವನ್ನು ನಿರ್ವಹಿಸಿಕೊಳ್ಳುವದಕ್ಕಾಗಿ ಸೌಲನನ್ನು ಕೊಲ್ಲುವದು ಅಪರಾಧವೆಂತಲೂ ದಾವೀದನು ತಿಳಿದು, ತನ್ನ ಜನರ ಬಲಾತ್ಕಾರಕ್ಕೆ ಒಳಗಾಗದೆ, ತನ್ನ ಮನಸ್ಸಿದ್ದರೆ ಸೌಲನನ್ನು ಕೊಲ್ಲಬಹುದಾಗಿತ್ತೆಂಬುವದಕ್ಕೆ ಗುರುತಾಗಿರುವಂತೆ, ನಿದ್ದೆ ಮಾಡುತ್ತಿದ್ದ ಸೌಲನ ನಿಲುವಂಗಿಯ ಅಂಚನ್ನು ಕೊಯಿದುಕೊಂಡನು. ಸೌಲನು ವಿಶ್ರಾಂತಿ ತೀರಿಸಿಕೊಂಡು ಗವಿಯಿಂದ ಹೊರಗೆ ಬಂದಾಗ ದಾವೀದನು ಕೂಡ ಅವನ ಹಿಂದೆ ಬಂದು, ತನ್ನನ್ನು ಅರಸನಿಗೆ ತೋರಿಸಿಕೊಂಡು, ಅವನ ನಿಲುವಂಗಿಯ ಅಂಚನ್ನು ತೋರಿಸಿ, ಅರಸನ ಪ್ರಾಣವನ್ನು ತೆಗೆಯಬೇಕೆಂಬ ದುರ್ಬುದ್ಧಿ ತನ್ನಲ್ಲಿದ್ದದ್ದುಂಟಾದರೆ ಈ ಪ್ರಕಾರ ಉಳಿಸುತ್ತಿರಲಿಲ್ಲವೆಂತಲೂ ಜನರು ತನ್ನ ವಿಷಯ ಅರಸನಿಗೆ ಚಾಡಿಮಾತುಗಳನ್ನು ಹೇಳಿದರೆ ಅವುಗಳನ್ನು ನಂಬಬಾರದೆಂತಲೂ ಹೇಳಿ, ಅರಸನನ್ನು ಬೇಡಿಕೊಂಡನು. ದಾವೀದನ ಅತಿಶಯವಾದ ಈ ಉದಾರಗುಣವನ್ನು ಸೌಲನು ನೋಡಿ, ತಕ್ಷಣವೇ ತನ್ನ ಅಪರಾಧವನ್ನು ಒಪ್ಪಿಕೊಂಡು, ದೇವರಿಂದ ಸಿಂಹಾಸನಕ್ಕೆ ನೀನೇ ನೇಮಿಸಲ್ಪಟ್ಟವನೆಂತ ನಂಬಿದ್ದೇನೆಂದು ಹೇಳಿ, ಆತನು ಸಿಂಹಾಸನಾರೂಢನಾದ ಮೇಲೆ ತನ್ನ ವಂಶದವರನ್ನು ಕಾಪಾಡುವ ಹಾಗೆ ದಾವೀದನನ್ನು ಬೇಡಿಕೊಂಡನು. ಈ ಬಿನ್ನಹಕ್ಕೆ ದಾವೀದನು ಸಂತೋಷದಿಂದ ಒಪ್ಪಿಕೊಂಡನಂತರ ಸೌಲನು ತನ್ನ ಅರಮನೆಗೂ ದಾವೀದನು ಮಾವೋನಿನಲ್ಲಿದ್ದ ಗುಡ್ಡಕ್ಕೂ ಹೋದರು.



Digitized by ROJA MUTHIAH RESEARCH LIBRARY

## ದಾವೀದನು ತೆರಿಗೆ ಎತ್ತುವಳಿ ಮಾಡಿದ್ದು.

[i ಸಮು. xxv. 2—44.]

ಈ ಕಾಲದಲ್ಲಿ ದಾವೀದನು ಹ್ಯಾಗೆ ಜೀವಿಸುತ್ತಿದ್ದನೆಂಬುದು ಮುಂದೆ ಬರೆಯಲ್ಪಟ್ಟಿರುವ ವೃತ್ತಾಂತದಿಂದ ಸ್ಫುಟವಾಗುತ್ತೆ. ಗಿಬಿಯುಕ್ಕೆ ಸ್ವಲ್ಪ ದೂರದಲ್ಲಿರುವ ಪ್ರದೇಶಗಳ ಪ್ರಜೆಗಳನ್ನಾಗಲಿ ಅವರ ಒಡವೆವಸ್ತುಗಳನ್ನಾಗಲಿ ಕಾಪಾಡುವದಕ್ಕೆ ಸೌಲನು ಅಶಕ್ತನಾಗಿದ್ದನೆಂಬುವದು ಕೆಯಿಲದಲ್ಲಿ ನಡೆದ ಸಂಗತಿಯಿಂದ ಗೊತ್ತಾಗುತ್ತದೆಯಷ್ಟೆ. ಆದರೆ ಯೂದಾಯ ಸೀಮೆಯ ತೆಂಕಣ ಪ್ರಾಂತ್ಯಗಳಲ್ಲಿ ಅಮಲೇಕ್ಯರೂ ಇತರ ಕಾಡುಜನಗಳೂ ತಂಡತಂಡಗಳಾಗಿ ಹೋಗಿ ಕೊಳ್ಳೆಮಾಡುತ್ತಿದ್ದುದರಿಂದ ದಾವೀದನು ಇಂಥಾ ಪಾಳ್ಯಗಾರರ ದಾಳಿಯಿಂದ ಆ ಪ್ರದೇಶದ ಜನರನ್ನು ತಪ್ಪಿಸಿ ಕಾಪಾಡುತ್ತಿದ್ದನು. ಆದಕಾರಣ ಆತನೂ ಆತನ ೬೦೦ ಮಂದಿ ಭಟರೂ ಆಯಾ ಸ್ಥಳಗಳಲ್ಲಿನ ಧನವಂತರಾದವರು ತಮ್ಮ ಇಷ್ಟಾನುಸಾರವಾಗಿ ಕೊಡುತ್ತಿದ್ದ ಬಹುಮಾನಗಳಿಂದ ಜೀವಿಸುತ್ತಿದ್ದರು. ಹೀಗೆ ಧಾವೀದನಿಂದ ಕಾಪಾಡಲ್ಪಟ್ಟವರಲ್ಲಿ ದಾವೀದನ ಪಾಳ್ಯಕ್ಕೆ ಸಮೀಪವಾಗಿದ್ದ ಕಾರ್ಮೇಲು ಗುಡ್ಡದ ಮೇಲೆ ತನ್ನ ಮಂದೆಯನ್ನು ಮೇಯಿಸುತ್ತಿದ್ದ ಮಾವೋನಿನ ನಾಬಾಲನು (ನಾಬಾಲ್ ಅಂದರೆ ಹುಚ್ಚನು) ಒಬ್ಬನಾಗಿದ್ದನು. ದಾವೀದನು ವನವಾಸಮಾಡುತ್ತಿರುವಾಗ ನಾಬಾಲನು ವರ್ಷಾಂತದ ಉಣ್ಣೆಕತ್ತರಿಸುವ ಹಬ್ಬವನ್ನು ಆಚರಿಸುತ್ತಿದ್ದನು. ಆದಕಾರಣ ದಾವೀದನು ತನ್ನ ಭಟರಲ್ಲಿ ಹತ್ತು ಮಂದಿಯನ್ನು ಇವನ ಬಳಿಗೆ ಸ್ನೇಹಭಾವದಿಂದ ಕಳುಹಿಸಿ, ಔತಣದಲ್ಲಿ ತನಗೂ ಸ್ವಲ್ಪ ಭಾಗವನ್ನು ಕೊಡುವ ಹಾಗೆ ಕೇಳಿಕೊಂಡನು. ಆದರೆ ನಾಬಾಲನು ಎಚ್ಚರಗೇಡಿಯಾಗಿ ಐಶ್ವರ್ಯಮದದಿಂದ ದಾವೀದನ ವಿನಂತಿಯನ್ನು ಅಲಕ್ಷ್ಯಮಾಡಿದ್ದು ಮಾತ್ರವಲ್ಲದೆ, ದಾವೀದನನ್ನು ಕೀಳುಜಾತಿಯವ, ಓಡಿಹೋದ ಗುಲಾಮ, ಮೊದಲಾದ ರೋಷಹುಟ್ಟುವ ಮಾತುಗಳಿಂದ ನಿಂದಿಸಿ, ಅವರನ್ನು ಹಿಂದಕ್ಕೆ ಕಳುಹಿಸಿಬಿಟ್ಟನು. ಅವನ ದೂಷಣೆಯ ಸಮಾಚಾರವು ದಾವೀದನಿಗೆ ತಿಳಿದ ಕೂಡಲೆ ಆತನು ತನ್ನ ಭಟರಲ್ಲಿ ೨೦೦ ಮಂದಿಯನ್ನು ಪಾಳ್ಯದಲ್ಲಿ ಬಿಟ್ಟು, ೪೦೦ ಮಂದಿಯೊಡನೆ ನಾಬಾಲನಿಗೆ ಮುಯ್ಯಿಗೆ ಮುಯ್ಯಿ ಮಾಡುವದಕ್ಕೆ ಹೊರಟನು. ನಾಬಾಲನ ಸೇವಕರಲ್ಲೊಬ್ಬನು, ನಾಬಾಲನ ಅವಿವೇಕದಿಂದ ತಮ್ಮೆಲ್ಲರಿಗೆ ಹಾನಿ ಬರುವದೆಂದು ತಿಳಿದು ಭಯಪಟ್ಟು, ನಡೆದ ಸುದ್ದಿಯನ್ನು ಅವನ ಹೆಂಡತಿಯಾದ ಅಬಿಗಾಯಲಳಿಗೆ ತಿಳಿಸಿ, ತಮ್ಮೆಲ್ಲರ ಪ್ರಾಣಗಳನ್ನು ರಕ್ಷಿಸುವದಕ್ಕೇನಾದರೂ ಹಂಚಿಕೆಮಾಡಬೇಕೆಂದು ಅವಳನ್ನು ಬೇಡಿಕೊಂಡನು. ಆಗಲವಳು ದಾವೀದನಿಗೆ ಕೆಲವು ಬಹುಮಾನಗಳನ್ನು ಕೂಡಿಸಿ, ಕತ್ತೆಗಳಮೇಲೆ ಹೇರಿಕೊಂಡು, ತನ್ನ ಗಂಡನಿಗೆ ತಿಳಿಯದ ಹಾಗೆ ದಾವೀದನನ್ನು ಸಂಧಿಸುವದಕ್ಕೆ ಅವುಗಳನ್ನು ಮುಂದಾಗಿ ಕಳುಹಿಸಿ ತಾನೂ ಹೊರಟುಬಂದಳು. ದಾವೀದನು ಇವಳನ್ನು ಗುಡ್ಡದ ಇಳುಕಲ ಸ್ಥಳದಲ್ಲಿ ಸಂಧಿಸಿದನು. ಈತನು ಅತಿ ಕೋಪೋದ್ದೀಪಿತನಾಗಿ ಸಂಹರಿಸುವದಕ್ಕೆ ಬಂದಿದ್ದಾನೆಂದು ಅಬಿಗಾಯಲು ತಿಳುಕೊಂಡು ಅತಿಚಮತ್ಕಾರದ ಮಾತುಗಳಿಂದ ದಾವೀದನನ್ನು ಶಾಂತಿಪಡಿಸಿದಳು. ನಾಬಾಲನು ತನ್ನ ಹೆಸರಿಗೆ ತಕ್ಕಂತೆ ತಿಳಿಗೇಡಿಯಾಗಿರುವದರಿಂದ ಅಂಥವನನ್ನು ಯೆಹೋವನಿಗಾಗಿ ಯುದ್ಧ ಮಾ



ಡುವ ನಿನ್ನಂಥ ವೀರನು ದಂಡಿಸುವದು ಮಾನಕ್ಕೆ ತಡೆಯುವ ಕೆಲಸವಲ್ಲ. ಇಂಥ ಕೆಲಸವನ್ನು ಮಾಡದೆ ಬಿಟ್ಟದ್ದಕ್ಕೆ ನೀನು ಪಶ್ಚಾತ್ತಾಪಪಡುವದಿಲ್ಲ. ನಾನು ಬಂದುದರಿಂದ ನೀನು ರಕ್ತಾಪರಾಧವನ್ನು ಹೊತ್ತುಕೊಳ್ಳುವ ಅಪಾಯ ತಪ್ಪಿತು. ಸೌಲನು ಇನ್ನೂ ನಿನ್ನ ಪ್ರಾಣವನ್ನು ಹುಡುಕುತ್ತಿದ್ದಾಗ್ಯೂ ದೇವರು ನಿನ್ನನ್ನು ಕಾಪಾಡಿ, ನಿನ್ನನ್ನು ಅರಸನಾಗ ಮಾಡುವನು ಎಂದು ದಾವೀದನಿಗೆ ಅಬಿಗಾಯಲಳು ಹೇಳಿದಳು. ತದನಂತರ ದಾವೀದನು ಅವಳನ್ನು ವಂದಿಸಿ, ಈ ಕೆಟ್ಟ ಕಾರ್ಯದಿಂದ ತನ್ನನ್ನು ತಪ್ಪಿಸಿದ ಯೆಹೋವನಿಗೆ ಸ್ತುತಿ ಸಲ್ಲಿಸಿ, ತನ್ನ ಪಾಳೆಯಕ್ಕೆ ಹೋದನು. ಅಬಿಗಾಯಲಳು ಅಲ್ಲಿಂದ ತನ್ನ ಮನೆಗೆ ಹೋದಾಗ ತನ್ನ ಗಂಡನು ಅಮಲೇರಿಬಿದ್ದಿರುವದನ್ನು ಕಂಡು, ಆ ರಾತ್ರಿ ಅವನ ಸಂಗಡ ಮಾತನಾಡದೆ ನಡೆದ ಸಂಗತಿಯನ್ನೆಲ್ಲಾ ಮಾರಣೆ ದಿನ ಅವನಿಗೆ ತಿಳಿಸಿದಳು. ಅವನು ಈ ಸಂಗತಿಯನ್ನು ಕೇಳಿದಾಕ್ಷಣವೇ ತನಗುಂಟಾದ ನಾಚಿಕೆಯಿಂದ ಚಿಂತಾಕ್ರಾಂತನಾಗಿ ಕ್ಷಿಪ್ರ ಸನ್ನಿ ಹಿಡಿದು ಬಿದ್ದುಹೋದನು. ಹತ್ತು ದಿನಗಳ ತರುವಾಯ ಅದೇ ರೋಗವು ಪುನಃ ಬಂದದರಿಂದ ಅವನು ಸತ್ತನು. ಅವನು ಸತ್ತ ಸುದ್ದಿಯನ್ನು ದಾವೀದನು ಕೇಳಿ, ತಕ್ಷಣವೇ ಅವನ ಹೆಂಡತಿಯಾದ ಅಬಿಗಾಯಲಳನ್ನು ಕಂಡು ಅವಳ ಅನುಮತಿಯನ್ನು ಪಡೆದು ಅವಳನ್ನು ಮದುವೆಮಾಡಿಕೊಂಡನು. ಇದಕ್ಕೆ ಮುಂಚೆಯೇ ಸೌಲನು ದಾವೀದನ ಹೆಂಡತಿಯಾದ ಮೀಕಳನ್ನು ಬೇರೊಬ್ಬನಿಗೆ ಕೊಟ್ಟಿದ್ದನು (ಬಹುಶಃ ತನ್ನ ಮನೆತನಕ್ಕೆ ಸಹಾಯವಾಗಬಹುದೆಂದು ತೋರಿದವನೊಬ್ಬನಿಗೆ ಇವಳನ್ನು ಕೊಟ್ಟಿರಬಹುದು). ದಾವೀದನು ಅಬಿಗಾಯಲಳನ್ನಲ್ಲದೆ ಇಜ್ರೇಲೆಂಬ ಒಂದು ಸಣ್ಣ ಗ್ರಾಮದವಳಾದ ಅಹಿನೋವಾಮಳನ್ನು ಸಹಾ ಮದುವೆಮಾಡಿಕೊಂಡಿದ್ದನು.

## ದಾವೀದನು ಎರಡನೇ ಸಾರಿ ಸೌಲನ ಪ್ರಾಣವನ್ನು ಕಾದದ್ದು.

[i ಸಮು. xxvi.]

ದಾವೀದನು ಹಕೀಲ ಗುಡ್ಡದೊಳಗೆ ಅಡಗಿಕೊಂಡಿದ್ದಾನೆಂದು ಜೀಫ್ಯರು ಸೌಲನಿಗೆ ತಿಳಿಸಿದ ಕೂಡಲೆ ಕೆಟ್ಟದ್ದನ್ನೇ ಬಯಸುತ್ತಿದ್ದ ಸೌಲನು ತಿರಿಗಿ ದಾವೀದನನ್ನು ಹುಡುಕ ತೊಡಗಿದನು. ಮೊದಲಿನಂತೆ ದಾವೀದನು ಆಶ್ಚರ್ಯರೀತಿಯಿಂದ ತನ್ನ ಶತ್ರುವಾದ ಸೌಲನ ಪ್ರಾಣವನ್ನು ಕಾದು, ತಿರಿಗಿ ಒಬ್ಬರಿಗೊಬ್ಬರು ಸಮಾಧಾನ ಮಾಡಿಕೊಂಡರು. ದಾವೀದನ ಚಾರರು ಸೌಲನು ದಂಡಿಳಿದಿದ್ದ ಸ್ಥಳವನ್ನು ಕಂಡುಕೊಂಡು ಬಂದ ಮಾರಣೆ ರಾತ್ರಿಯಲ್ಲಿ ದಾವೀದನೂ ಆತನ ಸೋದರಳಿಯನಾದ (ಚೆರೂಯಳ ಮಗನು, ಇವಳು ದಾವೀದನ ಒಡಹುಟ್ಟಿದವಳು) ಅಬಿಷಾಯನೂ ಆ ಸ್ಥಳಕ್ಕೆ ಹೋಗಿ ನೋಡಿದಾಗ ಎಲ್ಲರು ಬಹಳ ಅಜಾಗ್ರತೆಯಿಂದ ನಿದ್ದೆ ಮಾಡುತ್ತಿದ್ದರು. ರಾಜಚಿನ್ಹೆಗಾಗಿ ಸೌಲನ ತಲೆಯ ಹತ್ತರ ನಟ್ಟಿದ್ದ ಈಟಿಯಿಂದ ಸೌಲನನ್ನು ಕೊಂದು, ತಮ್ಮ ಕಷ್ಟಗಳನ್ನು ತೀರಿಸಿಕೊಳ್ಳುವ ಎಂದು ಅಬಿಷಾಯನು ದಾವೀದನಿಗೆ ಆಲೋಚನೆ ಹೇಳಿದನು. ಆದರೆ ದಾವೀದನು ಪೂರ್ವದಲ್ಲಿ ತಾನು ಗವಿಯೊಳಗೆ ಹೇಳಿದ್ದ ಕಾರಣಗಳನ್ನು ತಿರಿಗಿ ಹೇಳಿ, ಅವನನ್ನು ತಡೆದನು. ಮತ್ತು ದಾವೀದನು ಸೌಲನ ಈಟಿಯನ್ನೂ ಅವನ

Digitized by ROJA MUTHIAH RESEARCH LIBRARY

ತಲೆಗಿಂಬಿನ ಹತ್ತರವಿದ್ದ ನೀರಿನ ಹೂಜಿಯನ್ನೂ ಮಾತ್ರ ತಕ್ಕೊಂಡು, ಸಮೀಪವಿದ್ದ ಗುಡ್ಡದ ಮೇಲಕ್ಕೆ ಹೋಗಿ ಸೇನಾನಿಯಾದ ಅಬ್ನೇರನು ಎಚ್ಚರವಾಗುವ ವರೆಗೂ ಗಟ್ಟಿಯಾಗಿ ಕೂಗಿದನು. ಅಬ್ನೇರನು ಎಚ್ಚತ್ತಾಗ ಅರಸನ ಈಟಿಯನ್ನೂ ಹೂಜಿಯನ್ನೂ ದಾವೀದನು ಅವನಿಗೆ ತೋರಿಸಿ—ನೀನು ಅರಸನನ್ನು ಕಾಪಾಡುವದರಲ್ಲಿ ಬಹಳ ಅಜಾಗ್ರತೆ ತೋರಿಸಿದ್ದೀ ಎಂದು ಅವನ ಮೇಲೆ ದೋಷಾರೋಪಣೆಮಾಡಿದನು. ದಾವೀದನ ಧ್ವನಿಯನ್ನು ಸೌಲನು ಗುರುತುಹಿಡಿಯಲು, ದಾವೀದನು ನನ್ನನ್ನು ಇಷ್ಟು ಅನ್ಯಾಯವಾಗಿ ಹಿಂಸಿಸುವದು ಸರಿಯಲ್ಲ. ಹೀಗೆ ಸಂಘಭ್ರಷ್ಟನಾಗ ಮಾಡಿದ್ದು, ಅನ್ಯದೇವರುಗಳನ್ನು ಸೇವಿಸ ಕಳುಹಿಸಿದ್ದಕ್ಕೆ ಸಮಾನವೆಂತಲೂ ಅರಸನಿಗೆ ಕೂಗಿ ಹೇಳಿದ್ದಲ್ಲದೆ, ದೇವರು ಸೌಲನನ್ನು ಯಾವದೊಂದು ಅಕ್ರಮವನ್ನಾದರೂ ಮಾಡುವದಕ್ಕೆ ಪ್ರೇರಿಸಿದ್ದರೆ, ಸೌಲನೇ ತನ್ನ ಪಾಪದ ನಿಮಿತ್ಯ ಪ್ರಾಯಶ್ಚಿತ್ತಮಾಡಿಕೊಳ್ಳಲಿ; ಆದರೆ ಮನುಷ್ಯರು ತನ್ನನ್ನು ಕೆಡಿಸುವದಕ್ಕೆ ಪ್ರಯತ್ನಮಾಡಿದ್ದರೆ ಯೆಹೋವನ ಮುಂದೆ ಅವರು ಶಪಿಸಲ್ಪಡಲಿ ಎಂದು ನುಡಿದನು. ಈ ಪ್ರಕಾರ ಸೌಲನು ತಿರಿಗಿ ತನ್ನ ಪ್ರಾಣವನ್ನು ಸಂರಕ್ಷಿಸಿದ ಉದಾರಿಯ ಪ್ರಾಣವನ್ನು ಹುಡುಕಿದ್ದಕ್ಕೆ ಅತಿ ಲಜ್ಜಾಭರಿತನಾಗಿ, ದಾವೀದನಿಗೆ ಮುಂದೆ ಲಭಿಸುವದಕ್ಕಿರುವ ಉನ್ನತ ಪದವಿಯನ್ನು ಮುಂತಿಳಿಸಿ, ಇನ್ನು ಮೇಲೆ ನಿನಗೆ ಕೇಡುಮಾಡುವದಿಲ್ಲವೆಂದು ಭಾಷೆಯನ್ನು ಕೊಟ್ಟು, ತನ್ನ ಮನೆಗೆ ಹೋದನು.

# ಮೂರನೇ ಅಧ್ಯಾಯ.

## ದಾವೀದನು ಫಿಲಿಷ್ಟಿಯರ ಸಾಮಂತನಾಗಿ ಚಿಕ್ಲಗಿನಲ್ಲಿ ವಾಸಮಾಡಿದ್ದು.

### ದಾವೀದನು ಚಿಕ್ಲಗನ್ನು ಸ್ವಾಧೀನಮಾಡಿಕೊಂಡದ್ದು.

[i ಸಮು. xxvii.]

ಸೌಲನು ತನ್ನ ಮೇಲೆಲ್ಲಿ ಬರುವನೋ ಎಂಬ ಹೆದರಿಕೆಯು ಮನಸ್ಸಿನಲ್ಲಿ ಬಾಧಿಸುತ್ತಿದ್ದುದರಿಂದ ದಾವೀದನು ಫಿಲಿಷ್ಟಿಯರ ದೇಶವೇ ತನಗೆ ತಕ್ಕ ಆಶ್ರಯವೆಂದು ತಿಳಿದು ಪುನಃ ಆ ದೇಶಕ್ಕೆ ಪಯಣ ಬೆಳಿಸಿದನು. ಆತನು ಸೌಲನ ಪಕ್ಷವನ್ನು ಸಂಪೂರ್ಣವಾಗಿ ಬಿಟ್ಟು ಬಿಟ್ಟಿದ್ದಾನೆಂತಲೂ, ಆತನು ಯುದ್ಧದೊಳಗೆ ವೀರಪರಾಕ್ರಮಿ ಎಂತಲೂ ಅರಸನಾದ ಅಕೀಷನಿಗೂ ಎಲ್ಲಾ ಜನರಿಗೂ ಚನ್ನಾಗಿ ತಿಳಿದಿತ್ತು. ಆದಕಾರಣ ಅಕೀಷನು ಬಹಳ ಸಂತೋಷದಿಂದ



ದಾವೀದನನ್ನು ತನ್ನ ದೇಶದೊಳಗೆ ಇರುವದಕ್ಕೆ ಒಪ್ಪಿಕೊಂಡನು. ಮೊದಲು ದಾವೀದನೂ ಆತನ ಭಟರೂ ತಂತಮ್ಮ ಕುಟುಂಬಗಳೊಂದಿಗೆ ಗಾತು ಊರನ್ನು ಸೇರಿದರು. ಸ್ವಲ್ಪಕಾಲ ಹೀಗೆ ಕಳೆದನಂತರ ದಕ್ಷಿಣದಲ್ಲಿ ಬಹು ದೂರವಾಗಿದ್ದ ಚಿಕ್ಲಾಗು ಪಟ್ಣವು ದಾವೀದನಿಗೂ ಆತನ ದಂಡಿಗೂ ಬಹುಮಾನವಾಗಿ ಕೊಡಲ್ಪಟ್ಟಿತು. ಇಲ್ಲಿ ದಾವೀದನು ತನ್ನ ಕೈ ಕೆಳಗಣ ಜನರನ್ನು ತನ್ನ ಸ್ವಂತ ಇಷ್ಟದಂತೆ ಆಳುತ್ತಾ, ತಾನಿದ್ದ ಭೂಮಿಗೆ ಒಡೆಯನಾದ ಅಕೀಷನಿಗೆ ಕಪ್ಪವನ್ನು ಕೊಡುತ್ತಾ, ಯುದ್ಧದ ಸಮಯದಲ್ಲಿ ಅವನಿಗೆ ಸಹಾಯವಾಗಿ ಸೇನೆಯನ್ನು ಕಳುಹಿಸುತ್ತಾ ಪಾಳೆಯಗಾರನ ಹಾಗೆ ಜೀವಿಸುತ್ತಿದ್ದನು. ಹೀಗಿದ್ದಾಗ್ಯೂ ಆತನ ಜನರು ವ್ಯವಸಾಯದಿಂದಲಾದರೂ ವ್ಯಾಪಾರದಿಂದಲಾದರೂ ಜೀವಿಸದೆ ಕೊಳ್ಳೆ ಹೊಡೆಯುವದರಿಂದಲೇ ಜೀವಿಸುತ್ತಿದ್ದರು. ಅವರು ಯಾವಾಗಲೂ ಯೂದಾಯಕ್ಕೆ ದಕ್ಷಿಣದಲ್ಲಿ ಅಮಲೇಕ್ಯರೇ ಮುಂತಾದ ಅಡವಿ ಜಾತಿಯವರ ಮೇಲೆ ಬಿದ್ದು ಕೊಳ್ಳೆ ಹೊಡೆಯುತ್ತಾ ಬಹಳ ದ್ರವ್ಯವನ್ನು ಸಂಪಾದಿಸುತ್ತಾ ಬಂದರು. ಇಂಥಾ ದುಷ್ಪ್ರವರ್ತನೆಗೆ ಆ ಕಾಲಸ್ಥಿತಿಯೂ ಆ ಅಡವಿಯ ಜನಗಳ ಪದ್ಧತಿಯೂ ಕಾರಣವಾಗಿದ್ದಿತು. ದಾವೀದನು ನಡಸುತ್ತಿದ್ದ ಕೊಳ್ಳೆಯಾದರೋ ಅತಿ ಕ್ರೂರವಾಗಿರುತ್ತಿತ್ತು. ಅಂಥಾ ಅನಾಗರಿಕತೆಯ ಕಾಲದಲ್ಲಿಯಾದರೂ ದಾವೀದನ ಇಂಥಾ ಕ್ರೂರತ್ವಕ್ಕೆ ತಕ್ಕ ನೆವವಿದ್ದಿಲ್ಲ. ಮತ್ತು ಆತನು ಸೌಲನ ವಿಷಯದಲ್ಲಿ ತೋರಿಸಿದ ಉದಾರತ್ವಕ್ಕೂ ಈ ನಿರ್ಭಾಗ್ಯರಲ್ಲಿ ನಡಿಸಿದ ಕ್ರೂರತ್ವಕ್ಕೂ ಎಷ್ಟೋ ತಾರತಮ್ಯವಿದೆ. ತಾನು ಸೂರೆಮಾಡಿದ ಪಟ್ಣದವರು ಅಕೀಷನಿಗೆ ವರ್ತಮಾನವನ್ನು ತಿಳಿಸದ ಹಾಗೆ ಅವರ ಹೆಂಗಸರನ್ನು ಮಕ್ಕಳನ್ನು ಸಹಾ ಕೊಲ್ಲುತ್ತಿದ್ದನು. ಮತ್ತು ದಾವೀದನು ಕೊಳ್ಳೇ ದ್ರವ್ಯದ ಭಾಗವನ್ನು ಅರಸನಿಗೆ ಕೊಡುವಾಗ ಈ ಕೊಳ್ಳೆಗಳು ಅರಸನ ಶತ್ರುಗಳಾದ ಯೂದಾಯದವರ ಮೇಲೆ ಮಾಡಲ್ಪಟ್ಟವುಗಳೆಂದು ಅಬದ್ಧ ನುಡಿಯುವನು. ಪ್ರಾಚೀನಕಾಲದಲ್ಲಿ ಒಳ್ಳೆಯವರಾಗಿದ್ದವರೂ ಸಹಾ ಶತ್ರುಗಳನ್ನು ಶತ್ರುವಾಗಿಯೇ ಭಾವಿಸಬೇಕೆಂಬ ಅಭಿಪ್ರಾಯದಿಂದ ನಡಕೊಂಡರೆಂಬುವದಕ್ಕೆ ಅನೇಕ ದೃಷ್ಟಾಂತಗಳಿವೆ. ಅವುಗಳಲ್ಲಿ ದಾವೀದನ ದೃಷ್ಟಾಂತವು ಒಂದು.

### ದಾವೀದನನ್ನು ಇಸ್ರಾಯೇಲರ ಮೇಲೆ ಯುದ್ಧಮಾಡುವದಕ್ಕೆ ಕರೆದದ್ದು.

[i ಸಮು. xxviii. 1, 2; xxix.]

ಈಗ ದಾವೀದನು ಇಸ್ರಾಯೇಲರ ಮೇಲೆ ಯುದ್ಧಕ್ಕೆ ಹೋಗಬೇಕಾದ ಸಂದರ್ಭವು ಬಂದೊದಗಿತು. ಫಿಲಿಷ್ಟಿಯರಿಗೂ ಸೌಲನಿಗೂ ಯುದ್ಧವು ಬೆಳೆಯಿತು. ದಾವೀದನು ತನ್ನ ೬೦೦ ಮಂದಿಯೊಡನೆ ತನ್ನ ಸ್ವದೇಶದ ಮೇಲೆ ಯುದ್ಧ ಮಾಡುವದು ಘೋರ ಕಾರ್ಯವಾಗಿದ್ದಾಗ್ಯೂ ಆತನು ಅರಸನ ಅಪ್ಪಣೆಯ ಮೇರೆಗೆ ಯುದ್ಧಕ್ಕೆ ಸನ್ನದ್ಧನಾದನು. ಈತನು ಇಜ್ರೆಯೇಲಿನ ಮೈದಾನದ ಯುದ್ಧರಂಗಕ್ಕೆ ಅರಸನೊಡನೆ ಸೇರಿದಾಗ ಇತರ ಫಿಲಿಷ್ಟಿಯ ಪ್ರಭುಗಳು, ದಾವೀದನು ಯುದ್ಧದ ಸಮಯದಲ್ಲಿ ತನ್ನ ಸ್ವಂತ ಅರಸನಾದ ಸೌಲನ ಸಂಗಡ ಸೇರಿ

Digitized by ROJA MUTHIAH RESEARCH LIBRARY

ಕೊಂಡು ಫಿಲಿಷ್ಟಿಯರನ್ನು ಹಾವಳಿ ಮಾಡುವದಕ್ಕೆ ಆತನಿಗೆ ಇದಕ್ಕಿಂತಲೂ ಬೇರೆ ಸಂದರ್ಭವು ಇದೆಯೇ ಎಂತ ಹೇಳಿ ದಾವೀದನು ಯುದ್ಧದೊಳಗೆ ಸೇರದ ಹಾಗೆ ಆಕ್ಷೇಪಿಸಿದರು. ಆದರೆ ಆಕೀಷನು ತನಗೆ ದಾವೀದನ ಮೇಲೆ ಯಾವ ಸಂದೇಹವಾದರೂ ಇಲ್ಲವೆಂತಲೂ ತಾನು ದಾವೀದನನ್ನು ಪೂರ್ಣವಾಗಿ ನಂಬಿದವನೆಂತಲೂ, ಆದರೆ ಇತರ ಪ್ರಭುಗಳು ಆಕ್ಷೇಪಿಸಿದ್ದರಿಂದ ಹಿಂದಕ್ಕೆ ಕಳುಹಿಸ ಬೇಕಾಯಿತೆಂತಲೂ ಹೇಳಿ ದಾವೀದನನ್ನು ಕಳುಹಿಸಿ ಬಿಟ್ಟನು. ಹೀಗೆ ಯುದ್ಧರಂಗದಿಂದ ತಿರುಗಿ ಬಂದದ್ದು ದಾವೀದನಿಗೆ ಅಸಮ್ಮತವಾಗಿರಲಿಲ್ಲ. ಯಾಕಂದರೆ ಆತನು ಇಸ್ರಾಯೇಲರ ಸಂಗಡ ಕಾಳಗ ಮಾಡದೆ ಇದ್ದದ್ದು ಆತನು ಇಸ್ರಾಯೇಲಿನ ಸಿಂಹಾಸನಾರೂಢನಾಗುವದಕ್ಕೆ ಸುಲಭವಾದ ಮಾರ್ಗವಾಯಿತು.

### ಚಿಕ್ಲಗನ್ನು ಸುಟ್ಟುಹಾಕಿದ್ದು ; ದಾವೀದನು ಪ್ರತೀಕಾರಮಾಡಿದ್ದು.

[i ಸಮು. xxx.]

ದಾವೀದನು ಊರು ಬಿಟ್ಟು ಹೋಗಿ ಮೂರು ದಿವಸ ಮಾತ್ರ ಆಗಿತ್ತು. ಆತನು ಹಿಂತಿರುಗಿ ಬಂದು ನೋಡುವಲ್ಲಿ ಆ ಗ್ರಾಮವೆಲ್ಲ ಸುಡಲ್ಪಟ್ಟು ಹೊಗೆ ಹಾಯುತ್ತಿದ್ದುದನ್ನು ಕಂಡನು. ನಡೆದ ಸಂಗತಿಯನ್ನು ಆತನ ಪರಿವಾರದವರು ಚನ್ನಾಗಿ ಪರಿಶೋಧಿಸಿದ ಮೇಲೆ ಮನುಷ್ಯರ ಶವಗಳೊಂದೂ ಕಾಣದ್ದರಿಂದ ಶತ್ರುಗಳು ಊರನ್ನು ಮಾತ್ರ ಸುಟ್ಟುಬಿಟ್ಟು ಹೆಂಗಸರನ್ನೂ ಮಕ್ಕಳನ್ನೂ ಗುಲಾಮರಾಗಿ ಹಿಡಿದುಕೊಂಡು ಹೋಗಿದ್ದಾರೆಂದು ನಿಶ್ಚಯಿಸಿ ಅವರನ್ನು ಬಿಡಿಸಿಕೊಂಡು ಬರಬಹುದೆಂದು ಗೊತ್ತುಮಾಡಿಕೊಂಡರು. ದಾವೀದನು ನಡಿಸಿದ ಕ್ರೂರತ್ವಕ್ಕೆ ಬದಲಾಗಿ ಅಮಲೇಕ್ಯರು ದೊಡ್ಡ ಗುಂಪಾಗಿ ದಕ್ಷಿಣದಿಂದ ಬಂದು, ದಾವೀದನು ಇಲ್ಲದಿರುವ ಸಮಯವನ್ನು ನೋಡಿ ಆ ಊರಿನ ಮೇಲೆ ಬಿದ್ದು ಹಾಳುಮಾಡಿದರು. ಇದು ತರುವಾಯ ಗೊತ್ತಾಯಿತು. ಆತನ ಪರಿವಾರದವರು ಈ ಭಯಂಕರವಾದ ಸಂಗತಿಯನ್ನು ನೋಡಿ ಮನಗುಂದಿದವರಾಗಿ ತಮ್ಮ ನಾಯಕನಾದ ದಾವೀದನನ್ನು ಕಲ್ಲೆಸೆಯಲು ಉದ್ದೇಶಿಸಿದರು. ಆದರೆ ದಾವೀದನು ಇಂಥಾ ಸಮಯದಲ್ಲಿ ತನ್ನ ದೃಢವಿಶ್ವಾಸವನ್ನು ಹೋಗಲಾಡಿಸಿಕೊಳ್ಳಲಿಲ್ಲ. ಆತನು ಅಬ್ಯತಾರನಿಗೆ ನಿಲುವಂಗಿಯನ್ನೂ ಎಫೋದನ್ನೂ ಧರಿಸಮಾಡಿ ಶತ್ರುಗಳನ್ನು ಬೆನ್ನಟ್ಟಿ ಜಯಿಸಬಹುದೋ ಕೂಡದೋ ಎಂದು ದೇವರನ್ನು ಕೇಳಿದನು. ಅದಕ್ಕೆ ತಕ್ಕ ಉತ್ತರ ಬಂದಮೇಲೆ ದಾವೀದನು ಬಳಲಿ ಇದ್ದ ತನ್ನ ಭಟರನ್ನು ತಿರಿಗಿ ಶತ್ರುಗಳ ಮೇಲೆ ನಡಿಸಿದನು. ಅವರು ಬಿಸೊರವೆಂಬ ಕಣಿವೆ ಸೇರಿದಾಗ ದಾವೀದನ ದಂಡಿನಲ್ಲಿ ಇನ್ನೂರು ಮಂದಿ ಪೂರಾಯಾಸದಿಂದ ಬಳಲಿ ಮುಂದಕ್ಕೆ ನಡೆಯಲಾರದೆ ಹೋದರು. ಆಗ ದಾವೀದನು ಆ ಇನ್ನೂರು ಮಂದಿಯನ್ನು ಅಲ್ಲಿಯೇ ಬಿಟ್ಟು, ಉಳಿದವರನ್ನು ಮುಂದಕ್ಕೆ ಕರಕೊಂಡು ಹೋಗುತ್ತಿರುವಾಗ, ಬಹಳ ಹಸಿವಿನಿಂದಲೂ ರೋಗದಿಂದಲೂ ಅಸ್ವಸ್ಥನಾಗಿ ತನ್ನ ಯಜಮಾನನಿಂದ ಸಾಯುವದಕ್ಕೆ ದಾರಿಯಲ್ಲಿ ಬಿಡಲ್ಪಟ್ಟ ಒಬ್ಬ ಐಗುಪ್ತ್ಯ ಗುಲಾಮನನ್ನು ದಾರಿಯಲ್ಲಿ ಕಂಡರು. ಅವನಿಗೆ ಖರ್ಜೂರದ ಹಣ್ಣುಗಳನ್ನು ತಿನ್ನಿಸಿದ ಮೇಲೆ ಅವನು ಸ್ವಲ್ಪ ಚೇತರಿಸಿ



ಕೊಂಡು ತಾನು ಅಮಲೇಕ್ಯರ ದಂಡಿಗೆ ಸೇರಿದವನೆಂದು ತಿಳಿಸಿದನು. ಅನಂತರ ದಾವೀದನು ಅವರ ದಂಡಿನ ವಿಷಯ ವಿಚಾರಿಸಿದಾಗ ಅವನು ತನ್ನನ್ನು ಕೊಲ್ಲದೆಯೂ ತನ್ನ ಯಜಮಾನನಿಗೆ ಒಪ್ಪಿಸಿಕೊಡದೆಯೂ ಇರುತ್ತೇವೆಂದು ಮಾತುಕೊಟ್ಟರೆ ಅವರಿರುವ ಸ್ಥಳವನ್ನು ತೋರಿಸಿಕೊಡುವೆನೆಂದನು. ದಾವೀದನು ಅದೇ ಮೇರಿಗೆ ಮಾತುಕೊಟ್ಟ ಮೇಲೆ, ಅವರನ್ನು ಅಮಲೇಕ್ಯರ ದಂಡಿದ್ದಲ್ಲಿಗೆ ಕರೆದುಕೊಂಡು ಹೋದನು. ಅಲ್ಲಿ ಅಮಲೇಕ್ಯರು ತಮ್ಮನ್ನು ಯಾರೂ ಕಂಡುಕೊಳ್ಳಲಾರರೆಂದು ತಮಗುಂಟಾದ ಜಯಕ್ಕಾಗಿ ಅತಿ ಉಲ್ಲಾಸದಿಂದ ಹಬ್ಬಾ ಮಾಡುತ್ತಿದ್ದರು. ದಾವೀದನು ಅವರ ಮೇಲೆ ಬಿದ್ದು ಹೊತ್ತಾರೆಯಿಂದ ಸಾಯಂಕಾಲದ ವರೆಗೂ ಅವರ ಸಂಗಡ ಕಾದಿ ಅವರಲ್ಲನೇಕರನ್ನು ಕೊಂದು ಸಂಪೂರ್ಣ ಜಯವನ್ನು ಹೊಂದಿದನು. ಯುದ್ಧದಲ್ಲಿ ಸೇರದೆ ಪ್ರತ್ಯೇಕವಾಗಿದ್ದ ೪೦೦ ಮಂದಿ ಗುಲಾಮರು ಮಾತ್ರ ಒಂಟೆಗಳ ಮೇಲೇರಿ ತಪ್ಪಿಸಿಕೊಂಡು ಓಡಿ ಹೋದರು. ಅಮಲೇಕ್ಯರಿಂದ ಸೆರೆಹಿಡಿಯಲ್ಪಟ್ಟಿದ್ದ ಹೆಂಗಸರು ಮಕ್ಕಳೆಲ್ಲರು ಒಬ್ಬರೂ ತಪ್ಪದೆ ಬಿಡಿಸಲ್ಪಟ್ಟರು. ಅಮಲೇಕ್ಯರ ಕೊಳ್ಳೆಯೆಲ್ಲಾ ಇವರ ಕೈಗೆ ಬಿತ್ತು. ಕೊಳ್ಳೆಯಲ್ಲಿ ಸಿಕ್ಕಿದ ದನಕುರಿಗಳನ್ನೆಲ್ಲಾ ನಾಯಕನಾದ ದಾವೀದನಿಗೆ ಕೊಟ್ಟುಬಿಟ್ಟರು. ಬಟ್ಟೆಗಳು ಒಡವೆಗಳು ಮೊದಲಾದ್ದೆಲ್ಲವೂ ಸಮವಾಗಿ ಭಾಗಿಸಲ್ಪಟ್ಟಿತು. ಯುದ್ಧ ಮಾಡಿದ ೪೦೦ ಮಂದಿ ಮಾರ್ಗಾಯಾಸದಿಂದ ಅರ್ಧ ದಾರಿಯಲ್ಲಿ ನಿಂತುಹೋದ ಇನ್ನೂರು ಮಂದಿಗೆ ಸಮಭಾಗವನ್ನು ಕೊಡುವದಕ್ಕೊಪ್ಪಲಿಲ್ಲ. ಆದರೆ ದಾವೀದನು – ಈ ಕೊಳ್ಳೆಯೆಲ್ಲಾ ಸ್ವಂತ ಕಷ್ಟದಿಂದ ಸಂಪಾದಿಸಿದ್ದಾಗಿರದೆ ಯೆಹೋವನು ಕೊಟ್ಟದ್ದಾಗಿರುವದರಿಂದ ಎಲ್ಲರು ಸಮಭಾಗವಾಗಿ ಹಂಚಿಕೊಳ್ಳಬೇಕೆಂದು ಅವರಿಗೆ ಹೇಳಿದನು. ಈ ಪ್ರಕಾರ ಯುದ್ಧರಂಗದಲ್ಲಿರುವವರೂ ಕೋಟೆಯನ್ನು ಕಾಯುತ್ತಾ ಮನೆಯಲ್ಲಿರುವವರೂ ಕೊಳ್ಳೆಯಲ್ಲಿ ಪಾಲುಹೊಂದಬಹುದೆಂಬುವದು ಇಸ್ರಯೇಲ್ಯರೊಳಗೆ ಒಂದು ಪದ್ಧತಿಯಾಯಿತು. ದಾವೀದನು ತನಗೆ ಬಂದ ಕೊಳ್ಳೆಯಲ್ಲಿ ಯೂದಾಯ ಸೀಮೆಯ ದಕ್ಷಿಣದಲ್ಲಿರುವ ಮುಖ್ಯ ಪಟ್ಟಣಗಳ ಹಿರಿಯರಿಗೆಲ್ಲಾ ಬಹುಮಾನಗಳನ್ನು ಕಳುಹಿಸಿಕೊಟ್ಟನು. ತಾನು ಹೀಗೆ ಕಳುಹಿಸಿಕೊಟ್ಟದ್ದರಿಂದ ಸದ್ಯಕ್ಕೆ ಫಿಲಿಷ್ಟಿಯರ ಸಾಮಂತನಾಗಿದ್ದರೂ ತಾನು ಇನ್ನೂ ಇಸ್ರಾಯೇಲರಿಗೇ ಸೇರಿದವನೆಂತಲೂ ಸ್ವಲ್ಪ ಕಾಲಮಾತ್ರ ಫಿಲಿಷ್ಟಿಯರ ದೇಶದಲ್ಲಿ ವಾಸಮಾಡುವವನಾಗಿದ್ದೇನೆಂತಲೂ ತಿಳುಕೊಳ್ಳಬೇಕೆಂದು ಸೂಚಿಸಿದನು.

### ಸೌಲನ ಮರಣದ ಸುದ್ದಿ.

[ii ಸಮು. i.]

ದಾವೀದನು ಚಿಕ್ಲಗಿಗೆ ಹಿಂತಿರುಗಿ ಬಂದ ಮೂರನೇ ದಿನದಲ್ಲಿ ಅಮಲೇಕ್ಯರವನೊಬ್ಬನು ತನ್ನ ಬಟ್ಟೆಗಳನ್ನು ಹರಕೊಂಡು ಕೂದಲನ್ನು ಕೆದರಿಸಿಕೊಂಡು ದಾವೀದನ ಬಳಿಗೆ ಬಂದು ಸಾಷ್ಟಾಂಗ ನಮಸ್ಕಾರಮಾಡಿ ಇಸ್ರಾಯೇಲರ ಸೌಲರಾಜನ ಚಿನ್ಹೆಗಳಾದ ಕಿರೀಟವನ್ನೂ ಅವನ ಕೈಕಡಗಗಳನ್ನೂ ದಾವೀದನ ಪಾದಗಳ ಬಳಿಯಲ್ಲಿರಿಸಿದನು. ಮತ್ತು ಇಸ್ರಯೇಲ್ಯರು ಗಿಲ್ಬೋವ ಪರ್ವತದ ಮೇಲೆ ಪರಾಜಿತರಾದರೆಂದೂ, ಸೌಲನೂ ಯೋನತಾನನೂ ಮಡಿದ

Digitized by ROJA MUTHIAH RESEARCH LIBRARY

ರೆಂದೂ, ತಾನೇ ಸೌಲನನ್ನು ಕೊಂದು ಅವನ ಕಡಗವನ್ನೂ ಕಿರೀಟವನ್ನೂ ತಂದೆನೆಂದೂ ಇವನು ದಾವೀದನಿಗೆ ತಿಳಿಸಿದನು. ಇವನ ಕಥೆಯು ಅನೇಕ ವಿಷಯಗಳಲ್ಲಿ ಅಸಂಗತವಾಗಿದೆ. ಮತ್ತು i ಸಮು. xxxi ನೇ ಅಧ್ಯಾಯದಲ್ಲಿ ಬರೆಯಲ್ಪಟ್ಟ ಸೌಲನ ಮರಣದ ವೃತ್ತಾಂತಕ್ಕೆ ಇವನ ಕಥೆಯು ಒಪ್ಪುವದಿಲ್ಲ. ಇವನು ಯುದ್ಧ ಸಮಯದಲ್ಲಿ ಗಿಲ್ಬೋವ ಪರ್ವತದ ಮೇಲೆ ಇದ್ದ ಹಾಗೂ ಫಿಲಿಷ್ಟಿಯರು ಬೆನ್ನಟ್ಟಿ ಬರುತ್ತಿರುವಾಗ ಸೌಲನು ತನ್ನ ಈಟಿಯ ಮೇಲೆ ಆಯಾಸವಾಗಿ ಆತುಕೊಂಡು ಇದ್ದಂತೆಯೂ, ಇವನನ್ನು ನೋಡಿ ತನ್ನ ನೋವು ಶೀಘ್ರದಲ್ಲಿ ತೀರುವ ಹಾಗೆ ಮಾಡ ಬೇಕೆಂದು ಅರಸನು ಬೇಡಿಕೊಂಡ ಹಾಗೂ, ಅರಸನು ತುಂಬಾ ಘಾಯ ಪಟ್ಟಿದ್ದಾನೆಂದು ನೆನಸಿ ಆತನನ್ನು ತಾನು ಕೊಂದಾತೆಯೂ ಅರಿಕೆ ಮಾಡಿದನು. ಬಹುಶಃ ಈ ಸಮಾಚಾರವನ್ನು ತಂದದ್ದಕ್ಕೆ ತನಗೆ ಬಹುಮಾನ ಸಿಕ್ಕುವದೆಂದು ಈ ಅಮಲೇಕ್ಯರವನು ನೆನಸಿದ್ದನು. ಆದರೆ ಅದಕ್ಕೆ ಬದಲಾಗಿ ಶಿಕ್ಷೆಯೇ ಇವನಿಗೆ ದೊರೆಯಿತು. ಇವನ ವೃತ್ತಾಂತವನ್ನು ಕೇಳಿ ದಾವೀದನೂ ಅವನ ಮನುಷ್ಯರೂ ತಮ್ಮ ಬಟ್ಟೆಗಳನ್ನು ಹರುಕೊಂಡು ಸೌಲನಿಗೋಸ್ಕರವೂ ಆ ದಿನ ಯುದ್ಧದಲ್ಲಿ ಸತ್ತುಹೋದ ತಮ್ಮ ಸ್ನೇಹಿತರಿಗೋಸ್ಕರವೂ ಗೋಳಾಡಿದರು. ಅಮಲೇಕ್ಯರವನು ತನ್ನ ಬಾಯಿಯಿಂದಲೇ ರಾಜಘಾತುಕನೆಂದು ಅರಿಕೆ ಮಾಡಿದ್ದರಿಂದ ದಾವೀದನು ಆ ಕ್ಷಣವೇ ಅವನ ತಲೆಯನ್ನು ಕಡಿಸಿ ಹಾಕಿದನು. ದಾವೀದನು ಹೀಗೆ ಮಾಡಿದ್ದು ತನಗೂ ಸೌಲನಿಗೂ ಇದ್ದ ವಿರೋಧವು ದುರಾಶೆಯಿಂದಲಾದರೂ ಇಲ್ಲವೆ ಅಧಿಕಾರದ ಆಶೆಯಿಂದಲಾದರೂ ಹುಟ್ಟಿದ್ದಲ್ಲವೆಂದು ತೋರಿಸಲಿಕ್ಕೆ ಒಂದು ಉದಾಹರಣೆಯಾಗಿದೆಯಷ್ಟೆ. ದಾವೀದನು ತನ್ನ ಪ್ರಯೋಜನವನ್ನು ಹುಡುಕುವದಕ್ಕಿಂತಲೂ ದೇವರ ಕಟ್ಟಳೆಯನ್ನು ವಿಧೇಯಿಸಿ ನಡೆಯುವದು ಅವಶ್ಯಕವೆಂದು ಇದರಿಂದ ಸೂಚಿಸಿದನು. ಈ ಸಮಯದಲ್ಲಿ ದಾವೀದನು ಕಟ್ಟಿದ ಶೋಕರಸ ಪೂರಿತವಾದ ಗೀತವನ್ನು ಯೂದಾಯದವರೆಲ್ಲರು ಬಾಯಿಪಾಠ ಮಾಡಬೇಕೆಂದು ಆಜ್ಞಾಪಿಸಿದನು. ಇದು ಮೊದಲು ಯಾಶೇರನ ಪುಸ್ತಕದಲ್ಲಿ (ಅಂದರೆ "ನೀತಿವಂತನ ಪುಸ್ತಕ") ಎಂಬುವ ಜನಾಂಗದ ಗೀತಗಳ ಪುಸ್ತಕದಲ್ಲಿ ಸೇರಿಸಲ್ಪಟ್ಟಿತ್ತು. ಸಮುವೇಲನ ಪುಸ್ತಕದ ಗ್ರಂಥಕರ್ತನು ಆ ಗೀತಗಳ ಪುಸ್ತಕದಿಂದಲೆ ಇದನ್ನು ತೆಗೆದು ಬರೆದಿದ್ದಾನೆ. ಆ ಗೀತವು ಯಾವದಂದರೆ—

ನಿನ್ನ ಉನ್ನತ ಸ್ಥಾನಗಳ ಮೇಲೆ ಮಡಿದವರಿಗಾಗಿ, ಓ ಇಸ್ರಾಯೇಲೇ!
ಜ್ಞಾಪಕಾರ್ಥದ ಸ್ತಂಭವನ್ನು ನಿಲ್ಲಿಸು—
ಅಯ್ಯೋ! ಶೂರರು ಹ್ಯಾಗೆ ಮಡಿದರು!
ಈ ಸಂಗತಿಯನ್ನು ಗಾತಿನಲ್ಲಿ ತಿಳಿಸಬೇಡಿರಿ
ಈ ವರ್ತಮಾನವನ್ನು ಅಷ್ಕೆಲೋನಿನಲ್ಲಿ ಪ್ರಕಟಿಸ ಬೇಡಿರಿ
ಯಾಕಂದರೆ ಫಿಲಿಷ್ಟಿಯರ ಕುಮಾರಿಯರು ಸಂತೋಷದಿಂದ ಉಬ್ಬುವರು!
ಗಿಲ್ಬೋವ ಪರ್ವತವೇ, ನಿನ್ನ ಮೇಲೆ ಮಳೆಯಾಗಲಿ
ಮಂಜಾಗಲಿ ಗರಿಯದೆ ಇರಲಿ
ಎಲಾ, ಸಾವಿನ ಗುಡ್ಡಗಳ ಪ್ರಾಂತ್ಯವೇ!
ಯಾಕಂದರೆ ಅಲ್ಲಿ ಶೂರರ ಗುರಾಣಿಗಳು ಅವಮಾನವನ್ನು ಹೊಂದಿದವು.



ಎಣ್ಣೆಯಿಂದ ಅಭಿಷೇಕಿಸಲ್ಪಟ್ಟವನಾದ ಸೌಲನ ಗುರಾಣಿಯು ಸಹ (ಮಾನಭಂಗವನ್ನು ಹೊಂದಿತು)
ಮನುಷ್ಯರ ರಕ್ತದಿಂದಲೂ ಬಲಶಾಲಿಗಳ ಕೊಬ್ಬಿನಿಂದಲೂ
ಯೋನತಾನನ ಅಂಬು ಹಿಂಜರಿಯಲಿಲ್ಲ:
ಸೌಲನ ಕತ್ತಿಯಾದರೂ ಹಿಂದಿರುಗಲಿಲ್ಲ.
ಸೌಲನೂ, ಯೋನತಾನನೂ—ಹಾ! ಪ್ರಿಯರೇ, ಇಷ್ಟರೇ—
ಜೀವಕಾಲದಲ್ಲಿ ಒಂದಾಗಿದ್ದಂತೆಯೇ ಅವರು ತಮ್ಮ
ಮರಣದಲ್ಲಿಯೂ ಬಿಟ್ಟಗಲಲಿಲ್ಲ.
ಹದ್ದುಗಳಿಗಿಂತ ತ್ವರಿತಗಾಮಿಗಳೂ
ಸಿಂಹಗಳಿಗಿಂತ ಬಲಿಷ್ಠರೂ ಆಗಿದ್ದರು.
ಇಸ್ರಾಯೇಲಿನ ಕುಮಾರಿಯರೇ, ಸೌಲನಿಗೋಸ್ಕರ ಅಳಿರಿ!
ಯಾಕಂದರೆ ಆತನು ನಿಮ್ಮ ಆಭರಣಗಳ ಸಂಗಡ ನಿಮಗೆ ರಕ್ತಾಂಬರವನ್ನು ಹೊದಿಸಿದನು.
ನಿಮ್ಮ ಉಡುಪುಗಳನ್ನು ಚಿನ್ನದಿಂದ ಅಲಂಕರಿಸಿದನು.
ಅಯ್ಯೋ, ಪರಾಕ್ರಮಿಗಳು ಯುದ್ಧದೊಳಗೆ ಬಿದ್ದರಲ್ಲಾ!
ಯೋನತಾನನು ನಿನ್ನ ಉನ್ನತಾದ್ರಿಗಳ ಮೇಲೆ ಕೊಲ್ಲಲ್ಪಟ್ಟನು!
ನೀನು ನನಗೆ ಅತಿಪ್ರಿಯನಾಗಿದ್ದಿ, ನನ್ನ ಸಹೋದರನಾದ ಯೋನತಾನನೇ, ನಿನಗಾಗಿ ಖಿನ್ನನಾಗಿದ್ದೇನೆ.
ನಿನ್ನ ಪ್ರೀತಿಯು ಅತ್ಯದ್ಭುತವಾದದ್ದು,
ಸ್ತ್ರೀಯರ ಪ್ರೀತಿಗಿಂತ ಅಧಿಕವಾದದ್ದು.
ಶೂರರು ಹ್ಯಾಗೆ ಬಿದ್ದರಕಟಾ!
ಅಯ್ಯೋ, ಯುದ್ಧೋಪಕರಣಗಳು (ಅಂದರೆ ಯೋಧರು) ನಾಶವಾದವಲ್ಲಾ!

## ದಾವೀದನು ಹೆಬ್ರೋನಿನಲ್ಲಿ ಅಭಿಷೇಕಿಸಲ್ಪಟ್ಟದ್ದು.

[ii ಸಮು. ii: 1—4.]

ಚಿಕ್ಲಗಿನಲ್ಲಿದ್ದ ದಾವೀದನ ಮನೆಯನ್ನು ಶತ್ರುಗಳು ಸುಟ್ಟು ಹಾಕಿದರೆಂದು ಮುಂಚೆಯೇ ನಾವು ಹೇಳಿದೆವಷ್ಟೆ. ಅದು ತಿರುಗಿ ಕಟ್ಟಲ್ಪಡಲಿಲ್ಲವಾದುದರಿಂದ ದಾವೀದನು ಇನ್ನೊಂದು ಸಾರಿ ಯೂದಾಯ ಪ್ರಾಂತ್ಯದೊಳಗೆ ತನ್ನ ಮನೆ ಮಾಡಬೇಕಾಯಿತು. ಆದಕಾರಣ ತಾನು ಯೂದಾಯ ದೇಶದೊಳಗೆ ಹೋಗ ಬಹುದೋ ಕೂಡದೋ ಎಂದು ಯಾಜಕನ ಮೂಲಕ ಭಗವಂತನ ಅಪ್ಪಣೆಯನ್ನು ಬೇಡಿದನು. ಆಗ್ಯೆ ಯೆಹೂದ್ಯ ದೇಶದೊಳಗೆ ಪ್ರಸಿದ್ಧವಾಗಿದ್ದ ಪುರಾತನ ಪಟ್ಣವಾದ ಹೆಬ್ರೋನಿನಲ್ಲಿ ತನ್ನ ಮನೆ ಮಾಡಿಕೊಳ್ಳ ಬಹುದೆಂದು ಕರ್ತನು ಅವನಿಗೆ



Digitized by ROJA MUTHIAH RESEARCH LIBRARY

ತಿಳಿಸಿದನು. ಈಗ ಹೆಬ್ರೋನಿಗೆ ಎಲ್ಕಾಲಿಲ್ ಅಂದರೆ (ದೇವರ ಸ್ನೇಹಿತನು ಇಲ್ಲವೆ) ಅಬ್ರಹಾಮನ ಪಟ್ಟಣ ಎಂದು ಹೆಸರಿದೆ. ದಾವೀದನೂ ಆತನ ದಂಡಿನವರೂ ಹೆಬ್ರೋನಿಗೆ ಬಂದಾಗ ಅಲ್ಲಿ ನೆರೆದು ಬಂದಿದ್ದ ಯೂದಾಯದ ಹಿರಿಯರು ಇವರನ್ನು ಬಹಳ ಆದರದಿಂದ ಅಂಗೀಕರಿಸಿದರು. ಯಾಕಂದರೆ ಸೌಲನ ವಿಷಯ ಇವರಲ್ಲಿದ್ದ ರಾಜಭಕ್ತಿಯು ಹೆಸರಿಗೆ ಮಾತ್ರ ಇತ್ತು, ಇವರು ಸೌಲನ ಕೈಯಿಂದ ಪರಿಪಾಲನೆ ಹೊಂದಿದ್ದು ಕೂಡ ಸ್ವಲ್ಪವೇ ಎಂದು ಮೊದಲು ನೋಡಿರುತ್ತೇವೆ. ದಾವೀದನಾದರೋ ಅವರ ಗೋತ್ರದವನಾಗಿಯೂ ಅವರ ಪ್ರಾಣಾರ್ಥಗಳನ್ನು ಬಹು ಭದ್ರವಾಗಿ ಕಾಪಾಡಿದವನಾಗಿಯೂ ಇದ್ದನು. ಮತ್ತು ಚಿಕ್ಲಗಿನಿಂದ ಆಗಿಂದಾಗ್ಯೆ ದಂಡಯಾತ್ರೆ ಹೊರಟು, ತೆಂಕಣ ಕಡೆಯ ಅಡವಿಜನಗಳ ಬಲವನ್ನು ಕುಂದಿಸಿದ್ದನು. ಇಂಥಾ ಪರಾಕ್ರಮ ಕಾರ್ಯಗಳ ದೆಸೆಯಿಂದ ಯೂದಾಯದವರನ್ನು ಆಳುವದಕ್ಕೆ ತಾನೇ ತಕ್ಕವನೆಂದು ತೋರಿಸಿದನು. ಮತ್ತು ತಾನು ಚಿಕ್ಕವನಾಗಿರುವಾಗ ಸಮುವೇಲನು ತನ್ನನ್ನು ಅಭಿಷೇಕಿಸಿದ ಅಭಿಪ್ರಾಯವು ಈಗ ಅವರಿಗೆ ಗೊತ್ತಾಯಿತು. ಎಲ್ಲರು ಒಂದೇ ಮನಸ್ಸಿನಿಂದ ದಾವೀದನನ್ನು ತಮ್ಮ ಅರಸನಾಗ ಅಭಿಷೇಕಿಸಿ ಅವನಿಗೆ ಮಾತ್ರ ಪ್ರಜೆಗಳಾಗಿರುವೆವೆಂದು ವಾಗ್ದತ್ತ ಮಾಡಿದರು. ಕೆಂಪು ಕೂದಲೂ ಪ್ರಕಾಶವಾದ ದೃಷ್ಟಿಯೂ ಉಳ್ಳ ಈ ಯೌವನಸ್ಥನು ಮೂವತ್ತು ವರುಷದವನಾಗಿದ್ದರೂ ದೇವರು ತನಗೆ ಕೊಟ್ಟ ವರದ ಯೋಗ್ಯತೆಯ ದೆಸೆಯಿಂದಲೇ ಕುರಿಗಳ ಹಟ್ಟಿಯಿಂದ ಸಿಂಹಾಸನದ ವರೆಗೂ ಬಂದಿದ್ದನು. ದಾವೀದನಿಗೂ ಫಿಲಿಷ್ಟಿಯರಿಗೂ ಬಹುಕಾಲದ ವರೆಗೂ ಸಮಾಧಾನವಿದ್ದಿತೆಂದು ನಾವು ಓದುವದರಿಂದ ದಾವೀದನು ಇನ್ನೂ ಫಿಲಿಷ್ಟಿಯರ ಅರಸನಾದ ಅಕೀಷನಿಗೆ ಕಪ್ಪವನ್ನು ಕೊಡುತ್ತಾ ಸಾಮಂತನಾಗಿದ್ದನೆಂದು ಎಣಿಸ ಬಹುದು. ದಾವೀದನು ಚಿಕ್ಲಗಿನಲ್ಲಿರುವಾಗ ಮನಾಸ್ಸೆಯ ಗೋತ್ರದವರು ಬಂದು ದಾವೀದನ ದಂಡಿನೊಳಗೆ ಸೇರಿದ್ದರಿಂದ ಆತನ ದಂಡು ಹೆಚ್ಚಿತು. ಇವರು ದಾವೀದನು ಉತ್ತರ ಭಾಗದಲ್ಲಿ ಫಿಲಿಷ್ಟಿಯರ ಸೇನೆಯ ಸಂಗಡ ಸೇರಿಕೊಂಡಿದ್ದಾಗಲೇ ಗಿಲ್ಬೋವ ಯುದ್ಧಕ್ಕೆ ಮುಂಚೆ ದಾವೀದನ ಸಂಗಡ ಕೂಡಿಕೊಂಡಿದ್ದರು. ಹೀಗೆ ತನ್ನ ದಂಡು ಕಡಿಮೆಯಾಗಿ ಬಲವು ತಗ್ಗಿದ್ದನ್ನು ಸೌಲನು ನೋಡಿ ಮನಗುಂದಿದವನಾದನು. ಇದರಿಂದ ಇಸ್ರಾಯೇಲರೆಲ್ಲರ ಅನುರಾಗವನ್ನು ಸೌಲನು ಹೋಗಲಾಡಿಸಿಕೊಂಡಿದ್ದನೆಂಬುವದು ಬಹು ಸ್ಪಷ್ಟವಾಗಿ ತಿಳಿಯುತ್ತದೆ. ಮತ್ತು ಸೌಲನ ಗೋತ್ರದವರಾದ ಬೆನ್ಯಮೀನ್ಯರು ಸಹ ಚಿಕ್ಲಗಿನಲ್ಲಿ ಇವನನ್ನು ಸೇರಿಕೊಂಡರು. ಇವರು ಕವಣೆ ಅಂಬು ಮೊದಲಾದವುಗಳನ್ನು ಪ್ರಯೋಗಿಸುವದರಲ್ಲಿ ಅತಿ ಸಮರ್ಥರಾಗಿದ್ದರು. ಇವರೂ, ದಾವೀದನ ಸಂಗಡ ಆತನು ದೇಶಭ್ರಷ್ಟನಾಗಿದ್ದ ಕಾಲದಲ್ಲಿ ಚನ್ನಾಗಿ ಯುದ್ಧಾಭ್ಯಾಸ ಮಾಡಿದವರೂ, ದಾವೀದನೊಂದಿಗ್ರೆ ಹೆಬ್ರೋನಿಗೆ ಬಂದು ಆತನ ಸೈನ್ಯದಲ್ಲಿ ಮಾನನೀಯವಾದ ಉದ್ಯೋಗಗಳನ್ನು ಹೊಂದಿದವರಾದರು.

# ನಾಲ್ಕನೇ ಅಧ್ಯಾಯ.

## ಹೆಬ್ರೋನಿನಲ್ಲಿ ದಾವೀದನು ಯೂದಾ ಕುಲದವರ ಮೇಲೆ ಅರಸನಾದದ್ದು.

### ಸತ್ತವರಿಗೆ ದಯೆ ತೋರಿಸಿದವರನ್ನು ಕೊಂಡಾಡಿದ್ದು.

[ii ಸಮು ii. 4—7]

ಯಾಬೆಷ್ ಗಿಲ್ಯಾದಿನವರು ಸತ್ತ ಅರಸನಾದ ಸೌಲನಿಗೆ ಘನಮಾನಗಳನ್ನು ತೋರಿಸಿ ಪ್ರೇತಕಾರ್ಯವನ್ನು ಮಾಡಿದುದರಿಂದ ಅವರಿಗೆ ದಾವೀದನು ಕೃತಜ್ಞತಾವಂದನೆಗಳನ್ನು ಸಲ್ಲಿಸಿದನು. ಇದು ದಾವೀದನು ಅರಸನಾದ ಮೇಲೆ ಮಾಡಿದ ಮೊದಲನೇ ವಿಶೇಷ ಕಾರ್ಯವಾಗಿದೆ. ಫಿಲಿಷ್ಟಿಯರು ಸೌಲನನ್ನೂ ಅವನ ಮಮ್ಮಕ್ಕಳನ್ನೂ ಬೆತ್ಷಾನಿನ (ಈಗಿನ ಹೆಸರು ಬೈಸಾನ) ಗೋಡೆಗೆ ಜಡಿದು ತೂಗ ಹಾಕಿದ್ದರು. ಯಾಬೆಷ್ ಗಿಲ್ಯಾದಿನವರು ರಾತ್ರಿಯಲ್ಲಿ ಹೋಗಿ ಆ ಶವಗಳನ್ನು ತೆಗೆದುಕೊಂಡು ಬಂದು, ಬಹಳ ಮಾನಮರ್ಯಾದೆಗಳಿಂದ ತಮ್ಮ ಪಟ್ಟಣದಲ್ಲಿ ಹೂಳಿಟ್ಟಿದ್ದರು. ಇವರಿಗೆ ದಾವೀದನು ತನ್ನ ವಂದನೆಗಳನ್ನೂ ತಾನು ಅರಸನಾಗಿ ಅಭಿಷೇಕಿಸಲ್ಪಟ್ಟ ಶುಭ ಸಮಾಚಾರವನ್ನೂ ತಿಳಿಸಿದನು. ದಾವೀದನು ಈ ವರ್ತಮಾನವನ್ನು ಕಳುಹಿಸಿದ್ದು ನೋಡಿದರೆ ಉಳಿದ ಗೋತ್ರಗಳವರು ಸಹಾ ತನ್ನನ್ನು ಅರಸನಾಗ ಒಪ್ಪಿಕೊಳ್ಳುವರೆಂಬುವ ಕೋರಿಕೆಯುಳ್ಳವನಾಗಿದ್ದನೆಂದು ತೋರುತ್ತೆ.

### ಸ್ವರಾಷ್ಟ್ರ ಕಲಹ; ಅಸಹೇಲನ ಮರಣ.

[ii ಸಮು. ii. 8—32.]

ಯೂದಾ ಗೋತ್ರದವರು ದಾವೀದನನ್ನು ಅರಸನಾಗ ಮಾಡಿದ್ದಕ್ಕೆ ಉಳಿದ ಗೋತ್ರದವರು ಸಮ್ಮತಿಸದೆ ಇನ್ನೂ ಸೌಲನ ಮನೆತನದವರನ್ನೇ ಅನುಮೋದಿಸುವವರಾಗಿದ್ದರು. ಫಿಲಿಷ್ಟಿಯರು ಗಿಲ್ಬೋವ ಪರ್ವತದ ಯುದ್ಧದಲ್ಲಿ ಗೆದ್ದವರಾದಕಾರಣ ಯೋರ್ದನಿನ ಪಶ್ಚಿಮದಲ್ಲಿದ್ದ ಪ್ರಾಂತ್ಯದ ಅನೇಕ ಸೌಲನ ಪಡಿಕೊಂಡಿದ್ದರು. ಭಾಗಗಳನ್ನು ಸ್ವಾಧೀನ ಮಾಧಾನ ಮಂತ್ರಿಯೂ ಸೇನಾಪತಿಯೂ ಆಗಿದ್ದ ಅಬ್ನೇರನು ಸೌಲನ ವಂಶದಲ್ಲಿ ಉಳಿದ ಒಬ್ಬನೇ ಮಗನಾದ ಇಷ್ಬೋಷೆತನನ್ನು ಯೋರ್ದನಿಗೆ ಆಚೆ ಮಹಾನಾಯಿಮಿಗೆ ಕರಕೊಂಡು ಹೋಗಿ ಅಲ್ಲಿ ಅವನಿಗೆ ಪಟ್ಟಾಭಿಷೇಕ ಮಾಡಿಸಿದನು. ಇವನು ಆಲಸ್ಯಭಾವವುಳ್ಳ, ಕೆಲಸಕ್ಕೆ ಬಾರದ ಅರಸನಾಗಿದ್ದನು. ಇವನು ಅಬ್ನೇರನ ಕೈಯಲ್ಲಿ ಒಂದು ಗೊಂಬೆಯಂತೆ ಇದ್ದನು. ಈಗ ಈ ಎರಡು

Digitized by ROJA MUTHIAH RESEARCH LIBRARY

ರಾಜ್ಯಗಳವರಿಗೆ ಯುದ್ಧವು ಬಂದೊದಗುವ ಹಾಗೆ ತೋರಿತು. ಉತ್ತರ ರಾಜ್ಯದವರು ದಕ್ಷಿಣರಾಜ್ಯದವರನ್ನು ದಕ್ಷಿಣ ರಾಜ್ಯದವರು ಉತ್ತರ ರಾಜ್ಯದವರನ್ನು ದಂಗೆಗಾರರೆಂದು ನಿಂದಿಸಿದರು. ಉಭಯರಿಗೆ ಬಹು ಕಾಲದಿಂದ ಸಂಭವಿಸುವ ಹಾಗೆ ತೋರುತ್ತಿದ್ದ ಯುದ್ಧವು ವಿಶೇಷ ರೀತಿಯಲ್ಲಿ ಸಂಘಟಿಸಿತು. ಅಬ್ನೇರನ ಕೆಳಗಿದ್ದ ಭಟರ ಒಂದು ಗುಂಪು ದಾವೀದನ ಸೋದರದಳಿಯನೂ ಅವನ ದಂಡಿನ ಸೇನಾನಿಯೂ ಆಗಿದ್ದ ಯೋವಾಬನ ಭಟರ ಒಂದು ಗುಂಪನ್ನು ಯೆರೂಸಲೇಮಿಗೆ ಎರಡು ಹರದಾರಿ ದೂರದಲ್ಲಿದ್ದ ಗಿಬಿಯೋನಿನ (ಈಗಿನ ಹೆಸರು ಎಲ್ಜಿಬ್) ಕೊಳದ ಹತ್ತರ ಸಂಧಿಸಿತು. ಎರಡು ಗುಂಪಿನವರು ಇಸ್ರಾಯೇಲರಾಗಿದ್ದದರಿಂದ ಯುದ್ಧ ಮಾಡುವದಕ್ಕೆ ಮೊದಲು ಹಿಂದೆಗೆದರು. ಆದರೆ ಪ್ರತಿ ಒಂದು ಗುಂಪಿನಿಂದ ಹನ್ನೆರಡು ಮಂದಿ ಈಚೆಗೆ ಬಂದು ಯುದ್ಧಾಯುಧಗಳನ್ನು ಪ್ರಯೋಗಿಸುವದರಲ್ಲಿ ತಂತಮ್ಮ ಸಾಮರ್ಥ್ಯವನ್ನು ತೋರಿಸುವದಕ್ಕೆ ಕಪಟ ಯುದ್ಧವನ್ನು ಮಾಡಲಿ ಎಂದು ಅಬ್ನೇರನು ಹೇಳಿದಾಗ ಯೋವಾಬನೂ ಅದಕ್ಕೆ ಸಮ್ಮತಿಸಿದನು. ಉಭಯ ಸೇನೆಗಳವರಲ್ಲಿಯೂ ಪರಸ್ಪರವಾಗಿ ಕೋಪವಿದ್ದುದರಿಂದಲೂ, ಆ ಹನ್ನೆರಡು ಮಂದಿ ಶೂರರ ಕಪಟ ಯುದ್ಧವು ನಿಜವಾದ ಯುದ್ಧವಾಗಿ ಪರಿಣಮಿಸಿ ಒಬ್ಬರನ್ನೊಬ್ಬರು ಕೊಂದುದರಿಂದಲೂ ಕಡೆಗೆ ಎರಡು ಸೇನೆಗಳು ನುಗ್ಗಿ ಘೋರವಾದ ಯುದ್ಧವು ಪ್ರಾರಂಭವಾಯಿತು. ಆದಕಾರಣ ಆ ಸ್ಥಳಕ್ಕೆ "ವಂಚಕರ ಭೂಮಿ" ಯೆಂದು ಹೆಸರಾಯಿತು. ಅಬ್ನೇರನ ಭಟರು ಸೋತು ಓಡಿ ಹೋಗುತ್ತಿದ್ದುದರಿಂದ ಯೋವಾಬನ ಕಡೆಯವರು ಬೆನ್ನಟ್ಟಿ ಅವರಲ್ಲಿ ಅನೇಕ ಮಂದಿಯನ್ನು ಹತಮಾಡಿದರು. ಹೀಗೆ ಅಬ್ನೇರನ ಗುಂಪಿನಲ್ಲಿ ೩೬೦ ಮಂದಿ ಸತ್ತರು. ಆದರೆ ಯೋವಾಬನ ಕಡೆಯವರಲ್ಲಿ ೨೦ ಮಂದಿ ಮಾತ್ರ ಕಾಣಿಸಲಿಲ್ಲ. ಯೋವಾಬನ ತಮ್ಮನಾದ ಅಸಹೇಲನು ಓಡುವದರಲ್ಲಿ ಅತಿ ಸಮರ್ಥನಾಗಿದ್ದುದರಿಂದ ಅಬ್ನೇರನನ್ನು ಜೀವಸಮೇತವಾದರೂ ಹಿಡಿಯಬೇಕೆಂದು, ಇಲ್ಲವೆ ಅವನನ್ನು ಕೊಲ್ಲಬೇಕೆಂದು ಹಟ ಹಿಡಿದವನಾಗಿ ಅವನ ಹಿಂದೆ ಹತ್ತಿದನು. ಅಬ್ನೇರನು ತನ್ನ ಬೆನ್ನಟ್ಟಿ ಬರುತ್ತಿದ್ದ ಅಸಹೇಲನನ್ನು ನೋಡಿ ತನ್ನ ಪ್ರಾಯಕ್ಕೆ ಸರಿಯಾದ ಇನ್ನೊಬ್ಬನನ್ನು ಬೆನ್ನಟ್ಟಬೇಕೆಂದು ಅಸಹೇಲನನ್ನು ಎಚ್ಚರಿಸಿದಾಗ್ಯೂ ಅವನು ತನ್ನ ಹಟವನ್ನು ಬಿಡದೆ ಅಬ್ನೇರನನ್ನು ಕಲೆತನು. ಇಬ್ಬರಿಗೂ ದ್ವಂದ್ವ ಯುದ್ಧ ನಡೆಯಿತು; ಅಬ್ನೇರನು ಅಸಹೇಲನ ಹೊಟ್ಟೆಯೊಳಗೆ ಒಂದು ಈಟಿಯಿಂದ ತಿವಿದನು. ತಕ್ಷಣವೇ ಅಸಹೇಲನು ಬಿದ್ದು ಸತ್ತನು. ಮತ್ತು ಹಿಂದೆ ಓಡಿಬರುತ್ತಿದ್ದವರೆಲ್ಲರು ಆ ಶವದ ಸುತ್ತಲು ನಿಂತುದರಿಂದ ಶತ್ರುವಿನ ಬೆನ್ನಟ್ಟುವದು ಸ್ವಲ್ಪ ನಿಂತು ಹೋಯಿತು. ಆದರೆ ಯೋವಾಬನೂ ಅಬಿಷಾಯಿಯೂ ಬೇರೆ ಮಾರ್ಗವಾಗಿ ಅಬ್ನೇರನ ಕಡೆಯವರನ್ನು ಇನ್ನೂ ಬೆನ್ನಟ್ಟುತ್ತಾ ಅಬ್ನೇರನಿದ್ದ ಗುಡ್ಡದ ಬಳಿಗೆ ಬಂದರು. ಅಬ್ನೇರನ ಸುತ್ತಲು ಬೆನ್ಯಮೀನಿನವರ ಒಂದು ಗುಂಪು ನಿಂತಿತ್ತು. ಅಬ್ನೇರನು ಯೋವಾಬನನ್ನು ನೋಡಿದಾಗ ಅವನನ್ನು ಸಮಾಧಾನಕ್ಕೆ ಕರೆದನು. ಆಗ ಯೋವಾಬನು ಅದಕ್ಕೆ ಸಮ್ಮತಿಸಿ ಅಬ್ನೇರನು ಸಮಾಧಾನಕ್ಕೆ ಕರೆಯದಿದ್ದರೆ ಬೆಳಗಿನ ವರೆಗಾದರೂ ಬೆನ್ನಟ್ಟುವದನ್ನು ಬಿಡುತ್ತಿರಲಿಲ್ಲವೆಂದು ಹೇಳಿದನು. ಎರಡು ಗುಂಪಿನವರು ಸಮಾಧಾನವಾದ ಮೇಲೆ ತಂತಮ್ಮ ಮನೆಗಳಿಗೆ ಹೋದರು. ಯೋವಾಬನ ಕಡೆಯವರು ಅಸಹೇಲನ ಶವವನ್ನು ಬೆತ್ಲೆಹೇಮಿಗೆ ತಕ್ಕೊಂಡು ಹೋಗಿ ಆ ಕುಟುಂಬಕ್ಕೆ ಸೇರಿದ ಸಮಾಧಿಯಲ್ಲಿ ಹೂಣಿಟ್ಟರು.



## ದಾವೀದನ ಅಧಿಕಾರವು ಹೆಚ್ಚುತ್ತಾ ಬಂದದ್ದು.

[ii ಸಮು. iii : 1—5.]

ಇಸ್ರಾಯೇಲರಿಗೂ ಯೆಹೂದದವರಿಗೂ ಅನೇಕ ಸಾರಿ ಉಂಟಾದ ಕದನಗಳಲ್ಲಿ ಮೇಲೆ ಹೇಳಿದ್ದು ಒಂದು ಉದಾಹರಣೆಯಾಗಿದೆ. ಎತ್ತ ಹೋದರೂ ದಾವೀದನ ದಂಡಿನವರಿಗೆ ಜಯವೇ ಸಂಭವಿಸುತಿದ್ದುದರಿಂದ ದಾವೀದನ ರಾಜ್ಯವೂ ಆತನ ಕೀರ್ತಿಯೂ ಹೆಚ್ಚುತ್ತಾ ಬಂದವು. ಆದಕಾರಣ ಆತನು ಮೂಡಣದವರ ಪದ್ಧತಿಯ ಪ್ರಕಾರ ತನ್ನ ರಾಜ್ಯದ ಯೋಗ್ಯತೆಗನುಸಾರವಾಗಿ ನೆರೆಹೊರೆಯಲ್ಲಿದ್ದ ಅರಸರಲ್ಲಿ ಬೀಗತನವನ್ನು ಸಹಾ ಮಾಡುತ್ತಾ ಬಂದನು. ಆತನು ಹೆಬ್ರೋನಿನಲ್ಲಿದ್ದಾಗ ಇನ್ನೂ ನಾಲ್ಕು ಮಂದಿ ಸ್ತ್ರೀಯರನ್ನು ಮದುವೆ ಮಾಡಿಕೊಂಡನು. ಅವರಲ್ಲೊಬ್ಬಳು ಗಲಿಲಾಯ ಸರೋವರದ ಈಶಾನ್ಯ ದಿಕ್ಕಿನಲ್ಲಿದ್ದ ಗೆಷೂರ್ ಜಿಲ್ಲೆಯ ಅರಸನಾದ ತಾಲ್ಮಾಯಿಯ ಮಗಳಾಗಿದ್ದಳು. ಮಿಕ್ಕ ಮೂವರು ಕೂಡ ಅರಸುಗಳ ಅಥವಾ ಮಹಾ ಘನವಂತರ ಮಕ್ಕಳಾಗಿದ್ದರೆಂಬುವದಕ್ಕೆ ಸಂಶಯವಿಲ್ಲ. ದಾವೀದನು ಹೆಬ್ರೋನಿನಲ್ಲಿ ೭॥ ವರುಷ ಆಳಿದನು. ಆದರೆ ಈತನಿಗೂ ಇಷ್ಬೋಷೆತನಿಗೂ ತೀರದ ಯುದ್ಧವು ಇತ್ತೋ ಇಲ್ಲವೋ ನಿಶ್ಚಯಿಸಲಶಕ್ಯವು. ಇಷ್ಬೋಷೆತನು ಎರಡು ವರುಷ ಮಾತ್ರ ಆಳಿದನೆಂದು ii ಸಮು. 2 : 10 ವಚನದಲ್ಲಿ ಬರೆಯಲ್ಪಟ್ಟಿದೆ. ಇದು ಸರಿಯಾಗಿದ್ದರೆ (ಬಹಳ ಸಂಶಯವೇ) ಸೌಲನ ಮರಣಕ್ಕೂ ಇಷ್ಬೋಷೆತನ ಕಿರೀಟಧಾರಣೆಗೂ ಮಧ್ಯೆ ೫॥ ವರುಷ ಅವಧಿ ಇದ್ದಿರಬೇಕು. ಈ ಮಧ್ಯ ಅವಧಿಯೊಳಗೆ ಅಬ್ನೇರನು ಫಿಲಿಷ್ಟಿಯರ ಅಧೀನದಲ್ಲಿದ್ದ ಇಸ್ರಾಯೇಲರ ದೇಶಗಳನ್ನು ತಿರಿಗಿ ಸಂಪಾದಿಸುತ್ತಾ ಹಾಗೆ ಸಂಪಾದಿಸಿದ ಮೇಲೆಯೇ ಇಷ್ಬೋಷೆತನಿಗೆ ಪಟ್ಟಾಭಿಷೇಕವನ್ನು ಮಾಡಿದನೆಂತಲೂ ಫಿಲಿಷ್ಟಿಯರ ಆಳಿಕೆಗೊಳಪಟ್ಟಿದ್ದ ಯೆಹೂದನ ರಾಜ್ಯದ ಮೇಲೆ ಆಗಾಗ್ಯೆ ಯುದ್ಧಗಳನ್ನು ನಡಿಸುತ್ತಿದ್ದನೆಂತಲೂ ಕೆಲವರು ಊಹಿಸುತ್ತಾರೆ. ಆದರೆ ಈ ಭಾವನೆಯು ಆಧಾರವಿಲ್ಲದ್ದೆಂದು ನಿಶ್ಚಯಿಸ ಬಹುದು. ಯಾಕಂದರೆ ಅಬ್ನೇರನು ಮಾಡಿದನೆಂದು ಊಹಿಸಲ್ಪಟ್ಟ ಯುದ್ಧಗಳ ಸೂಚನೆಯು ಚರಿತ್ರೆಯಲ್ಲಿ ಇಲ್ಲವೇ ಇಲ್ಲ. ಪರಂತು ii ಸಮುವೇಲನು 41 ನೇ ಸಂಧಿ 18 ನೇ ವಚನದಲ್ಲಿ ಹೇಳಿರುವದನ್ನು ನೋಡುವಲ್ಲಿ ಇಷ್ಬೋಷೆತನು ತಾನೇ ಫಿಲಿಷ್ಟಿಯರ ಸಾಮಂತರಾಜನಾಗಿದ್ದನೆಂತ ತಿಳಿಯ ಬರುತ್ತೆ.

## ಅಬ್ನೇರನು ಇಷ್‌ಬೋಷೆತನ ಸಂಗಡ ಕಲಹ ಮಾಡಿಕೊಂಡದ್ದು.

[ii ಸಮು. iii: 6—21.]

ಇಷ್‌ಬೋಷೆತನು ಅರಮನೆಯೊಳಗೆ ಇಚ್ಛಕರ ಹೊಗಳಿಕೆಯಲ್ಲಿ ಬೆಳೆದು ಲೌಕಿಕ ವ್ಯವಹಾರಗಳಲ್ಲಿ ಕಿಂಚಿತ್ತಾದರೂ ವಿವೇಕವಿಲ್ಲದವನಾಗಿ ಯಾವ ಭಾಗದಲ್ಲಿ ತನ್ನ ರಾಜ್ಯದ ಬಲವು ಇದೆ ಎಂಬುವದನ್ನು ಅರಿಯದೆ ಇದ್ದನು. ಹೀಗಿದ್ದಾಗ್ಯೂ ತನ್ನನ್ನು ಅರಸನಾಗ ಅಭಿಷೇಕಿಸಿ ರಾಜ್ಯವನ್ನು ಬಹಳ ಸೂಕ್ಷ್ಮಬುದ್ಧಿಯಿಂದ ಆಳುತ್ತಾ ಬಂದ ಅಬ್ನೇರನು ಸೌಲನ ಸೂಳೆಯಾದ ರಿಜ್ಪಳನ್ನು ಹೆಂಡತಿಯಾಗಿ ಮಾಡಿಕೊಂಡದ್ದಕ್ಕೆ ಇಷ್ಬೋಷೆತನು ಅವನನ್ನು ರಾಜ

Digitized by ROJA MUTHIAH RESEARCH LIBRARY

ದ್ರೋಹಿ ಎಂತ ಕರೆದನು. ಆಬ್ನೇರನು ಸೌಲನ ತರುವಾಯ ತಾನೇ ಅರಸನಾಗ ಬೇಕೆಂದು ಈ ಕಾರ್ಯವನ್ನು ಮಾಡಿದನೆಂಬದಾಗಿ ಜನರೆಲ್ಲರು ಭಾವಿಸುವದು ಆ ಕಾಲಸ್ಥಿತಿಗೆ ಅನುಗುಣವಾಗಿದ್ದಿತು. ಆದರೆ ಆಬ್ನೇರನಲ್ಲಿ ಅಂಥಾ ಆಲೋಚನೆ ಇದ್ದಿಲ್ಲವೆಂದು ಇಷ್ಬೋಷೆತನು ಚನ್ನಾಗಿ ಅರಿತಿರ ಬೇಕಾಗಿತ್ತು. ಇಷ್ಬೋಷೆತನು ಕೃತಘ್ನನಾಗಿ ತನ್ನ ಮೇಲೆ ದೋಷಾರೋಪಣೆ ಮಾಡಿದ್ದನ್ನು ಆಬ್ನೇರನು ಕೇಳಿ ಕೋಪಾಕ್ರಾಂತನಾಗಿ, ಇನ್ನು ಮೇಲೆ ನಿನಗೆ ಸಹಾಯಕನಾಗಿರಲಾರೆನೆಂದು ಇಷ್ಬೋಷೆತನಿಗೆ ಹೇಳಿದನು. ಮತ್ತು ದಾವೀದನೇ ಸಮಸ್ತ ಇಸ್ರಾಯೇಲಿನ ಮೇಲೆ ಅರಸನಾಗ ಬೇಕೆಂಬುದಾಗಿ ನುಡಿದಿದ್ದ ಪ್ರವಾದನೆಯನ್ನು ನೆರವೇರಿಸುವದಕ್ಕೆ ತಾನು ಪ್ರಯಾಸಪಡುವೆನೆಂದು ಪ್ರತಿಜ್ಞೆಮಾಡಿಕೊಂಡು ಆಬ್ನೇರನು ತನ್ನ ಪಕ್ಷವಾಗಿ ಮಾತನಾಡುವದಕ್ಕೋಸ್ಕರ ದಾವೀದನ ಬಳಿಗೆ ದೂತರನ್ನು ಕಳುಹಿಸಿದನು. ಇಷ್ಬೋಷೆತನು ಇದನ್ನು ನೋಡಿ ತಾನು ಮಾಡಿದ್ದು ತಪ್ಪಾಯಿತೆಂದು ಪಶ್ಚಾತ್ತಾಪ ಪಟ್ಟರೂ ಕಾಲಮಿಂಚಿ ಹೋಯಿತೆಂದು ಸುಮ್ಮನಿದ್ದನು. ಆಬ್ನೇರನ ದೂತರು ದಾವೀದನ ಬಳಿಗೆ ಬರಲು, ದಾವೀದನು ಅವರಿಗೆ — ನಾನು ಗಿಬಿಯದಿಂದ ಓಡಿಹೋದ ಮೇಲೆ ಸೌಲನು ಪಲ್ಟಿಯೇಲನಿಗೆ ಮದುವೆ ಮಾಡಿಕೊಟ್ಟ ನನ್ನ ಮೊದಲನೇ ಹೆಂಡತಿಯಾದ ಮೀಕಳನ್ನು ಕರಕೊಂಡು ಬರುವ ಹಾಗೆ ಆಬ್ನೇರನಿಗೆ ಹೇಳಿರೆಂದು ಹೇಳಿ ಕಳುಹಿಸಿದನು. ಸೌಲನು ಮೀಕಳನ್ನು ಬೇರೊಬ್ಬನಿಗೆ ಮದುವೆ ಮಾಡಿಕೊಟ್ಟದ್ದು ದಾವೀದನಿಗೆ ಅವಮಾನಕರವಾದದರಿಂದ ಆ ಅವಮಾನವನ್ನು ಪರಿಹರಿಸಿಕೊಳ್ಳುವದಕ್ಕೆ ದಾವೀದನು ಹೀಗೆ ಕೇಳಿದ್ದು ನ್ಯಾಯವೇ. ಇದು ಮಾತ್ರವಲ್ಲದೆ ಅವಳು ದಾವೀದನ ಬಳಿಯಲ್ಲಿದ್ದದ್ದಾದರೆ, ಸೌಲನ ಪಕ್ಷದವರು ದಾವೀದನೇ ಸಿಂಹಾಸನಕ್ಕೆ ಹಕ್ಕುದಾರನಾಗಿದ್ದಾನೆಂದು ಒಪ್ಪಿಕೊಳ್ಳುವದಕ್ಕೆ ನ್ಯಾಯವೂ ದೊರಕುವದು ಎಂದು ಅವನು ಆಲೋಚಿಸಿದನು. ದೂತರು ತಿರಿಗಿ ಬಂದು ಇಷ್ಬೋಷೆತನಿಗೆ ದಾವೀದನ ಆಜ್ಞೆಯನ್ನು ತಿಳಿಸಿದಾಗ ಆಬ್ನೇರನೂ ಅದಕ್ಕೆ ಸಮ್ಮತಿಸಲು, ಇಷ್ಬೋಷೆತನು ಒಡಂಬಟ್ಟನು. ದಾವೀದನ ಆಜ್ಞೆಯ ಮೇರೆಗೆ ಆಬ್ನೇರನು ದೇಶದೊಳಗಣ ಹಿರಿಯರನ್ನೂ ಪ್ರಮುಖರನ್ನೂ ಕರೆದುಕೊಂಡು ಅವರಿಗೆ — ದಾವೀದನೇ ಇಸ್ರಾಯೇಲರನ್ನು ಫಿಲಿಷ್ಟಿಯರ ಕೈಯಿಂದ ಬಿಡಿಸಿ ಆಳುವದಕ್ಕೆ ಶಕ್ತಿಯುಳ್ಳವನೆಂಬುವದು ಈಗ ಅನುಭವವೇದ್ಯವಾಗಿದೆ ಎಂದು ಹೇಳಿದಾಗ ಆತನ ಮಾತಿಗೆ ಅವರೆಲ್ಲರು ಒಡಂಬಟ್ಟರು. ತರುವಾಯ ಆಬ್ನೇರನು ಮೀಕಳನ್ನು ಕರೆದುಕೊಂಡು ಹೆಬ್ರೋನಿಗೆ ಹೊರಟನು. ಅವಳ ಗಂಡನು ಅಳುತ್ತಾ ಸರಹದ್ದಿನಲ್ಲಿದ್ದ ಬಾಹುರೀಮಿನ ವರೆಗೂ ಹಿಂಬಾಲಿಸಿ ಬಂದನು. ಆಬ್ನೇರನು ಹೆಬ್ರೋನಿಗೆ ಬಂದಾಗ ದಾವೀದನು ಅವನನ್ನು ಬಹಳ ಸನ್ಮಾನದಿಂದ ಅಂಗೀಕರಿಸಿದನು. ಮತ್ತು ಇಸ್ರಾಯೇಲಿನ ರಾಜ್ಯವೆಲ್ಲವನ್ನು ದಾವೀದನೊಬ್ಬನಿಗೇ ವಹಿಸುವಂಥ ಏರ್ಪಾಟುಗಳು ಕ್ರಮವಾಗಿ ಜರುಗಿದವು.

### ಆಬ್ನೇರನು ಕೊಲ್ಲಲ್ಪಟ್ಟದ್ದು.

[ii ಸಮು. iii. 22—39.]

ಆಬ್ನೇರನು ಗಿಬಿಯೋನಿನಲ್ಲಿ ಅಸಹೇಲನನ್ನು ಕೊಂದುದರಿಂದ ಆ ಕಾಲದ ಕ್ರೂರವಾದ ವಾಡಿಕೆಯ ಪ್ರಕಾರ ಆಬ್ನೇರನನ್ನು ಕೊಂದು ಹಗೆತೀರಿಸಿಕೊಳ್ಳುವ ಭಾರವು ಯೋವಾಬನ



ಮೇಲೆ ಬಿತ್ತು. ಆಬ್ನೇರನು ಹೆಬ್ರೋನಿಗೆ ಬಂದಾಗ ಯೋವಾಬನು ವಿಜಯಯಾತ್ರೆಯಾಗಿ ಹೋಗಿದ್ದನಾದಕಾರಣ ಊರಿನಲ್ಲಿರಲಿಲ್ಲ. ಅವನು ಹಿಂತಿರುಗಿ ಬಂದು, ದಾವೀದನು ಆಬ್ನೇರನಿಗೆ ಮಾಡಿದ ಸತ್ಕಾರದ ವಿಷಯವಾಗಿ ಕೇಳಿದಾಗ ತನ್ನ ಹಗೆಯನ್ನು ತೀರಿಸಿಕೊಳ್ಳುವ ಒಳ್ಳೇ ಸಮಯವು ತಪ್ಪಿಹೋಯಿತೆಂದು ತಿಳಿದು ಕೋಪೋದ್ರೀಕ್ತನಾದನು. ಆಬ್ನೇರನು ಬಹುಶಃ ದೇಶವನ್ನು ಪಾಳತಿ ನೋಡುವದಕ್ಕೆ ಬಂದಿರಬಹುದೆಂತಲೂ ಅಂಥವನನ್ನು ದಾವೀದನು ಕಳುಹಿಸಿಬಿಟ್ಟದ್ದು ಶುದ್ಧ ತಪ್ಪೆಂತಲೂ ಹೇಳಿ ದಾವೀದನನ್ನು ಗದರಿಸಿ ಆತನಿಗೆ ತಿಳಿಯದ ಹಾಗೆ ಆಬ್ನೇರನ ಬಳಿಗೆ ಒಬ್ಬ ದೂತನನ್ನು ಕಳುಹಿಸಿ ಅವನನ್ನು ಹಿಂತಿರುಗಿ ಕರತರುವ ಹಾಗೆ ಮಾಡಿದನು. ಆಬ್ನೇರನು ತಿರಿಗಿ ಬಂದಾಗ ಅಬೀಷಾಯಿಯೂ ಯೋವಾಬನೂ ಹೆಬ್ಬಾಗಲ ಬಳಿಯ ಅವನನ್ನು ಎದುರ್ಗೊಂಡರು. ಮತ್ತು ರಹಸ್ಯವಾಗಿ ಮಾತಾಡುವ ನೆವದಿಂದ ಅವನೊಬ್ಬನನ್ನೇ ಏಕಾಂತ ಸ್ಥಳಕ್ಕೆ ಕರೆದುಕೊಂಡು ಹೋಗಿ ಅವನ ಹೊಟ್ಟೆಯಲ್ಲಿ ತಿವಿದು ಕೊಂದರು. ಆಬ್ನೇರನ ಮರಣವಾರ್ತೆಯನ್ನು ದಾವೀದನು ಕೇಳಿ ಆಗ್ರಹದಿಂದ ತುಂಬಿದವನಾದರೂ ಯೋವಾಬನು ದೇಶದಲ್ಲಿ ಬಲಿಷ್ಠನಾಗಿದ್ದದರಿಂದಲೂ ತನಗೆ ನೆಂಟನಾಗಿದ್ದುದರಿಂದಲೂ ದಾವೀದನು ಅವನನ್ನು ಶಿಕ್ಷಿಸುವದಕ್ಕೆ ಅಶಕ್ತನಾಗಿದ್ದನು. ಮತ್ತು ಪ್ರಜೆಗಳೆಲ್ಲರು ಆಬ್ನೇರನಿಗೋಸ್ಕರ ಗೋಳಾಟಮಾಡುವ ಹಾಗೆ ಅಪ್ಪಣೆ ಕೊಟ್ಟನು. ದಾವೀದನು ತಾನೇ ಸಮಾಧಿಗೆ ಬಂದದರಿಂದಲೂ ಗೋಳಾಟದ ದಿನದಲ್ಲಿ ಅವನು ಆಹಾರವನ್ನು ಮುಟ್ಟದೆ ಇದ್ದುದರಿಂದಲೂ ಆಬ್ನೇರನ ಮರಣಕ್ಕೆ ಆತನು ಕಾರಣನಲ್ಲವೆಂದು ಪ್ರಜೆಗಳು ತಿಳುಕೊಂಡರು. ಮತ್ತು ದಾವೀದನೇ ನಿಜವಾದ ಅರಸನೆಂಬುವ ಭಾವವು ಇವರಲ್ಲಿ ನೆಲೆಗೊಂಡಿತು.

### ಇಷ್ಬೋಷೆತನು ಹತನಾದದ್ದು.

[ii ಸಮು. iv.]

ಆಬ್ನೇರನ ಕೊಲೆಯ ಸುದ್ದಿಯನ್ನು ಇಷ್ಬೋಷೆತನು ಕೇಳಿ ಅವನೂ ಅವನ ಪ್ರಜೆಗಳೂ ಭಯಭೀತಿಯಿಂದ ತುಂಬಿದವರಾದರು. ಯಾಕಂದರೆ ಅರಸನಾದ ಇಷ್ಬೋಷೆತನಿಗೆ ರಾಜ್ಯವ್ಯವಹಾರದಲ್ಲಿ ಆಬ್ನೇರನಷ್ಟು ಸಮರ್ಥನಾಗಿದ್ದ ಮಂತ್ರಿಯು ಬೇರೆ ಯಾರೂ ಇರಲಿಲ್ಲ. ಮತ್ತು ಪ್ರಜೆಗಳು ಸಹ ತಮ್ಮ ಅರಸನಾದ ಇಷ್ಬೋಷೆತನ ದೌರ್ಬಲ್ಯವನ್ನು ಚನ್ನಾಗಿ ತಿಳುಕೊಂಡಿದ್ದರು. ಆಬ್ನೇರನು ದಾವೀದನ ಸಂಗಡ ಮಾಡಿಕೊಂಡ ಒಪ್ಪಂದದ ಸಮಾಚಾರವು ದೇಶದೊಳಗೆಲ್ಲಾ ವ್ಯಾಪಿಸಿಕೊಂಡಿತ್ತು. ಆದರೆ ದಾವೀದನೇ ಸಮಸ್ತ ಇಸ್ರಾಯೇಲಿನ ಅರಸನಾಗ ಬೇಕೆಂಬುವ ವಾಗ್ದತ್ತವನ್ನು ಸಿದ್ಧಿಸಿಕೊಡುವವನ್ಯಾರು? ಅದು ಅರಸನಿಂದಲಾದರೂ ಮತ್ತಾರಿಂದಲಾದರೂ ಸಾಧ್ಯವಾಗಲಾರದ ಕಾರ್ಯವಾಗಿತ್ತು. ಆದರೆ ಗಿಬಿಯೋನಿಗೆ ಸೇರಿದ ಬೆನ್ಯಾಮೀನಿನ ಪ್ರಾಂತ್ಯದಲ್ಲಿನ ಬೇರೋತು ಪಟ್ಟಣದ ದಂಡಿನಲ್ಲಿ ಪ್ರಧಾನರಾಗಿದ್ದ, ಬಾನ, ರೇಖಾಬ್ ಎಂಬ ಅಣ್ಣ ತಮ್ಮಂದಿರಿಬ್ಬರೂ ಇಷ್ಬೋಷೆತನನ್ನು ಕೊಂದು ಸೌಲನ ಮನೆಯ ಮೇಲೆ ಹಗೆ ತೀರಿಸಿಕೊಂಡು, ದಾವೀದನ ಕಾರ್ಯವನ್ನು ಸಿದ್ಧಿಸಿಕೊಡುವದಕ್ಕೆ ನಿಶ್ಚಯಿಸಿಕೊಂಡರು. ಇವರು ಮಹಾನಾಯಿಮಿನಲ್ಲಿದ್ದ ಅರಮನೆಗೆ ಬಂದು ಅರಸನು ಮಧ್ಯಾಹ್ನದಲ್ಲಿ ನಿದ್ದೆಮಾಡುವ

Digitized by ROJA MUTHIAH RESEARCH LIBRARY

ದನ್ನು ಕಂಡರು. ಮತ್ತು ಬಾಗಲನ್ನು ಕಾಯುತ್ತಿದ್ದ ಸ್ತ್ರೀಯು ಗೋಧಿಯನ್ನು ಹಸನು ಮಾಡುತ್ತಾ ನಿದ್ದೆಹೋಗಿರುವದನ್ನು ನೋಡಿ ಅವಳನ್ನು ದಾಟಿ ಅರಸನ ಕೊಟಡಿಯನ್ನು ಹೊಕ್ಕು ಅವನ ತಲೆಯನ್ನು ಕಡಿದು ತಪ್ಪಿಸಿಕೊಂಡು ಹೆಬ್ರೋನಿಗೆ ಓಡಿ ಹೋದರು. ತಾವು ತೋರಿಸಿದ ಪರಾಕ್ರಮಕ್ಕಾಗಿ ಅರಸನು ತಮ್ಮನ್ನು ಮೆಚ್ಚಿಕೊಂಡು ತಮಗೆ ಬಹುಮಾನ ಮಾಡುವನೆಂದು ನೆನಸಿ ಎದುರಾಳಿಯ ತಲೆಯನ್ನು ದಾವೀದನ ಬಳಿಗೆ ತಂದರು. ಆದರೆ ದಾವೀದನು ಇಷ್ಬೋಷೆತನ ರಾಜ್ಯವನ್ನು ತಕ್ಕೊಳ್ಳುವದಕ್ಕೆ ಬಹಳ ಕಾಲದಿಂದ ಕಾದುಕೊಂಡಿದ್ದವನಾದಾಗ್ಯೂ ರಾಜದ್ರೋಹಿಗಳ ಕೈಗಳಿಂದ ಅಥವಾ ಇಂಥಾ ಕ್ರೂರವಿಧದಿಂದ ಅದನ್ನು ತೆಗೆದುಕೊಳ್ಳುವದಕ್ಕೆ ಸಮ್ಮತಿಸದೆ ಇವರಿಬ್ಬರನ್ನು ಕೊಲ್ಲಿಸಿದನು. ದಾವೀದನು ಇಷ್ಬೋಷೆತನ ತಲೆಯನ್ನು ಅಬ್ನೇರನ ಸಮಾಧಿಯಲ್ಲಿ ಹೂಳಿಟ್ಟ ಮೇಲೆ ಜನರು ತನ್ನನ್ನು ಅರಸನಾಗ ಅಭಿಷೇಕಿಸುವದಕ್ಕೆ ಇಷ್ಟವಿದೆಯೋ ಇಲ್ಲವೋ ಎಂದು ಕಂಡುಕೊಳ್ಳುವ ಬಗ್ಗೆ ಶಾಂತವಾಗಿ ಕಾದುಕೊಂಡಿದ್ದನು.

### ದಾವೀದನು ಇಸ್ರಾಯೇಲ್ ಜನರೆಲ್ಲರ ಮೇಲೆ ಅರಸನಾಗ ಅಭಿಷೇಕಿಸಲ್ಪಟ್ಟದ್ದು.

[ii ಸಮು. v. 1—5; i ದಿನಚರ್ಯ xi. 1—3; xii. 23—40.]

ಜನರು ತಮ್ಮ ಇಷ್ಟವನ್ನು ಪ್ರಕಟಿಸುವದಕ್ಕೆ ತಡೆಮಾಡಲಿಲ್ಲ. ಸೌಲನ ವಂಶದಲ್ಲಿ ಸಿಂಹಾಸನಕ್ಕೆ ಹಕ್ಕುದಾರನು ಯೋನತಾನನ ಮಗನಾದ ಮೆಫಿಬೋಷೆತನೆಂಬುವನು ಮಾತ್ರ ಉಳಿದಿದ್ದನು. ಬರಿದಾಗಿದ್ದ ಸಿಂಹಾಸನದ ಮೇಲೆ ಇವನನ್ನು ಕುಳ್ಳಿರಿಸುವದಕ್ಕೆ ಯಾರಿಗೂ ಇಷ್ಟವಿರಲಿಲ್ಲವೆಂದು ಕಾಣಿಸುತ್ತೆ. ಇವನು ಈಗ ಹನ್ನೆರಡು ಹದಿಮೂರು ವರುಷದವನಾಗಿದ್ದನು. ಇವನ ದಾದಿಯು ಗಿಲ್ಬೋವ ಪರ್ವತದಲ್ಲಿ ನಡೆದ ಯುದ್ಧದ ಸಮಾಚಾರವನ್ನು ಕೇಳಿದಾಗ ಗಾಬರಿ ಪಟ್ಟು ಓಡಿ ಹೋಗುತ್ತಿರುವಲ್ಲಿ ಕೈಯಲ್ಲಿದ್ದ ಈ ಹುಡುಗನನ್ನು ಕೆಳಗೆ ಬೀಳಿಸಿದ್ದರಿಂದ ಕಾಲು ಮುರಿದು ಕುಂಟನಾಗಿದ್ದನು. ಆದಕಾರಣ ಗೋತ್ರಗಳ ಹಿರಿಯರು ತಮ್ಮ ತಮ್ಮ ಹಿಂಬಾಲಕರೊಡನೆ ಸರ್ವಾಯುಧಪಾಣಿಗಳಾಗಿ ಹೆಬ್ರೋನಿಗೆ ಹೋಗಿ ದಾವೀದನಿಗೆ ಶರಣಾಗತರಾದರು. ದಾವೀದನು ಪುನಃ ಇಸ್ರಾಯೇಲಿನವರೆಲ್ಲರ ಮೇಲೆ ಅರಸನಾಗ ಅಭಿಷೇಕಿಸಲ್ಪಟ್ಟನು. ಇವನು ಯೂದಾಯ ಸೀಮೆಯ ಜನರ ಮೇಲೆ ೭॥ ವರುಷ ಅರಸನಾಗಿದ್ದನು ಪಾಲಸ್ತೀನ್ ದೇಶದ ಉತ್ತರ ಭಾಗದವರೂ ದಕ್ಷಿಣ ಭಾಗದವರೂ ಒಂದಾಗಿ ಸೇರಿದ್ದಕ್ಕೆ ಜ್ಞಾಪಕಾರ್ಥವಾಗಿ ಮೂರು ದಿನದ ವರೆಗೂ ಎಲ್ಲರೂ ದೊಡ್ಡ ಹಬ್ಬವನ್ನು ಮಾಡಿದರು. ದಾವೀದನನ್ನು ಅರಸನಾಗ ಮಾಡಿಕೊಂಡದರಲ್ಲಿ ಎಲ್ಲಾ ಜನರೂ ಐಕ್ಯವಾಗಿ ಸಮ್ಮತಿಸಿದರು. ಆ ಜನರು ತಮ್ಮ ಅರಸನಾಗತಕ್ಕವನನ್ನು ತಾವೇ ಆದುಕೊಳ್ಳುವದಕ್ಕೆ ಸ್ವಾತಂತ್ರ್ಯವುಳ್ಳವರೆಂಬುದನು ಸೂಚಿಸುವದಕ್ಕೆ ಇದು ಉದಾಹರಣೆಯಾಗಿದೆ.

# ಐದನೇ ಅಧ್ಯಾಯ.

## ದಾವೀದನು ಇಸ್ರಾಯೇಲರೆಲ್ಲರ ಅರಸನಾಗಿ ರಾಜ್ಯವಾಳಿದ್ದು.

### ಯೆರೂಸಲೇಮನ್ನು ಸ್ವಾಧೀನ ಮಾಡಿಕೊಂಡು ಕೋಟೆಯನ್ನು ಕಟ್ಟಿದ್ದು.

[ii ಸಮು v. 6—16; i ದಿನಚರ್ಯ xi. 4—9.]

ಒಂದು ಹೊಸ ರಾಜಧಾನಿಯು ಈಗ ಅತ್ಯವಶ್ಯವಾಗಿತ್ತು. ಹೆಬ್ರೋನು ಬಹಳ ದಕ್ಷಿಣದಲ್ಲಿದ್ದದರಿಂದ ರಾಜ್ಯವ್ಯವಹಾರವನ್ನು ನಡಸುವದಕ್ಕೆ ಅದು ವಸತಿಯಾದ ಪಟ್ಟಣವಾಗಿರಲಿಲ್ಲ. ಇಷ್ಟುಮಾತ್ರವಲ್ಲದೆ ಆ ಕಾಲದಲ್ಲಿ ಒಂದು ರಾಜ್ಯಕ್ಕೆ ಮುಖ್ಯ ಪಟ್ಟಣವು ಆ ರಾಜ್ಯದ ಪ್ರಾಂತ್ಯಗಳೊಳಗೆಲ್ಲಾ ಅತಿ ಭದ್ರವಾದ ದುರ್ಗವಾಗಿರಬೇಕಾಗಿತ್ತು. ಉತ್ತರ ರಾಜ್ಯದ ಅರ್ಧಭಾಗಕ್ಕೂ ಯೂದಾಯ ರಾಜ್ಯಕ್ಕೂ ಮಧ್ಯದ ಸರಹದ್ದಿನಲ್ಲಿ ಇದ್ದ ಚೀಯೋನೆಂಬ ಬಂಡೆ ಇಲ್ಲವೆ ಜೇಬಸ್ ಎಂಬುದು ಆ ದೇಶದಲ್ಲೆಲ್ಲಾ ಬಹು ಬಲವಾದ ದುರ್ಗವಾಗಿತ್ತು. ಇದು ಸ್ವತಂತ್ರಾಧಿಪತ್ಯವನ್ನು ವಹಿಸಿದ್ದ ಕಾನಾನ್ಯರಲ್ಲಿ ಒಂದು ಬಗೆಯವರಾದ ಎಬೂಸ್ಯರ ಅಧೀನದಲ್ಲಿದ್ದದರಿಂದ ಇದಕ್ಕೆ ಎಬೂಸ್ ಎಂಬುವ ಹೆಸರಿತ್ತು. ದಾವೀದನು ಆ ಪಟ್ಟಣವನ್ನು ತನ್ನ ರಾಜಧಾನಿಯಾಗಿ ಮಾಡಿಕೊಳ್ಳಬೇಕೆಂಬುವ ಆಶೆಯಿಂದ ಆ ಪಟ್ಟಣದ ಮೇಲೆ ಯುದ್ಧ ಮಾಡುವದಕ್ಕೆ ಸೈನ್ಯದೊಂದಿಗೆ ಹೊರಟನು. ದಾವೀದನ ಸೈನ್ಯವನ್ನು ಆ ಪಟ್ಟಣವಾಸಿಗಳು ನೋಡಿದಾಗ ತಮ್ಮೊಳಗಣ ಕುರುಡರು. ಕುಂಟರು ಮಾತ್ರವೇ ಆ ಪಟ್ಟಣವನ್ನು ಕಾಪಾಡಬಲ್ಲರೆಂತಲೂ ಇಂಥ ಅಜಯದುರ್ಗವನ್ನು ದಾವೀದನು ಹಿಡಿಯಲಾರನೆಂತಲೂ ಡಂಭ ಕೊಚ್ಚಿಕೊಂಡರು. ಆದರೆ ದಾವೀದನ ಸೈನ್ಯದವರು ಹೋರಾಡಿ ಪಟ್ಟಣವನ್ನು ಗೆದ್ದುಕೊಂಡರು. ಇದರಲ್ಲಿ ಸೇನಾಪತಿಯಾದ ಯೋವಾಬನಿಗೆ ಘನವು ದೊರಕಿತು. ಹೀಗೆ ತಮ್ಮ ಗೋಡೆಗಳನ್ನು ಕಾಯುವದಕ್ಕೆ ಕುರುಡರನ್ನೂ ಕುಂಟರನ್ನೂ ಕಾವಲಿಯಾಗಿಟ್ಟ ಆ ಎಬೂಸಿಯರ ತಿಳಿಗೇಡಿತನದ ಡಂಭಕ್ಕೆ ಪ್ರತಿಯಾಗಿ ದಾವೀದನು—"ನನ್ನ ಪ್ರಾಣದ್ವೇಷಿಗಳಾದ ಎಬೂಸಿಯರನ್ನು ಹೊಡೆಯುವವನು ಈ ಕುರುಡ ಕುಂಟರನ್ನು ಹೊಡಿಯಲಿ" ಎಂಧೇಳಿ ಈ ನಿರಾಧಾರ



Digitized by ROJA MUTHIAH RESEARCH LIBRARY

ರಾದ ಕುರುಡ ಕುಂಟರನ್ನು ಜಯಶಾಲಿಗಳಾದವರ ಇಷ್ಟಕ್ಕೆ ಒಪ್ಪಿಸಿಕೊಟ್ಟನು. ಈ ಹೇಳಿಕೆಯು ಜನರಿಗೆ ಹೃದ್ಯವಾಗಿ ತೋರಿದದರಿಂದ ಇದನ್ನು ಜ್ಞಾಪಕದಲ್ಲಿಟ್ಟುಕೊಂಡರು. ಅರಸನು ತನ್ನ ಹಗೆಯವರನ್ನು ಜ್ಞಾಪಕ ಮಾಡಿಕೊಳ್ಳದ ಹಾಗೆ ಕುರುಡರೂ ಕುಂಟರೂ ದೇವಾಲಯದೊಳಗೆ ಪ್ರವೇಶಿಸ ಬಾರದೆಂಬುವ ಲೋಕೋಕ್ತಿಯೂ ಹುಟ್ಟುವದಕ್ಕೆ ಇದು ಕಾರಣವಾಯಿತು. ತದನಂತರ ದಾವೀದನು ಚೀಯೋನನ್ನು ಬಲಪಡಿಸಿ ತನ್ನ ಇಷ್ಟದ ಪ್ರಕಾರ ಕೋಟೆ ಕಟ್ಟಿಸಿದನು. ಈ ಅರಮನೆಯು ತಯರ್ ದೇಶದ ಶಿಲ್ಪಿಗಳ ಚಮತ್ಕಾರದಿಂದ ಕೆತ್ತಲ್ಪಟ್ಟ ಕಲ್ಲುಗಳಿಂದಲೂ ಲೆಬನೋನಿನ ದೇವದಾರು ವೃಕ್ಷಗಳಿಂದಲೂ ಕಟ್ಟಲ್ಪಟ್ಟಿತು. ಇವುಗಳನ್ನು ತಯರ್ ದೇಶದ ಅರಸನಾದ ಹಿರಾಮನು ಕಳುಹಿಸಿಕೊಟ್ಟಿದ್ದನು.

## ಫಿಲಿಷ್ಟಿಯರ ಸಂಗಡ ಯುದ್ಧ.

[ii ಸಮು. v. 17—25; i ದಿನಚರ್ಯ. xiv. 8—17.]

ದಾವೀದನು ಇಷ್ಟು ಪರ್ಯಂತರ ಫಿಲಿಷ್ಟಿಯರಿಗೆ ಕಪ್ಪವನ್ನು ಕೊಡುತ್ತಾ ಬಂದಿರಬಹುದಾದುದರಿಂದ ಉಭಯರಿಗೆ ಸಮಾಧಾನವು ಇದ್ದಿತು. ಆದರೆ ಈಗ ದಾವೀದನು ಇಸ್ರಾಯೇಲರೆಲ್ಲರ ಮೇಲೆ ಅರಸನಾಗಿದ್ದಾನೆಂಬುವ ಸಮಾಚಾರವನ್ನು ಫಿಲಿಷ್ಟಿಯರು ಕೇಳಿದಾಗ—ಇವನನ್ನು ಸುಮ್ಮನೆ ಬಿಟ್ಟರೆ ಸಂಪೂರ್ಣ ಸ್ವಾತಂತ್ರ್ಯವನ್ನು ಪಡಕೊಳ್ಳುವದರಲ್ಲಿ ಸಂಶಯವಿಲ್ಲವೆಂದು ತಿಳುಕೊಂಡು ಅವರು ದಾವೀದನನ್ನು ಎದುರಿಸಲುದ್ದೇಶಿಸಿ ತಕ್ಷಣವೇ ತಮ್ಮ ಸೇನೆಯನ್ನು ಯೆರೂಸಲೇಮಿನ ಬಳಿಯಲ್ಲಿದ್ದ ರೆಫಾಯಿಮ್ ತಗ್ಗಿಗೆ ಕಳುಹಿಸಿದರು. ಇಲ್ಲಿ ದಾವೀದನು ಮೊದಲು ಅಪಜಯವನ್ನು ಹೊಂದಿದ್ದದರಿಂದಲೋ ಅಥವ ಯೆರೂಸಲೇಮಿನಲ್ಲಿ ತಾನು ಪ್ರಾರಂಭಿಸಿದ್ದ ಕೋಟೆಕೊತ್ತಳಗಳ ಕೆಲಸವು ಮುಗಿಯದೆ ಇದ್ದುದರಿಂದಲೋ ದಾವೀದನು ಶತ್ರುಗಳನ್ನು ಸ್ವರಾಜಧಾನಿಯಲ್ಲಿ ಎದುರಿಸದೆ ಅದುಲ್ಲಾಮ್ ಗವಿಯಲ್ಲಿ ಆಶ್ರಯ ಹೊಗುವದುಚಿತವೆಂದೆಣಿಸಿದನು. ಆ ಮೇಲೆ ದಾವೀದನು ಫಿಲಿಷ್ಟಿಯರ ಮೇಲೆ ಯುದ್ಧಕ್ಕೆ ಹೋಗುವದುಚಿತವೋ ಅನುಚಿತವೋ ಎಂದು ದೇವರನ್ನು ಕೇಳಿ, ಅಪ್ಪಣೆಯನ್ನು ಹೊಂದಿದ ಮೇಲೆ ಬಾಲ್‌ಪೆರಜಿಮ್ ಎಂದು ಕರೆಯಲ್ಪಟ್ಟ ಸ್ಥಳದಲ್ಲಿ ಫಿಲಿಷ್ಟಿಯರ ಸಂಗಡ ಯುದ್ಧ ಮಾಡಿ ಪೂರ್ಣಜಯವನ್ನು ಹೊಂದಿದನು. ಆದಕಾರಣ ಈ ಸ್ಥಳದಲ್ಲಿ ಭಗವಂತನು ಶತ್ರುಗಳ ಸೇನೆಯನ್ನು ಭಂಗಪಡಿಸಿದ್ದರಿಂದ ಅದಕ್ಕೆ "ಭಂಗಗಳ ಕರ್ತನು" ಎಂಬುವ ಹೆಸರಾಯಿತು. ಇಸ್ರಾಯೇಲರು ಶತ್ರುಗಳ ಪಾಳ್ಯವನ್ನು ಸುಲಿಗೆ ಮಾಡಿ ಪೂರ್ವದಲ್ಲಿ ಜಯಶಾಲಿಗಳಾದ ಫಿಲಿಷ್ಟಿಯರು ಒಡಂಬಡಿಕೆಯ ಪೆಟ್ಟಿಗೆಯನ್ನು ಸೆರೆಯಾಗಿ ವೈದಪ್ರಕಾರ ಪಾಳ್ಯದೊಳಗಣ ದೇವತೆಗಳ ಪ್ರತಿಮೆಗಳನ್ನು ವೈದರು. ಇಷ್ಟು ನಷ್ಟವನ್ನು ಹೊಂದಿದಾಗ್ಯೂ ಫಿಲಿಷ್ಟಿಯರು ತಿರಿಗಿ ದೊಡ್ಡ ಸೇನೆಯನ್ನು ಕೂಡಿಸಿಕೊಂಡು ಅದೇ ರೆಫಾಯಿಮ್ ತಗ್ಗಿಗೆ ಬಂದು ದಂಡಿಳಿದರು. ದಾವೀದನು ಯೆಹೋವನನ್ನು ಕೇಳಿದಾಗ, ಎದುರು ಬದರಾಗಿ ನಿಂತು ಯುದ್ಧ ಮಾಡಬಾರದೆಂದೂ ಶತ್ರುಗಳ ಹಿಂದುಗಡೆಗೆ ಹೋಗಿ ಅವರು ಹಿಪ್ಪಲಿ ಮರಗಳ ತೋಪಿನಲ್ಲಿ ನಡೆದು ಬರುವ



ಶಬ್ದವು ಕೇಳಿದಾಗ ಅವರನ್ನು ಹಿಂದುಗಡೆಯಿಂದ ಹೊಡೆಯಬೇಕೆಂದೂ ದಾವೀದನಿಗೆ ಅಪ್ಪಣೆಯಾಗಿತ್ತು. ಅದೇ ಮೇರೆಗೆ ದಾವೀದನು ಉತ್ತರ ಕಡೆ ಗಿಬಿಯೋನಿನ ವರೆಗೆ ಹೋಗಿ ಹಿಂದೆ ಬರುತ್ತಿದ್ದ ಸೈನ್ಯದ ಮೇಲೆ ಅಕಸ್ಮಾತ್ತಾಗಿ ಬಿದ್ದು ಅವರನ್ನು ಕಳವಳಪಡಿಸಿ ಅವರಲ್ಲನೇಕರನ್ನು ಸಂಹರಿಸಿ ಕರಾವಳಿಯ ಮೈದಾನದಲ್ಲಿದ್ದ ಗೇಜರಿನ ವರೆಗೂ ಅವರನ್ನು ಅಟ್ಟಿದನು. ಇಂಥಾ ಜಯಗಳಿಂದ ಪುಂಡುಗಾರರಾದ ಫಿಲಿಷ್ಟಿಯರು ಆ ದೇಶವನ್ನು ಬಿಟ್ಟು ಹೋದರು. ಮತ್ತು ಅವರು ದಾವೀದನು ಅರಸನಾಗಿ ಆಳುತ್ತಿದ್ದ ಕಾಲವೆಲ್ಲಾ ಇಸ್ರಾಯೇಲರ ದೇಶವನ್ನು ತಮಗೆ ವಶಿತವಾದ ದೇಶವಾಗ ಮಾಡಿಕೊಳ್ಳುವ ಕೋರಿಕೆಯನ್ನು ಬಿಟ್ಟು ಬಿಟ್ಟರು.

## ಒಡಂಬಡಿಕೆಯ ಪೆಟ್ಟಿಗೆಯನ್ನು ಯೆರೂಸಲೇಮಿಗೆ ತಂದದ್ದು.

[ii ಸಮು. vi; i ದಿನಚರ್ಯ. xv, xvi.]

ಈಗ ದಾವೀದನು ಮತಾಸಕ್ತಿಯುಳ್ಳವನಾಗಿ ರಾಜ್ಯಭಾರಕ್ಕೆ ಮುಖ್ಯ ಪಟ್ಟಣವಾಗಿದ್ದ ಯೆರೂಸಲೇಮು ನಗರವನ್ನು ಮತಕರ್ತವ್ಯ ವಿಷಯದಲ್ಲಿಯೂ ಮುಖ್ಯಸ್ಥಾನವಾಗ ಮಾಡಬೇಕೆಂದು ನಿಶ್ಚಯಿಸಿ, ಒಡಂಬಡಿಕೆಯ ಪೆಟ್ಟಿಗೆಯನ್ನು ಯೆರೂಸಲೇಮಿಗೆ ತಂದನು. ಯಾಕಂದರೆ ಮೋಶೆಯ ಕಾಲದ ಗುಡಾರದ ಪೈಕಿ ಉಳಿದಿದ್ದ ಮಾನನೀಯವಾದ ಪದಾರ್ಥಗಳಲ್ಲಿ ಒಡಂಬಡಿಕೆಯ ಪೆಟ್ಟಿಗೆಯು ಒಂದೇ ವಿಶೇಷವಾಗಿದ್ದಿತು. ಇದು ಇನ್ನು ಬಾಳ್-ಯೆಹೂದ ಇಲ್ಲವೆ ಕಿರ್ಯಾತ್‌ಯಾರೀಮಿನಲ್ಲಿ ಗುಡ್ಡದ ಮೇಲಿದ್ದ ಅಬಿನದಾಬನ ಮನೆಯಲ್ಲೇ ಇತ್ತು. ಇದಕ್ಕೆ ಈಗ ಯೊಪ್ಪದ ರಸ್ತೆಯಲ್ಲಿ ಯೆರೂಸಲೇಮಿಗೆ ಏಳು ಮೈಲು ದೂರದಲ್ಲಿರುವ ಕುರಿಯಾತ್ ಎಲ್-ಈನಾಟ್ ಎಂದು ಹೆಸರು. ಫಿಲಿಷ್ಟಿಯರ ಕೈಯಿಂದ ಬಿಡಿಸಿಕೊಂಡ ಮೇಲೆ ಈ ಪೆಟ್ಟಿಗೆಯು ಇಲ್ಲಿಗೆ ತರಲ್ಪಟ್ಟು ಅಂದಿನಿಂದ ಇಲ್ಲಿಯೇ ಇತ್ತು. ದಾವೀದನು ಇಸ್ರಾಯೇಲಿನ ಎಲ್ಲಾ ಗೋತ್ರಗಳಿಂದ ಪ್ರತಿನಿಧಿಗಳಾದ ೩೦,೦೦೦ ಮಂದಿಯನ್ನು ಕರೆದುಕೊಂಡು ಕಿರ್ಯಾತ್‌ಯಾರೀಮಿಗೆ ಹೋದನು. ಆ ಕಾಲದಲ್ಲಿ ಆ ಪೆಟ್ಟಿಗೆಯನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ತಕ್ಕೊಂಡು ಹೋಗ ಬೇಕಾದಲ್ಲಿ ಯಾವ ಅಪರಿಶುದ್ಧವಾದ ಕೆಲಸಕ್ಕಾದರೂ ಉಪಯೋಗಿಸದೆ ಇದ್ದಂಥ ಹೊಸ ಬಂಡಿಯ ಮೇಲೆ ಇರಿಸಿ ಎತ್ತುಗಳನ್ನು ಕಟ್ಟಿ ಎಳಿಸಿಕೊಂಡು ಹೋಗುವ ವಾಡಿಕೆಯಿತ್ತೆಂದು ತೋರುತ್ತದೆ. ದಾವೀದನು ಸಹಾ ಇದೇ ಪದ್ಧತಿಯನ್ನನುಸರಿಸಿದನು. ಅಬಿನದಾಬನ ಕುಮಾರರಾದ ಉಜ್ಜನೂ ಅಹಿಯೋನನೂ ಬಂಡಿಯನ್ನು ನಡಿಸಿದರು. ಮತ್ತು ಉಳಿದ ಗುಂಪಿನವರೆಲ್ಲರೂ ಮಹಾ ಸಂಭ್ರಮದಿಂದ ಪೆಟ್ಟಿಗೆಯ ಮುಂದೆ ಸಂಗೀತಗಳನ್ನು ಹಾಡುತ್ತಲೂ ವಾದ್ಯಗಳನ್ನು ಬಾರಿಸುತ್ತಲೂ ನಡೆದು ಹೋದರು. ಈ ಪ್ರಕಾರ ಉತ್ಸವವು ಊರಹೊರಗಣ ಕಣದ ಬಳಿಗೆ ಬಂದಾಗ ಭಾಟೆಯು ತರಕಲಾಗಿದ್ದರಿಂದ ಬಂಡಿಯು ಸ್ವಲ್ಪ ಕದಲಿ ಪೆಟ್ಟಿಗೆಯು ಬೀಳುವ ಹಾಗಾಯಿತು. ಆಗ ಉಜ್ಜನು ದೇವರ ಸಮುಖದ ಪವಿತ್ರತ್ವವನ್ನು ಲಕ್ಷ್ಯಕ್ಕೆ ತಾರದೆ ಪೆಟ್ಟಿಗೆಯನ್ನು ಹಿಡಿದು ನಿಲ್ಲಿಸುವದಕ್ಕೆ ಕೈ ಚಾಚಿದನು. ಆ ಕ್ಷಣವೇ ಬಿದ್ದು ಸತ್ತನು. ನಡೆದ ಕಾರ್ಯವನ್ನು ನೋಡಿ ದಾವೀದನು—ತಾನು ಯೆಹೋವನ ಪೆಟ್ಟಿಗೆಯನ್ನು ತಂದದರಲ್ಲಿ ದೇವರು ಇಷ್ಟಪಡುವದಿಲ್ಲವೆಂದು ಊಹಿಸಿ

Digitized by ROJA MUTHIAH RESEARCH LIBRARY

ಕೂಡಲೇ ಉತ್ಸವವನ್ನು ಅಲ್ಲಿಗೇ ನಿಲ್ಲಿಸಿ, ಸಮೀಪದಲ್ಲಿದ್ದ ಗಾತು ಊರಿನ ಫಿಲಿಷ್ಟಿಯನಾದ ಓಬೇದ್‌ಎದೋಮ್ (ಎದೋಮು ಆರಾಧಕನು) ಎಂಬುವವನ ಮನೆಯಲ್ಲಿ ದೇವರ ಪೆಟ್ಟಿಗೆಯನ್ನು ತಂದಿಳಿಸಿದನು. ಮೂರು ತಿಂಗಳಾದ ಬಳಿಕ ಓಬೇದ್‌ಎದೋಮನು ದೇವರ ಪೆಟ್ಟಿಗೆಯ ದೆಸೆಯಿಂದ ಬಹಳ ನೆಮ್ಮದಿವಂತನಾದನೆಂದು ದಾವೀದನಿಗೆ ತಿಳಿಯಬಂತು. ಆಗ ದಾವೀದನು ದೇವರ ಪೆಟ್ಟಿಗೆಯ ವಿಷಯದಲ್ಲಿ ತನಗಿದ್ದ ಭಯವನ್ನು ತೊರೆದು, ತಿರಿಗಿ ಆ ಪೆಟ್ಟಿಗೆಯನ್ನು ಚಿಯೋನಿಗೆ ತರುವದಕ್ಕೆ ಹೊರಟನು. ಆದರೆ ಈ ಸಾರಿ ಅದನ್ನು ಬಂಡಿಯ ಮೇಲೆ ಅಲ್ಲ, ಯಾಜಕರ ಹೆಗಲ ಮೇಲೆ ಹೊರಿಸಿಕೊಂಡು ಬಂದನು. ದೇವರು ಈ ಪವಿತ್ರವಾದ ವಸ್ತುವನ್ನು ವೈಯಗೊಟ್ಟದರಿಂದ ಯಾಜಕರು ಆರು ಹಜ್ಜೆ ದೂರ ಹೋದ ಕೂಡಲೆ ದಾವೀದನು ಶಾಂತಿಗೋಸ್ಕರ ಬಲಿಗಳನ್ನರ್ಪಿಸಿದನು. ಮೊದಲಿನಂತೆಯೇ ಜನರು ಈಗಲೂ ಹಾಡುತ್ತಾ ಬಾರಿಸುತ್ತಾ ನಾಟ್ಯವಾಡುತ್ತಾ ಇದ್ದರು. ದಾವೀದನೂ ಅವರ ಸಂಗಡ ಸಂಭ್ರಮವಾಗಿ ಕೂಡಿ ಯಾಜಕರು ಧರಿಸುವ ಎಫೋದು ಎಂಬುವ ಪದಕವನ್ನು ಹಾಕಿಕೊಂಡಿದ್ದನು. ಮತ್ತು ಚಿಯೋನಿನಲ್ಲಿ ಸಿದ್ಧಮಾಡಿಸಿದ್ದ ಗುಡಾರದೊಳಗೆ ಪೆಟ್ಟಿಗೆಯನ್ನು ತಂದಿಟ್ಟ ಮೇಲೆ ದಾವೀದನು ಜನರೆಲ್ಲರನ್ನು ಆಶೀರ್ವದಿಸಿದನು. ಹೋಮಗಳೂ ಶಾಂತಿಬಲಿಗಳೂ ಅರ್ಪಿಸಲ್ಪಟ್ಟವು. ಶಾಂತಿ ಬಲಿಯರ್ಪಣೆಯ ಕಾಲದಲ್ಲಿ ಜನರೆಲ್ಲರಿಗೆ ರೊಟ್ಟಿಯನ್ನೂ ದ್ರಾಕ್ಷೆ ಹಣ್ಣಿನ ವಡೆಯನ್ನೂ ಹಂಚಿಕೊಟ್ಟನು. ಈ ಸಮಯಕ್ಕೇ 24 ನೇ ಕೀರ್ತನೆ ಬರೆಯಲ್ಪಟ್ಟಿತೆಂತಲೂ ಯಾಜಕರೊಳಗೆ ಗಾಯಕರು ಅದನ್ನು ಉತ್ತರ ಪ್ರತ್ಯುತ್ತರವಾಗಿ ಹಾಡಿದರೆಂತಲೂ ಅನೇಕರು ಭಾವಿಸುತ್ತಾರೆ. ದಾವೀದನು ಈ ಕಾಲದಲ್ಲಿ ಎಂಥ ಮನೋಭಿಪ್ರಾಯವುಳ್ಳವನಾಗಿದ್ದನೆಂದು ತಿಳಿಸುವ 101 ನೇ ಕೀರ್ತನೆಯೂ ಸಹಾ ಇದೇ ಸಂದರ್ಭದಲ್ಲಿ ಬರೆಯಲ್ಪಟ್ಟಿತೆಂದು ಇನ್ನೂ ಕೆಲವರು ಊಹಿಸುತ್ತಾರೆ. ಆತನು ಈ ಸಮಯದಲ್ಲಿ ತನ್ನ ರಾಜ್ಯವನ್ನು ದೇವರ ಕಟ್ಟಳೆಗಳ ಪ್ರಕಾರ ಆಳಬೇಕೆಂದು ನಿಶ್ಚಯಿಸಿಕೊಂಡು ತನ್ನ ಅಭಿಪ್ರಾಯವನ್ನು ಈ ಕೀರ್ತನೆಯಲ್ಲಿ ಸೂಚಿಸಿರುವದು ನಿಜವಾದರೆ "ದೇವರಿಗೆ ಇಷ್ಟನಾದ ಮನುಷ್ಯನು" ಎಂದು ಆತನು ಕರೆಯಲ್ಪಟ್ಟದ್ದು ಆಶ್ಚರ್ಯವಲ್ಲ. ಆತನೇ ಚಿಯೋನಿನ ಆರಾಧನಾ ಕ್ರಮವನ್ನು ಪ್ರೋತ್ಸಾಹ ಪಡಿಸುತ್ತಿದ್ದನಾದುದರಿಂದ ಆರಾಧನೆಯು ಶ್ಲಾಘನೀಯವಾಗಿ ಜರುಗುತ್ತಿತ್ತು. ಪೆಟ್ಟಿಗೆ ಇದ್ದ ಗುಡಾರವು ಶತ್ರುಗಳನ್ನು ಕೊಳ್ಳೆಹೊಡೆದು ತಂದ ಸಕಲ ವಿಧವಾದ ಶ್ರೇಷ್ಠವಸ್ತುಗಳಿಂದಲೂ ಪ್ರಜೆಗಳು ಇಷ್ಟಾನುಸಾರವಾಗಿ ಕೊಟ್ಟ ಕಾಣಿಕೆಗಳಿಂದಲೂ ತುಂಬಿತ್ತು. ದಾವೀದನು ಯಾಜಕರೆಲ್ಲರನ್ನು ಒಟ್ಟಾಗಿ ಸೇರಿಸಿ ಅವರನ್ನು ತರಗತಿಗಳ ಪ್ರಕಾರವಾಗಿಯೂ, ಪಂಗಡಗಳ ಪ್ರಕಾರವಾಗಿಯೂ ವಿಂಗಡಿಸಿ ಅವರು ಕ್ರಮವಾಗಿ ಬಂದು ಕಾಲಕಾಲಕ್ಕೆ ಸರಿಯಾಗಿ ವಿಧಿಸಲ್ಪಟ್ಟಿರುವ ಆರಾಧನೆಗಳನ್ನು ನಡಸುವಂತೆ ಗೊತ್ತು ಮಾಡಿದನು. ಚಿಯೋನಿಗೆ ಬಂದು ಆರಾಧಿಸುವದು ಇಸ್ರಾಯೇಲರಿಗೆ ವಿಶೇಷವಾದ ಪುಣ್ಯಕಾರ್ಯದ ಹಾಗೆ ಭಾವಿಸಲ್ಪಟ್ಟಿತು. ಮತ್ತು ಚಿಯೋನ್ ಪರ್ವತವು ತಾನೆ ದೇವರ ವಾಸಸ್ಥಳವಾಗಿಯೂ ದೇವರನ್ನು ವಿಶ್ವಾಸದಿಂದ ಕಾಣಬಹುದಾದ ಸ್ಥಾನವಾಗಿಯೂ ಇರುವ "ದೇವರ ಗುಡ್ಡ" ವೆಂದು ಎಲ್ಲಾ ಜನರು ಭಾವಿಸಲು ಉಪಕ್ರಮಿಸಿದರು.



### ದಾವೀದನ ದೇವತಾಸಕ್ತಿಯನ್ನು ಮೀಕಳು ನೋಡಿ ತುಚ್ಛೀಕರಿಸಿದ್ದು.

[ii ಸಮು. vi. 20—23 ; i ದಿನಚರ್ಯ. xv. 29.]

ದಾವೀದನು ಅರಮನೆಗೆ ಬಂದ ಮೇಲೆ ಕಿಟಿಕಿಯಿಂದ ಉತ್ಸವವನ್ನು ನೋಡುತ್ತಿದ್ದ ಆತನ ಹೆಂಡತಿಯಾದ ಮೀಕಳು ಆತನು ದೇವರ ಪೆಟ್ಟಿಗೆಯ ಮುಂದೆ ನಾಟ್ಯವಾಡಿ ತನ್ನನ್ನು ಅವಮಾನಕ್ಕೆ ಗುರಿಮಾಡಿಕೊಂಡನೆಂದು ಭಾವಿಸಿ ಆತನನ್ನು ಜರೆದಳು. ಇವಳು ಪ್ರಾಯಶಃ ನಿಜವಾದ ಭಕ್ತಿಯೇನೆಂಬದನ್ನು ಅರಿತವಳಲ್ಲ. ಆ ಕಾಲದ ಮರ್ಯಾದೆಯನ್ನನುಸರಿಸಿ ದೊಡ್ಡಸ್ತಿಕೆಯನ್ನು ಲೌಕಿಕ ನ್ಯಾಯದ ಪ್ರಕಾರ ತಿಳಿಯತಕ್ಕವಳಾಗಿದ್ದಳು. ದಾವೀದನಾದರೋ ತನಗಿದ್ದ ದೇವತಾಸಕ್ತಿಯಲ್ಲಿ ಲೌಕಿಕ ಮರ್ಯಾದಾಕ್ರಮಗಳನ್ನು ನಿರಾಕರಿಸಿ ನಡೆದನು. ಆತನು ಅವಳಿಗೆ ಪ್ರತ್ಯುತ್ತರವಾಗಿ — ಲೌಕಿಕ ಮರ್ಯಾದೆಯ ಕ್ರಮಗಳು ಏನಾದರೂ ಆಗಲಿ, ದೇವರಿಗೆ ಸ್ತೋತ್ರಾರ್ಪಣೆಯನ್ನು ಹೃದಯಪೂರ್ವಕವಾಗಿ ಮಾಡುವಾಗ ಅವುಗಳನ್ನು ಯಾವ ಪ್ರಕಾರ ಮಾಡಿದರೂ ದೋಷವಿಲ್ಲ ಎಂದು ಹೇಳಿದನು. ಮತ್ತು ಈ ಡಾಂಭಿಕಳಾದ ರಾಣಿಯು ಇಂಥಾ ಕಾರ್ಯವನ್ನು ಮಾನಹೀನವಾದದೆಂದಾಗಲಿ ತುಚ್ಛವೆಂದಾಗಲಿ ಭಾವಿಸಿದರೆ ದಾವೀದನು ಇನ್ನೂ ಹೆಚ್ಚಾದ ತುಚ್ಛನಾಗಿ ನಡಕೊಳ್ಳುವೆನೆಂದು ಸಾಧಿಸಿದ್ದಲ್ಲದೆ ಯಥಾರ್ಥ ಮನಸ್ಸಿನವರ್ಯಾರೋ ಅವರೆಲ್ಲರೂ ತಾನು ಮಾಡಿದ ಕಾರ್ಯದಲ್ಲಿ ನಿಜಾರ್ಥವನ್ನು ಗ್ರಹಿಸಿ ದೇವತಾಸಕ್ತಿಯೇ ನಿಜವಾದ ಘನತೆಯನ್ನು ಕೊಡ ಬಲ್ಲುದಾಗಿದೆಯೆಂದು ತಿಳಿಯುವರು ಎಂದು ಹೇಳಿದನು.

### ದಾವೀದನು ಜಯಶೀಲನಾಗಿ ನಡಸಿದ ಯುದ್ಧಗಳು.

#### (೧) ಫಿಲಿಷ್ಟಿಯರ ಸಂಗಡ ನಡಸಿದ ಯುದ್ಧಗಳು.

[ii ಸಮು. viii. 1; i ದಿನಚರ್ಯ. xviii. 1.]

ಈಗ ಇಸ್ರಾಯೇಲಿನ ಜನಾಂಗಗಳೆಲ್ಲವು ಒಂದೇ ರಾಜ್ಯವಾಗ ಸೇರಿಸಲ್ಪಟ್ಟು ಗಂಭೀರವಾದ ಉದ್ದೇಶವೂ ಘನವಾದ ಆಸಕ್ತಿಯೂ ಉಳ್ಳ ದೊಡ್ಡ ಅರಸನಿಂದ ಪಾಲಿಸಲ್ಪಡುತಿದ್ದದರಿಂದ ಎಂಥಾ ಸಾಹಸಕಾರ್ಯವನ್ನಾದರೂ ಮಾಡುವದಕ್ಕೆ ಅವರು ಸಿದ್ಧವಾಗಿದ್ದರು. ಆದಕಾರಣ ಕೆಲವರುಷಗಳೊಳಗೆ ದಾವೀದನ ಆ ಉತ್ಕೃಷ್ಟ ಆಳಿಕೆಯಿಂದ ಇಸ್ರಾಯೇಲರಿಗೆ ಅನೇಕ ಜಯಗಳು ಲಭಿಸಿದವು. ಮತ್ತು ಈಜಿಪ್ಟ್ ದೇಶದ ಸರಹದ್ದುಗಳಿಗೂ ಯೂಫ್ರಟಿಸ್ ನದಿಗೂ ಮಧ್ಯದಲ್ಲಿದ್ದ ದೇಶವೆಲ್ಲಾ ಇವರ ಸ್ವಾಧೀನವಾಯಿತು. ಈ ಯುದ್ಧಗಳನ್ನು ಕುರಿತು ಅತಿ ಸ್ವಲ್ಪವೇ ಚರಿತ್ರೆಯಲ್ಲಿ ಬರೆಯಲ್ಪಟ್ಟಿದೆ. ಸಂಸೋನನ ಕಾಲದಿಂದ ಇಷ್ಟು ವರೆಗೂ ಇಸ್ರಾಯೇಲರನ್ನು ಬಾಧಿಸುತ್ತಿದ್ದ ಫಿಲಿಷ್ಟಿಯರನ್ನೇ ಮೊದಲು ದಾವೀದನು ಬಹುಶಃ ಅಣಗಿಸಿರುವನು. ದಾವೀದನು ಇವರಿಂದ "ಕೈಯ ಕಡಿವಾಣವನ್ನು" ಅಂದರೆ ಇಸ್ರಾಯೇಲರ ಮೇಲೆ ಅವರಿಗಿದ್ದ ಆಡಳಿತವನ್ನು ತೆಗೆದುಕೊಂಡನು ಎಂದು ಇಷ್ಟು ಮಾತ್ರ ಇವರನ್ನು ಕುರಿತು

Digitized by ROJA MUTHIAH RESEARCH LIBRARY

ಓದುತ್ತೇವೆ. ದಾವೀದನು ಇವರ ದೇಶವನ್ನು ತನಗೆ ವಳಿತವಾದ ದೇಶವಾಗ ಮಾಡಿಕೊಂಡನೋ ಇಲ್ಲವೋ ಎಂಬುವದು ಮಾತ್ರ ಬರೆಯಲ್ಪಡಲಿಲ್ಲ. ಆದರೆ ಅದನ್ನು ವಶಮಾಡಿಕೊಂಡನೆಂದು ನಾವು ಸಾಧಿಸ ಬಹುದು. ಈ ಯುದ್ಧದಲ್ಲೇ ದಾವೀದನ ಶೂರರಲ್ಲಿ ಅನೇಕ ಮಂದಿ ಬಿರುದುಗಳನ್ನು ಹೊಂದಿದರೆಂದು ತೋರುವದು. ಈ ಯುದ್ಧಗಳಲ್ಲಿ ಪಾಸ್‌ದಾಮಿಮಿನ (i ಸಮು xvii: 1 ದಲ್ಲಿ ಎಫೆಸ್‌ದಾಮಿಮು ಎಂದು ಬರೆದಿದೆ.) ಯುದ್ಧದೊಳಗೆ ಡೊಡೊನ ಮಗನಾದ ಎಲಿಯೇಜರನೆಂಬವನು ತನ್ನ ಸಂಗಡ ಇದ್ದವರೆಲ್ಲರು ಓಡಿ ಹೋದಾಗ್ಯೂ ತಾನು ಒಂಟಿಗನಾಗಿ ನಿಂತು, ಕತ್ತಿಯು ಕೈಗೆ ಹತ್ತಿಕೊಳ್ಳುವ ಮಟ್ಟಿಗೂ ಫಿಲಿಷ್ಟಿಯರ ಸಂಗಡ ಕಾದಾಡುತ್ತಾ ಇದ್ದನು. ಓಡಿ ಹೋಗಿದ್ದ ಇಸ್ರಾಯೇಲರೆಲ್ಲರು ಕಡೆಗೆ ಧೈರ್ಯ ತಂದುಕೊಂಡು ತಿರಿಗಿ ಬರುವಷ್ಟರೊಳಗೆ ಪೂರ್ಣ ಜಯವು ಉಂಟಾಗಿತ್ತು. ಅವರು ಶತ್ರುಗಳ ವಸ್ತು ವಿಶೇಷಗಳನ್ನೆಲ್ಲಾ ಕೊಳ್ಳೆ ಹೊಡೆಯುವದೊಂದು ಮಾತ್ರ ಉಳಿದಿತ್ತು. ಆಗಿಯ ಮಗನಾದ ಷಮ್ಮನನ್ನು ಕುರಿತು ಕೂಡ ಹೀಗೆಯೇ ಪರಾಕ್ರಮ ಕಾರ್ಯವ ಮಾಡಿದನೆಂದು ಬರೆಯಲ್ಪಟ್ಟಿದೆ. ಇವರು ದಾವೀದನ ಮೂವರು ವೀರಪರಾಕ್ರಮಶಾಲಿಗಳಲ್ಲಿ ಇಬ್ಬರು. ಒಂದು ಯುದ್ಧದಲ್ಲಿ ದಾವೀದನು ರಾಕ್ಷಸಾಕೃತಿಯುಳ್ಳವನಾಗಿದ್ದ ಒಬ್ಬ ಮನುಷ್ಯನ ಸಂಗಡ ಕಾದಾಡುತ್ತಿರುವಾಗ ಆತನಿಗೆ ಪ್ರಾಣವೇ ಹೋಗುವಂತಿತ್ತು. ದಾವೀದನು ಸಮರದಲ್ಲಿ ಬಸವಳಿದು, ಯೋವಾಬನ ತಮ್ಮನೂ ತನ್ನ ಸೋದರಳಿಯನೂ ಆದ ಅಬಿಷಾಯಿಯು ಸಹಾಯಕ್ಕೆ ಬಾರದೆ ಹೋಗಿದ್ದರೆ, ನಿಶ್ಚಯವಾಗಿ ಮಡಿದು ಹೋಗಿರುವನು. ಈ ಕಾರಣದಿಂದ "ಇಸ್ರಾಯೇಲಿನ ದೀಪವನ್ನು ನಂದಿಸದ" ಹಾಗೆ ಅರಸನು ಯುದ್ಧಕ್ಕೆ ಹೋಗಬಾರದೆಂಬುವ ಕಟ್ಟಳೆಯೊಂದುಂಟಾಯಿತು. ಫಿಲಿಷ್ಟಿಯರಿಗೆ ಸಹಾಯ ಮಾಡಿದ ಆಜಾನುಬಾಹುಗಳಾದವರು ನಾಲ್ಕು ಮಂದಿಯನ್ನು ದಾವೀದನ ಅತಿಬಲರು ಸಂಹರಿಸಿ ಖ್ಯಾತಿಗೊಂಡರು.

### (೨) ಮೋವಾಬ್ಯರ ಸಂಗಡ ನಡಸಿದ ಯುದ್ಧಗಳು.

[ii ಸಮು. viii. 2; i ದಿನಚರ್ಯ. xviii. 2.]

ಮೋವಾಬ್ಯರ ಸಂಗಡ ಇಸ್ರಾಯೇಲರು ಮಾಡಿದ ಯುದ್ಧಕ್ಕೆ ಯಾವ ಕಾರಣವಿದ್ದಿತೋ ಹೇಳಲಸಾಧ್ಯವಾಗಿದೆ. ಆದರೆ ದಾವೀದನು ತನ್ನ ತಾಯಿತಂದೆಗಳನ್ನು ಮೋವಾಬಿನ ಅರಸನ ಅಧೀನದಲ್ಲಿ ಬಿಟ್ಟಂದಿನಿಂದೀಚಿಗೆ ಯಾವದೋ ಒಂದು ಕಾರಣದಿಂದ ಉಭಯರಿಗೆ ಅಸಮಾಧಾನವುಂಟಾಗಿರ ಬಹುದು. ಯುದ್ಧವನ್ನು ಕುರಿತ ವಿವರವಾದರೂ ಬರೆಯಲ್ಪಟ್ಟಿಲ್ಲ. ಆದರೆ ಅವರ ಮೇಲೆ ದಾವೀದನಿಗೆ ಸಂಪೂರ್ಣ ಜಯವು ಉಂಟಾಯಿತೆಂತಲೂ ಸೆರೆಯವರು ಬಹಳ ಕಠಿಣವಾಗಿ ನಡಸಲ್ಪಟ್ಟರೆಂತಲೂ ಬರೆದಿದೆ. ಹೇಗಂದರೆ—ಸೆರೆ ಸಿಕ್ಕಿದವರೆಲ್ಲರನ್ನು ವರಿಶೆಯಾಗಿ ನೆಲದ ಮೇಲೆ ಮಲಗಿಸಿ ದಾರದಿಂದ ಅಳತೆಮಾಡಿ ಮೂರು ಗುಂಪಾಗಿ ವಿಂಗಡಿಸಿ ಎರಡು ಗುಂಪಿನವರನ್ನು ಆ ಕ್ಷಣವೇ ಕೊಂದು ಹಾಕಿದರು. ನಿಂತ ಗುಂಪಿನವರನ್ನು ಮಾತ್ರ ಪ್ರಾಣದಿಂದ ಉಳಿಸಿ ಅವರನ್ನು ಗುಲಾಮರಾಗ ಮಾಡಿದನು. ಮೋವಾಬ್ಯರು ದಾವೀ



ದನ ಸಾಮಂತರಾಗಿದ್ದು ಅಹಾಬನ ಮರಣದ ವರೆಗೂ ಕಪ್ಪವನ್ನು ಕೊಡುತ್ತಾ ಬಂದರು. (ii ಅರಸು. i. 1; iii. 4—27). ತರುವಾಯ ಮೇಷನ ಕಾಲದಲ್ಲಿ ಪುನಃ ಸ್ವತಂತ್ರರಾದರು.

### (೩) ಅಮ್ಮೋನಿಯರೂ, ಅರಮೇಯರ ಅರಸನೂ.

[ii ಸಮು viii. 3—13; x; i ದಿನಚರ್ಯ. xviii. 3—10; xix.]

ಕಾನಾನಿಗೂ ಸಿರಿಯ ದೇಶದ ಅರಣ್ಯಕ್ಕೂ ನಡುವೆ ಯೂಫ್ರಟಿಸ್ ನದಿಯ ವರೆಗೆ ವಿಸ್ತರಿಸಿಕೊಂಡಿರುವ ದೇಶವನ್ನು ದಾವೀದನು ಗೆದ್ದು ಸ್ವಾಧೀನ ಮಾಡಿಕೊಂಡನು. ಈ ಪ್ರದೇಶಗಳ ಅರಸರು ಕಪ್ಪವನ್ನು ಕಟ್ಟುತ್ತಾ ದಾವೀದನ ಆಡಳಿತಕ್ಕೆ ಒಳಪಟ್ಟವರಾದರು. ಮೋವಾಬಿನ ಉತ್ತರದಲ್ಲಿಯೂ ಯೋರ್ದನಿನ ಆಚೆ ಇಸ್ರಾಯೇಲರ ದೇಶದ ಪೂರ್ವದಲ್ಲಿಯೂ ಇದ್ದ ದೇಶವು ಅಮ್ಮೋನಿಯರದಾಗಿತ್ತು. ರಬ್ಬಾ ಎಂಬುದು ಅದರ ರಾಜಧಾನಿಯಾಗಿತ್ತು. ಮಿಕ್ಕ ದೇಶವು ಅರಾಮ್ಯ ಜನಗಳಲ್ಲಿ ವಿಭಾಗಿಸಲ್ಪಟ್ಟಿತ್ತು. ಲೆಬನೋನಿಗೆ ಉತ್ತರದಲ್ಲಿ ಎರಡು ರಾಜ್ಯಗಳಿದ್ದವು. ಒಂದು ರಾಜ್ಯವು ಪೂರ್ವದಲ್ಲಿ ಜೋಬ ಎಂಬುವದು ಯೂಫ್ರಟಿಸ್ ವರೆಗೂ ವ್ಯಾಪಿಸಿತ್ತು. ಮತ್ತೊಂದು ಹಾಮಾತ್ (ಒರಾಂಟಿಸ್ ನದಿಯ ಮೇಲಿದ್ದ ಹಾಮಾತ್ ರಾಜಧಾನಿ.) ಜೋಬಕ್ಕೂ ಸಮುದ್ರ ತೀರಕ್ಕೂ ಮಧ್ಯೆ ಇತ್ತು. ಇದಕ್ಕೆ ದಕ್ಷಿಣದಲ್ಲಿ ದಮಸ್ಕದ ರಾಜ್ಯವೂ ಇದಕ್ಕೂ ಅಮ್ಮೋನಿಗೂ ಮಧ್ಯದಲ್ಲಿ ರೆಹೋಬು ಇಲ್ಲವೆ ಬೇತ್-ರೆಹೋಬು ಎಂಬುವ ರಾಜ್ಯವೂ ಇದ್ದವು. ಹೆರ್ಮೋನಿನ ತಪ್ಪಲಲ್ಲಿ ಮಾಖಾ ರಾಜ್ಯವೂ ಇದಕ್ಕೆ ಆಗ್ನೇಯವಾಗಿ ಟೋಬು ರಾಜ್ಯವೂ ಇದ್ದವು. ಕಡೆಯಲ್ಲಿ ಹೇಳಿದ ಈ ಮೂರು ರಾಜ್ಯಗಳು ಸಿರಿಯ ದೇಶದ ಅರಣ್ಯದ ಮೇರೆಗಳಲ್ಲಿದ್ದುದರಿಂದ ಈ ಜನರು ಅರಣ್ಯ ಸಂಚಾರಿಗಳಾಗಿದ್ದರೆಂದು ತೋರುತ್ತೆ. ಇವರು ಮಂದೆಗಳಿಗೆ ಆಯಾ ಪ್ರದೇಶಗಳ ಅಡವಿಯಲ್ಲಿದ್ದ ಹಸುರುಗಾವಲುಗಳೇ ಆಶ್ರಯವಾಗಿದ್ದವು. ಹೀಗೆ ದಾವೀದನ ಆಡಳಿತವು ಹೆಚ್ಚುತ್ತಿರುವದನ್ನು ಈ ಚಿಕ್ಕ ಚಿಕ್ಕ ರಾಜ್ಯಗಳ ಅರಸರು ನೋಡಿ ಅಸೂಯೆಯುಳ್ಳವರಾಗಿ ಎಲ್ಲರು ಒಕ್ಕಟ್ಟಾಗಿ ಸೇರಿ ದಾವೀದನನ್ನು ನಾಶಮಾಡುವದಕ್ಕೆ ಯತ್ನೈಸಿದರು. ಆದರೆ ಸಿರಿಯದ ಉನ್ನತ ಪ್ರದೇಶಗಳಲ್ಲಿ ದಮಸ್ಕಕ್ಕೂ ಬಾಷಾನಿಗೂ ನಡುವೆ ಇದ್ದ ಗೆಷೂರ್ ಎಂಬುವ ಚಿಕ್ಕ ರಾಜ್ಯದ ಅರಸನಾದ ಟಲ್ಮಾಯಿಯು ದಾವೀದನಲ್ಲಿ ಸ್ನೇಹವಾಗಿದ್ದನಾದದರಿಂದ ಇತರ ಅರಾಮ್ಯ ಅರಸರಿಗೆ ವಿರೋಧವಾಗಿ ದಾವೀದನಿಗೆ ಸಹಾಯ ಮಾಡಿದನೆನ್ನುವದಕ್ಕೆ ಸಂಶಯವಿಲ್ಲ.

### ಅರಾಮ್ಯರು ಮಾಡಿಕೊಂಡ ಒಡಂಬಡಿಕೆಯ ಸಂದರ್ಭವು.

[ii ಸಮು. x. 1—4; i ದಿನಚರ್ಯ. xix. 1—15.]

ದಾವೀದನು ಮೊದಲು ಅಮ್ಮೋನಿಯರನ್ನು ಎದುರಿಸಿದ್ದರಿಂದ ಇವರೇ ಮೊದಲು ದಾವೀದನಿಗೆ ವಿರೋಧವಾಗಿ ಶತ್ರುಭಾವವನ್ನು ವಹಿಸಿದರು. ಯಾಬೆಷ್ ಗಿಲ್ಯಾದಿನಲ್ಲಿ ಅಪಜಯವನ್ನು ಹೊಂದಿದಂದಿನಿಂದ ಇಸ್ರಾಯೇಲರ ಸ್ನೇಹವನ್ನು ಬಯಸುತ್ತಿದ್ದ ಅಮ್ಮೋನಿಯರ

Digitized by ROJA MUTHIAH RESEARCH LIBRARY

ಅರಸನಾದ ನಾಹಾಷನು ಸತ್ತನಂತರ ದಾವೀದನು ಇವನ ಮರಣದ ವಿಷಯವಾಗಿ ಸಂತಾಪವನ್ನು ಸೂಚಿಸುವದಕ್ಕೂ ಮಗನು ಸಿಂಹಾಸನಾರೂಢನಾಗುವದರಿಂದ ಅವನಿಗೆ ಶುಭವಾದವನ್ನು ಹೇಳುವದಕ್ಕೂ ನಹಾಷನ ಮಗನಾದ ಹನೂನನ ಬಳಿಗೆ ರಾಯಭಾರವನ್ನು ಕಳುಹಿಸಿಕೊಟ್ಟನು. ಅಮ್ಮೋನಿಯರ ನಾಯಕರು ತಮ್ಮ ಯೌವನ ಅರಸನ ಶಕ್ತಿಯನ್ನು ಮಿತಿವಿಾರಿ ನಂಬಿ ದಾವೀದನ ಸಂಗಡವಿದ್ದ ಸ್ನೇಹವನ್ನು ತೊರೆದು ಅವನ ಬಲವು ಎಲ್ಲಾ ಕಡೆಯಲ್ಲಿ ವ್ಯಾಪಿಸುವದಕ್ಕಿಂತ ಮೊದಲೇ ಅಣಗಿಸಬೇಕೆಂದು ಅವನಿಗೆ ಯೋಚನೆ ಹೇಳಿಕೊಟ್ಟರು ಮತ್ತು ದಾವೀದನ ರಾಯಭಾರಿಗಳು ತಮ್ಮ ದೇಶವನ್ನು ಪಾಳತಿ ನೋಡುವದಕ್ಕೆ ಬಂದ ಗೂಢಚಾರರೆಂದು ಹೇಳಿ ಅವರನ್ನು ಅವಾಚ್ಯವಾದ ಅನೇಕ ವಿಧಗಳಲ್ಲಿ ಮಾನಭಂಗಮಾಡಿ ಕಳುಹಿಸಿ ಬಿಟ್ಟರು. ಅನಂತರ ಇವರು ದಾವೀದನು ಇಂಥಾ ದುಷ್ಕಾರ್ಯಕ್ಕೆ ತಕ್ಕ ಪ್ರತೀಕಾರವನ್ನು ಮಾಡದೆ ಬಿಡನೆಂದರಿತು ಯುದ್ಧಕ್ಕೆ ಸಿದ್ಧಮಾಡಿದರು. ಮತ್ತು ಜೋಬ, ರಿಹೋಬ್, ಮಾಖಾ, ಟೋಬ್ ದೇಶಗಳ ಅರಾಮ್ಯರನ್ನು ತಮ್ಮ ಸಂಗಡ ಸೇರುವಂತೆ ಸಮ್ಮತಿಪಡಿಸಿದ್ದರಿಂದ, ಇವರು ೩೩,೦೦೦ ಮಂದಿ ಭಟರನ್ನು ಇವರಿಗೆ ಸಹಾಯವಾಗಿ ಕಳುಹಿಸಿದರು. ಇವರು ಬಂದು ರೂಬೇನನ ಗೋತ್ರದಲ್ಲಿ ಇಸ್ರಾಯೇಲರ ಪಟ್ಣವಾಗಿದ್ದ ಮೆಡೀಬವನ್ನು ಕೂಡಲೆ ಮುತ್ತಿದರು. ಈ ಸುದ್ದಿ ಕೇಳುತ್ತಲೇ ದಾವೀದನೂ ಸಮಯಕ್ಕೆ ಒದಗಿದ ಭಟರನ್ನು ಕೂಡಿಸಿ, ಅಮ್ಮೋನಿಯರ ಮೇಲೆ ಯುದ್ಧಕ್ಕೆ ಯೋವಾಬ್ ಅಬಿಷಾಯಿಯರನ್ನು ಸೇನಾನಾಯಕರಾಗ ಮಾಡಿ ಕಳುಹಿಸಿದನು. ಇಸ್ರಾಯೇಲರು ರಬ್ಬಾ ಎಂಬ ಪಟ್ಟಣದ ಬಳಿಗೆ ಬರುತ್ತಿರುವಾಗ ತಮಗೇ ತಿಳಿಯದ ಹಾಗೆ ಶತ್ರುಗಳ ಕೈಯೊಳಗೆ ಬಿದ್ದರು. ಹ್ಯಾಗಂದರೆ ಅರಾಮ್ಯರು ಮೆಡೀಬದ ಮುತ್ತಿಗೆಯನ್ನು ಬಿಟ್ಟು ಇವರಿಗಾಗಿ ಹೊಂಚಿಕೊಂಡಿದ್ದರು. ಇಸ್ರಾಯೇಲರು ಅಕಸ್ಮಾತ್ತಾಗಿ ಶತ್ರುಗಳ ಎದುರಿಗೆ ಬಂದದನ್ನು ಯೋವಾಬನು ನೋಡಿ ತನ್ನ ಸೇನೆಯನ್ನು ಎರಡು ಭಾಗಗಳಾಗಿ ಮಾಡಿ ಒಂದು ಭಾಗವನ್ನು ತೆಗೆದುಕೊಂಡು ಅರಾಮ್ಯರ ಮೇಲೆ ಬಿದ್ದನು. ಅಬಿಷಾಯಿಯು ಎರಡನೇ ಭಾಗವನ್ನು ಮತ್ತೊಂದು ಕಡೆಗೆ ತಿರುಗಿಸಿ ಅಮ್ಮೋನಿಯರನ್ನು ಎದುರಿಸಿದನು. ಯೋವಾಬನು ಶೀಘ್ರದಲ್ಲಿಯೇ ಶತ್ರುಸೇನೆಯನ್ನು ಪಲಾಯನ ಮಾಡಿಸಲು ಅಮ್ಮೋನಿಯರು ಇದನ್ನು ನೋಡಿ ತಾವೂ ಓಡಿ ಹೋಗಿ ತಮ್ಮ ಪಟ್ಟಣವನ್ನು ಸೇರಿಕೊಂಡರು. ಮುತ್ತಿಗೆ ಹಾಕುವದಕ್ಕೆ ಸಮಯವಿಲ್ಲದೆಯೋ ಇಲ್ಲವೆ ಬೇರೆ ಕಾರಣಗಳ ನಿಮಿತ್ತವೋ ಇಸ್ರಾಯೇಲರು ತಮಗೆ ಸಿಕ್ಕಿದ ಕೊಳ್ಳೆಯನ್ನು ಮಾತ್ರ ತೆಗೆದುಕೊಂಡು ತಮ್ಮ ದೇಶಕ್ಕೆ ತೆರಳಿದರು.

### ಅರಾಮ್ಯರು ದಾವೀದನಿಗೆ ಶರಣಾಗತರಾದದ್ದು.

[ii ಸಮು. viii. 3—12; x. 15—19; i ದಿನಚರ್ಯ. xviii. 3—10; xix. 16—19.]

ಮಾರಣೆ ವರುಷ ವಿಜಯ ಯಾತ್ರೆಯ ಕಾಲವು ಬಂದಾಗ ಅರಾಮ್ಯರು ತಾವು ಹಿಂದೆ ಹೋಗಲಾಡಿಸಿಕೊಂಡಿದ್ದ ದೇಶವನ್ನು ಪುನಃ ಸಂಪಾದಿಸಿಕೊಳ್ಳುವದಕ್ಕೆ ಅನೇಕ ವಿಧ



ವಾಗಿ ಯತ್ನೈಸಿದರು ಜೋಬದ ಅರಸನಾದ ಹದದೇಜರನು ದಾವೀದನಿಗುಂಟಾದ ಜಯವನ್ನು ನೋಡಿ ಗಾಬರಿಯಾಗಿ ತಾನೊಬ್ಬನೇ ದಾವೀದನನ್ನು ಎದುರಿಸುವದಕ್ಕೆ ಯತ್ನೈಸಿದನು. ಮೇಲೆ ಸೂಚಿಸಿದ ಚಿಕ್ಕ ರಾಜ್ಯಗಳಿಗೆಲ್ಲಾ ಇವನು ಪ್ರಭುವಾಗಿದ್ದ ಹಾಗೆ ತೋರುತ್ತದೆ. ಆದಕಾರಣ ಅವನು ತನ್ನ ಸೈನ್ಯವನ್ನು ಕೂಡಿಸಿಕೊಂಡು ಯೂಪ್ರಟೀಸಿಗೆ ಆಚೆ ಇದ್ದ ಅರಾಮ್ಯರನ್ನು ಸಹ ಫೌಜು ಕಳುಹಿಸುವಂತೆ ಕೇಳಿಕೊಂಡನು. ಇವನ ಸೈನ್ಯವು ಬಹು ಯೋಗ್ಯವಾದ ಸ್ಥಿತಿಯಲ್ಲಿದ್ದಂತೆ ಕಾಣಬರುತ್ತೆ. ಹ್ಯಾಗಂದರೆ ದಂಡಿನೊಳಗಣ ಹಲವು ಉದ್ಯೋಗಸ್ಥರ ಡಾಲುಗಳು ಭಂಗಾರದಿಂದ ಮಾಡಿದವುಗಳಾಗಿದ್ದವು. ಇನ್ನು ಕೆಲವು ಭಂಗಾರದ ತಗಡು ಹೊದಿಸಿದವುಗಳಾಗಿದ್ದವು. ಸವಾರರ ಸೇನೆಯು ವಿಶೇಷ ಬಲವುಳ್ಳದಾಗಿತ್ತು. ಈ ಸೈನ್ಯವನ್ನು ಹದದೇಜರನ ಸೇನಾಪತಿಯಾದ ಶೋಬಾಕನು ನಡಿಸಿಕೊಂಡು ಇಸ್ರಾಯೇಲರ ಸರಹದ್ದಿನ ಬಳಿಗೆ ಬಂದನು. ಹದದೇಜರನು ಯುದ್ಧಕ್ಕೆ ಸಿದ್ಧನಾಗುತ್ತಿರುವದನ್ನು ದಾವೀದನು ಮೊದಲೇ ಕೇಳಿ ತನ್ನ ಸೈನ್ಯವನ್ನು ತೆಗೆದುಕೊಂಡು ಶೋಬಾಕನನ್ನು ಸಂಧಿಸುವದಕ್ಕೆ ಉತ್ತರ ದೆಶೆಗೆ ಹೊರಟನು. ಎರಡು ಸೇನೆಗಳವರು ಹಿಲಾಮಿನಲ್ಲಿ ಸಂಧಿಸಿದರು. ಇದರಲ್ಲಿ ದಾವೀದನು ಸಂಪೂರ್ಣ ಜಯವನ್ನು ಹೊಂದಿದನು. ಮತ್ತು ೧,೭೦೦ ಸವಾರರನ್ನು ೨೦,೦೦೦ ಪದಾತಿ ಸೈನ್ಯವನ್ನು ಸೆರೆಹಿಡಿದನು. ಇದಲ್ಲದೆ ಅಪರಿಮಿತವಾದ ಐಶ್ವರ್ಯವೂ ಕೊಳ್ಳೆಯಾಗಿ ಜಯಶಾಲಿಗಳಿಗೆ ಸಿಕ್ಕಿತು. ದಮಸ್ಕದ ಅರಾಮ್ಯರು ಹದದೇಜರನ ಸಂಗಡ ಒಪ್ಪಂದ ಮಾಡಿಕೊಂಡು ಶೀಘ್ರದಲ್ಲಿಯೇ ತಿರಿಗಿ ಇಸ್ರಾಯೇಲರ ಸಂಗಡ ದೊಡ್ಡ ಯುದ್ಧವನ್ನು ಮಾಡಿದರು. ಅದರಲ್ಲಿಯೂ ಇಸ್ರಾಯೇಲರಿಗೆ ಜಯವುಂಟಾಯಿತು. ಶತ್ರುಗಳು ೨೨,೦೦೦ ಮಂದಿಯನ್ನು ಯುದ್ಧದಲ್ಲಿ ಕಳಕೊಂಡರು, ಅವರ ಬಲವು ಸಂಪೂರ್ಣವಾಗಿ ಕುಂದಿಹೋಯಿತು. ಜೋಬ, ದಮಸ್ಕಗಳಲ್ಲಿದ್ದವರೂ ಮಿಕ್ಕ ಎಲ್ಲಾ ಚಿಕ್ಕ ರಾಜ್ಯಗಳವರೂ ದಾವೀದನ ಸರ್ವಾಧಿಪತ್ಯವನ್ನು ಒಪ್ಪಿಕೊಳ್ಳುವವರಾದರು. ಮತ್ತು ದಾವೀದನು ಆಯಾ ಪಟ್ಣಗಳಲ್ಲಿ ತೆರಿಗೆಯನ್ನು ವಸೂಲು ಮಾಡುವದಕ್ಕೆ ಪ್ರತಿನಿಧಿಗಳನ್ನು ನೇಮಿಸಿದನು. ಆತನು ಜಯವನ್ನು ಹೊಂದಿದ ಸಮಾಚಾರವನ್ನು ಹಾಮಾತಿನ ಅರಸನಾದ ಟೋವನು ಕೇಳಿ ತನ್ನ ಸಂತೋಷವನ್ನು ಸೂಚಿಸುವದಕ್ಕೂ ತಾನೂ ದಾವೀದನಿಗೆ ಶರಣಾಗತನಾಗ ಬೇಕೆಂಬುದನ್ನು ತಿಳಿಸುವದಕ್ಕೂ ತನ್ನ ಮಗನಾದ ಹದೋರಮನನ್ನು ಕಳುಹಿಸಿದನು. ಇವನು ಬಹು ಅಮೂಲ್ಯವಾದ ಬಹುಮಾನವನ್ನು ತಂದದು ಮಾತ್ರವಲ್ಲದೆ ವರ್ಷಕ್ಕೊಂದಾವರ್ತಿ ಕಪ್ಪವನ್ನು ಸಹ ಕೊಡುವದಕ್ಕೆ ಒಪ್ಪಿಕೊಂಡನು. ಯುದ್ಧವಾದ ಮೇಲೆ ದಾವೀದನು ಆ ಸ್ಥಳದಲ್ಲಿ ಜಯಚಿನ್ಹೆಗಾಗಿ ಒಂದು ಸ್ತಂಭವನ್ನು ನಿಲ್ಲಿಸಿದನು. ಇಸ್ರಾಯೇಲರಲ್ಲಿ ಇಂಥಾ ವಾಡಿಕೆ ಇತ್ತೆಂದು ತೋರಿಸುವದಕ್ಕೆ ಇದೊಂದು ಸೂಚನೆಯನ್ನು ವಿನಾಯಿಸಿ ಬೇರೇನೂ ಬರೆದಿಲ್ಲ. ದಾವೀದನು ಇಸ್ರಾಯೇಲರ ವಾಡಿಕೆಯ ಮೇರೆಗೆ ಯುದ್ಧದಲ್ಲಿ ಹಿಡಿದುಕೊಂಡ ಕುದುರೆಗಳಲ್ಲಿ ನೂರು ರಥಗಳಿಗೆ ಸಾಕಾಗುವಷ್ಟನ್ನು ಮಾತ್ರ ಉಳಿಸಿಕೊಂಡು ಮಿಕ್ಕವುಗಳನ್ನು ಉಪಯೋಗಕ್ಕೆ ಬಾರದ ಹಾಗೆ ಮಾಡಿದನು.



Digitized by ROJA MUTHIAH RESEARCH LIBRARY

### (೪) ಎದೋಮನ್ನು ವಶಪಡಿಸಿಕೊಂಡದ್ದು.

(ii ಸಮು. viii. 13, 14; i ಅರಸು. xi. 15—18;

i ದಿನಚರ್ಯ. xviii. 12, 13).

ಇದೇ ಸಮಯದಲ್ಲಿ ಮೃತ್ಯುಕಡಲಿಗೆ ದಕ್ಷಿಣದಲ್ಲಿ ಪರ್ವತವಾಸಿಗಳಾಗಿದ್ದ ಎದೋಮಿಯರೂ ದಾವೀದನಿಗೆ ಒಳಪಟ್ಟರು. ಇವರು ಮೃತ್ಯುಕಡಲಿನ ಬಳಿಯಲ್ಲಿದ್ದ ಉಪ್ಪಿನ ತಗ್ಗಿಗೆ ಹೋಗಿ ಅರಾಮ್ಯರಿಗೋ ಇಲ್ಲವೇ ಅಮ್ಮೋನಿಯರಿಗೋ ಸಹಾಯಮಾಡಿದ ಹಾಗೆ ಕಂಡು ಬರುತ್ತೆ. ಇಲ್ಲಿ ದಾವೀದನ ಸೈನ್ಯದವರು ಇವರನ್ನು ಸಂಧಿಸಿ ಕಾದಿ ಓಡಿಸಿಬಿಟ್ಟರು. ಇವರು ಓಡಿ ಹೋಗಿ ತಮ್ಮ ದುರ್ಗಗಳಲ್ಲಿ ಸೇರಿಕೊಂಡರೂ ಯೋವಾಬನ ಸೈನ್ಯವು ಆರು ತಿಂಗಳಿನ ವರೆಗೂ ಇವರನ್ನು ಹುಡುಕಿ ಹಿಡಿಯಿತು. ದೇಶವು ಸಮಾಧಾನಸ್ಥಿತಿಯನ್ನು ಹೊಂದಬೇಕಾಗಿದ್ದರೆ ಯುದ್ಧಮಾಡಿ ಶತ್ರುಗಳನ್ನು ಸೆರೆಹಿಡಿದು ಸಂಹಾರ ಮಾಡುವದೇ ಅವಶ್ಯವಾದ ವಿಧವೆಂದು ತೋರುತ್ತಿತ್ತು. ಆಯುಧಪಾಣಿಯಾಗಿ ಸಿಕ್ಕಿದ ಪ್ರತಿ ಒಬ್ಬ ಪುರುಷನನ್ನು ಯೋವಾಬನು ಸಂಹರಿಸಿದನು. ಹೀಗೆ ಆ ದೇಶದ ರಾಜಕುಟುಂಬಕ್ಕೆ ಸೇರಿದವರೆಲ್ಲರೂ ನಾಶವಾದರು. ಆದರೆ ಒಬ್ಬ ಯೌವನಸ್ಥನು ಮಾತ್ರ ತಪ್ಪಿಸಿಕೊಂಡು ಈಜಿಪ್ಟಿಗೆ ಓಡಿ ಹೋದನು. ಈ ಪ್ರಕಾರ ನಿರ್ಗತಿಕರಾದ ಈ ದೇಶದವರು ಸೋತೆವೆಂದು ಒಪ್ಪಿಕೊಂಡು ಅದಕ್ಕೆ ಗುರುತಾಗಿ ದಾವೀದನ ಕಡೆಯ ಪ್ರತಿನಿಧಿಗಳನ್ನು ತಮ್ಮ ಮುಖ್ಯ ಪಟ್ಟಣಗಳಲ್ಲಿ ಇರಿಸಿಕೊಳ್ಳುವದಕ್ಕೆ ಸಮ್ಮತಿಸಿದರು.

### ರಬ್ಬಾ ಪಟ್ಟಣಕ್ಕೆ ಮುತ್ತಿಗೆ ಹಾಕಿ ಹಿಡಿದದ್ದು.

[ii ಸಮು. xi. i; xii. 26—31; i ದಿನಚರ್ಯ. xx. 1—3.]

ಇಷ್ಟು ವರೆಗೂ ಅಮ್ಮೋನಿಯರು ಮಾತ್ರ ಯಾರಿಂದಲಾದರೂ ತೊಂದರೆಯನ್ನು ಅನುಭವಿಸದೆ ನೆಮ್ಮದಿಯಾಗಿ ಇದ್ದಹಾಗೆ ತೋರುತ್ತೆ. ಆದರೆ ಮಾರಣೆ ವರ್ಷದ ಯುದ್ಧಕಾಲವು ಬಂದಾಗ ದಾವೀದನ ಸೈನ್ಯದವರು ದೇವರ ಪೆಟ್ಟಿಗೆಯನ್ನು ಹೊತ್ತುಕೊಂಡು ಇವರ ದೇಶದೊಳಗೆ ಗುಂಪು ಗುಂಪುಗಳಾಗಿ ನುಗ್ಗಿ ದೇಶವನ್ನೆಲ್ಲಾ ಹಾಳುಮಾಡಿದರು. ಆ ದೇಶದ ನಿವಾಸಿಗಳೆಲ್ಲರು ತಮ್ಮ ಮುಖ್ಯ ಪಟ್ಣವಾದ ರಬ್ಬದ ಕೋಟೆಯೊಳಗೆ ಸೇರಿಕೊಂಡರು. ಈ ಪಟ್ಟಣದ ಒಂದು ಭಾಗವು ಹೊಳೆಯ ಹತ್ತರವಿದ್ದದರಿಂದ "ನೀರಿನ ಪಟ್ಣ" ವೆಂದು ಹೆಸರಾಗಿತ್ತು. ಮತ್ತೊಂದು ಭಾಗವು ಹೊಳೆಗೆ ದೂರವಾಗಿ ಉನ್ನತ ಪ್ರದೇಶದ ಮೇಲೆ ಕಟ್ಟಲ್ಪಟ್ಟು ಸುತ್ತಲೂ ಕೋಟೆಯಿಂದ ಭದ್ರ ಮಾಡಲ್ಪಟ್ಟಿತ್ತು. ಈ ಮುತ್ತಿಗೆಯು ಎಷ್ಟು ದಿನದವರಿವಿಗೆ ಜರುಗಿತೋ ಗೊತ್ತಿಲ್ಲ. ಆದರೆ ಯೋವಾಬನು ಕಡೆಗೆ ಬಲು ಸಾಹಸಮಾಡಿ ಕೆಳಭಾಗದ ನೀರಿನ ಪಟ್ಣವನ್ನು ಸ್ವಾಧೀನಪಡಿಸಿಕೊಂಡನು. ಆ ಕ್ಷಣವೇ ಅಮ್ಮೋನಿಯರ ದಂಡು ಕೋಟೆಯೊಳಗೆ ಸೇರಿಕೊಂಡಿತು. ಕೋಟೆಗೆ ಸಮೀಪದಲ್ಲಿ ನೀರಿಲ್ಲದಿದ್ದದರಿಂದ ಈ ಕೋಟೆಯನ್ನು ಬಹು ಸುಲಭವಾಗಿ ಹಿಡಿಯ ಬಹುದಾಗಿತ್ತು. ಆದಕಾರಣ ಯೋವಾಬನು ದಾವೀದ ರಾಜನೇ ಬಂದು ಪಟ್ಣವನ್ನು ಹಿಡಿಯುವ ಕಾರ್ಯವನ್ನು ಪೂರೈಸಿ ವಿಜಯದ ಮಹಿಮೆಯನ್ನು ತಾನೇ ಹೊಂದುವ ಹಾಗೆ ಅರಸನನ್ನು ಬೇಡಿಕೊಂಡನು. ಅದೇ ಪ್ರಕಾರ ದಾವೀದನು ಬಂದ ಮೇಲೆ ಮೇಗಣ ಪಟ್ಣವನ್ನೂ ವಶಮಾಡಿಕೊಂಡು ಆ ಪಟ್ಟಣದೊಳಗಣ ದ್ರವ್ಯವನ್ನೆಲ್ಲಾ ಕೊಳ್ಳೆ ಹೊಡೆದನು. ಆ ಅಮ್ಮೋನಿಯರ ಅರಸನ ಕಿರೀಟವು ಒಂದು ತಲಾಂತು ತೂಕವಾಗಿತ್ತು. ರತ್ನ ಖಚಿತವಾದ ಈ ಚಿನ್ನದ ಕಿರೀಟವನ್ನು ಇಸ್ರಾಯೇಲರು ದಾವೀದನ ತಲೆಯ ಮೇಲೆ ಇರಿಸಿದರು. ಸೆರೆ ಸಿಕ್ಕಿದವರೋ ಅನೇಕ ಮಂದಿಯಾಗಿದ್ದರು. ಅವರನ್ನು ನಡಿಸಿದ ವಿಧವೋ ದಾವೀದನು ಜಯವೀರನಾಗಿ ನಡಸಿದ್ದ ಸಕಲ ಕ್ರೂರಕೃತ್ಯಗಳಿಗಿಂತ ಅತಿಕ್ರೂರ ಕೃತ್ಯವಾಗಿತ್ತು. ಅದನ್ನು ವಿವರಿಸುವದಕ್ಕೆ ಮನಸ್ಸು ಒಡಂಬಡುವದಿಲ್ಲ. ಅಮ್ಮೋನಿಯರು ಸಹಿಸ ಕೂಡದಷ್ಟು ದೂಷಣೆ ಮಾಡಿದ ಕಾರಣದಿಂದಲೇ ಇಸ್ರಾಯೇಲರಿಗೆ ಬಹು ಕೋಪ ಬಂತು. ಆದದರಿಂದ ಅವರನ್ನು ಇಷ್ಟು ಕ್ರೂರವಾಗಿ ನಡಸಿದರೆಂದು ಹೇಳ ಬಹುದು. ಇದಲ್ಲದೆ ಇಸ್ರಾಯೇಲರ ಮೇಲೆ ಯುದ್ಧ ಮಾಡುವ ಹಾಗೆ ಈ ಅಮ್ಮೋನಿಯರು ಇತರ ಜನಾಂಗದವರನ್ನೂ ಪ್ರೇರೇಪಿಸಿದ್ದು ಅತಿಕೋಪಕ್ಕೆ ಕಾರಣವಾಗಿತ್ತು. ಹೀಗಿದ್ದರೂ ಕೂಡ ದಾವೀದನು ಇಷ್ಟು ಕ್ರೂರನಾಗಿ ನಡೆಯುವದಕ್ಕೆ ತಕ್ಕ ಕಾರಣವಿರಲಿಲ್ಲ. ಇದರಲ್ಲಿ ಅಧಿಕ ಪರಿತಾಪಕ್ಕೆ ಕಾರಣವಾದ ವಿಷಯವೇನಂದರೆ — ಇಸ್ರಾಯೇಲರ ಕೋಪಕ್ಕೆ ಸಾಧಾರಣ ಜನಗಳು ಗುರಿಯಾದರೇ ವಿನಾ, ಯುದ್ಧಕ್ಕೆ ಕಾರಣರಾದ ಅಧಿಕಾರಿಗಳಿಗೆ ಕಷ್ಟವೇನೂ ಇರಲಿಲ್ಲ. "ದಾವೀದನು ಅವರನ್ನು ಗರಗಸಗಳಿಂದ ಕೊಯಿಸಿ, ಕುಂಟೆ ಅಲುಗುಗಳಿಂದ ತಿವಿಸಿ, ಕೊಡ್ಲಿಗಳಿಂದ ಕಡಿಸಿ, ಇಟ್ಟಿಗೆ ಭಟ್ಟಿಯೊಳಗೆ ಹಾಕಿ ಸುಡಿಸಿದನು. ಅಮ್ಮೋನಿಯರ ಪಟ್ಣಗಳಲ್ಲಿ ಸಿಕ್ಕಿದ ಜನರನ್ನೆಲ್ಲಾ ಹೀಗೆಯೇ ನಾಶಮಾಡಿದನು."



### ದಾವೀದನೂ, ಮೆಫಿಬೋಷೆತನೂ.

[ii ಸಮುವೇಲನು ix.]

ದಾವೀದನು ಯೋನತಾನನಿಗೆ ಪ್ರತಿಜ್ಞಾಪೂರ್ವಕವಾಗಿ ಮಾಡಿದ ಸ್ನೇಹಧರ್ಮದ ವಾಗ್ದತ್ತವನ್ನು ನೆರವೇರಿಸುವದಕ್ಕೆ ಈಗ ಆಕ್ಷೇಪಣೆಯೇನೂ ಇರಲಿಲ್ಲ. ಆತನು ಯೆರೂಸಲೇಮಿನಲ್ಲಿ ಸಮಾಧಾನವಾಗಿ ಸ್ಥಿರಪಟ್ಟ ಮೇಲೆ ಸೌಲನ ಮನೆಯ ಉಗ್ರಾಣಿಕನಾಗಿದ್ದ ವೃದ್ಧನಾದ ಚೀಬನೆಂಬವನನ್ನು ಕಂಡು ಹಿಡಿದು ಯೋನತಾನನ ವಂಶದವರಾಗಲಿ ಆತನ ಸಮೀಪ ಬಂಧುಗಳಾಗಲಿ ಯಾರಾದರೂ ಇನ್ನು ಜೀವದಿಂದಿದ್ದಾರೋ ಎಂದು ವಿಚಾರಿಸಿದನು. ಚೀಬನು ಪ್ರತ್ಯುತ್ತರವಾಗಿ ಯೋನತಾನನ ಮರಣಕಾಲದಲ್ಲಿ ಕುಂಟನಾದ ಮೆಫಿಬೋಷೆತನೆಂಬುವ ಅವನ ಮಗನು ಯೋರ್ದನಿಗೆ ಆಚೆ ಲೋದಿಬಾರಿನಲ್ಲಿ ಮಾಖೀರನ ಮನೆಯೊಳಗೆ ವಾಸಿಸುತ್ತಾನೆಂದು ಹೇಳಿದನು. ದಾವೀದನು ಅವನನ್ನು ಆ ಕ್ಷಣವೇ ಕರೇಕಳುಹಿಸಿ ಸೌಲನ ಭೂಸ್ವತ್ತನ್ನೂ ಕುಟುಂಬದ ಆಸ್ತಿಯನ್ನೂ ಅವನಿಗೆ ಕೊಟ್ಟು ಅವುಗಳ ಮೇಲೆ ಚೀಬನನ್ನು ಪಾರುಪತ್ಯ

Digitized by ROJA MUTHIAH RESEARCH LIBRARY

ಗಾರನಾಗ ನೇಮಿಸಿದನು. ಮತ್ತು ದಾವೀದನು ತನ್ನ ಮನೆಯೊಳಗೆ ಮೆಫಿಬೊಷೆತನು ಯಾವಾಗಲೂ ವರ್ಣ್ಭಾಶನ ಹೊಂದುವವನ ಹಾಗೆ ಭೋಜನಮಾಡ ಬೇಕೆಂದು ಅಪ್ಪಣೆಕೊಟ್ಟನು. ಆಗಿನಿಂದ ಮೆಫಿಬೊಷೆತನು ಯೆರೂಸಲೇಮಿನಲ್ಲಿಯೇ ವಾಸಮಾಡಿದನು. ಮತ್ತು ತನ್ನ ಜೀವಕಾಲವೆಲ್ಲಾ ದಾವೀದನಿಗೆ ನಂಬಿಗಸ್ಥನಾಗಿಯೂ ವಿಧೇಯನಾಗಿಯೂ ಇದ್ದನು.

## ದಾವೀದನು ಮಾಡಿದ ಮಹಾ ಪಾಪ.

[ii ಸಮುವೇಲನು xi. 2—27.]

ಈ ವೃತ್ತಾಂತವು ಇಷ್ಟು ವಿವರವಾಗಿ ಬರೆಯಲ್ಪಟ್ಟಿರುವದನ್ನು ನೋಡುವಲ್ಲಿ ಸತ್ಯವೇದದ ಈ ಚರಿತ್ರ ಪುಸ್ತಕಗಳು ಕೇವಲ ಚರಿತ್ರ ಪುಸ್ತಕಗಳೇ ಅಲ್ಲವೆಂಬುವದು ಸ್ಪಷ್ಟವಾಗಿ ತಿಳಿಯ ಬರುತ್ತೆ. ಪ್ರವಾದಿಯಾಗಿದ್ದ ಈ ಚರಿತ್ರಕಾರನು ದಾವೀದನು ಮಾಡಿದ ಯುದ್ಧಗಳನ್ನು ಮತ್ತು ಆತನ ಸಾಮ್ರಾಜ್ಯದ ವೈಭವವನ್ನೂ ಕುರಿತು ಬಹು ಸಂಕ್ಷೇಪವಾಗಿ ಸೂಚಿಸಿ ಆತನ ಗುಣನಡತೆಗಳ ವಿಷಯ ಮಾತ್ರ ಬಹಳ ವಿಸ್ತಾರವಾಗಿ ಬರೆದಿದ್ದಾನೆ. ಈ ಚರಿತ್ರೆಯನ್ನು ಬರೆಯುವದರಲ್ಲಿ ದೇವರ ರಾಜ್ಯಾಭಿವೃದ್ಧಿಯೇ ಆತನ ಮುಖ್ಯೋದ್ದೇಶವಾಗಿತ್ತೆಂಬುದು ಇದರಿಂದ ಬಹು ಚೆನ್ನಾಗಿ ತಿಳಿಯುತ್ತೆ. ಒಬ್ಬ ಅರಸನಿಗೆ ಅನೇಕ ಮಂದಿ ಹೆಂಡರು ಇರುವದು ಅರಸನಾದವನ ವೈಭವಕ್ಕೆ ಅವಶ್ಯವಾದದ್ದೆಂಬುವದು ಪೂರ್ವಿಕರ ಅಭಿಪ್ರಾಯವಾಗಿತ್ತು. ಇಸ್ರಾಯೇಲರ ಮತಾಚಾರದಲ್ಲಿ ಬಹುಪತ್ನಿತ್ವವು ಅಧರ್ಮವೆಂದು ಭಾವಿಸಲ್ಪಟ್ಟಿದ್ದರೂ, ಅಂಥ ಅಧರ್ಮಪ್ರವರ್ತಕರ ವಿಷಯದಲ್ಲಿ ಅಷ್ಟು ಕಠಿಣವಾಗಿ ವಿಚಾರ ಮಾಡುತ್ತಿರಲಿಲ್ಲ. ಆದರೆ ವ್ಯಭಿಚಾರವನ್ನಾದರೋ ಬಹಳ ಅಸಹ್ಯವಾಗಿ ಕಾಣುತ್ತಿದ್ದರು. ಇಸ್ರಾಯೇಲಿನ ಜನಾಂಗದ ಚರಿತ್ರಕಾರನು ದಾವೀದನ ಈ ಪಾಪವನ್ನು ಮರೆಮಾಜಲೆತ್ನಿಸುವದಿಲ್ಲ. ಈತನು ಈ ವೃತ್ತಾಂತವನ್ನು ಬರೆದುದನ್ನೂ ಕಡೆಯಲ್ಲಿ ದಾವೀದನು ಬಹಳವಾಗಿ ಪಶ್ಚಾತ್ತಾಪ ಪಟ್ಟದ್ದನ್ನೂ ನಿಧಾನಿಸಿ ನೋಡಿದರೆ ದೇವರು ಜನಾಂಗದ ಮನಸ್ಸಾಕ್ಷಿಯನ್ನು ಉತ್ತೇಜನ ಪಡಿಸಿದ ವಿಧವು ಸ್ಫುಟವಾಗುತ್ತೆ. ದೇವರಿಂದ ಪ್ರೇರೇಪಿಸಲ್ಪಡದ ಚರಿತ್ರಕಾರರು ಚರಿತ್ರೆಯಲ್ಲಿ ಇಂಥಾ ಕಾರ್ಯವನ್ನು ಬರೆಯುವದು ಮಾನಹೀನವಾದದ್ದೆಂದೆಣಿಸಿ ಬರೆಯದೆ ಬಿಡುವರು. ಆದರೆ ಇಂಥಾ ದೈವಪ್ರೇರಿತವಾದ ಚರಿತ್ರೆಯಲ್ಲಿ ಇದು ವಿಶೇಷಾಂಶವಾಗಿತ್ತು. ಇಸ್ರಾಯೇಲರು ಇಂಥಾ ದೈವಪ್ರೇರಿತ ಚರಿತ್ರೆಯನ್ನೇ ಓದುವದಕ್ಕೂ ಅದನ್ನು ಶಾಶ್ವತ ಪಡಿಸುವದಕ್ಕೂ ಅಪೇಕ್ಷಿಸಿದರು.

ದಾವೀದನು ಅರಾಮ್ಯರ ಮೇಲೆ ದೊಡ್ಡ ಜಯವನ್ನು ಹೊಂದಿದನಂತರ ರಬ್ಬಾ ಪಟ್ಟಣದ ಮುತ್ತಿಗೆಯ ಕಾಲದಲ್ಲಿಯೇ ದಾವೀದನು ಇಂಥಾ ಘೋರವಾದ ಪಾಪದಲ್ಲಿ ಬಿದ್ದನು. ದಾವೀದನ ಅತಿಬಲರಲ್ಲೊಬ್ಬನಾದ ಹಿತ್ತಿಯನಾದ ಉರೀಯನು ಯುದ್ಧರಂಗದಲ್ಲಿರುವಾಗ ಅರಸನು ಅವನ ಹೆಂಡತಿಯಾದ ಬತ್ಶೇಬಳನ್ನು ಅರಮನೆಗೆ ಕರೆಯಿಸಿಕೊಂಡು ಅವಳಲ್ಲಿ ಪಾಪವನ್ನು ಮಾಡಿದನು. ಹೀಗೆ ಮಾಡಿದ್ದು ದೊಡ್ಡ ತಪ್ಪೆಂದು ದಾವೀದನಿಗೆ ತಿಳಿದಾಗ್ಯೂ ಅದ



ರಿಂದುಂಟಾಗುವ ದುಃಖಪರಂಪರೆಗೆ ತಾನು ಸಿಕ್ಕದ ಹಾಗೆ ಏನೇನೋ ಉಪಾಯಗಳನ್ನು ಮಾಡಿದನು. ಕಟ್ಟಕಡೆಗೆ ಬೇರೆ ಯಾವ ಮಾರ್ಗವೂ ತೋರದಿರಲು ತನಗೇ ವಿರೋಧವಾಗಿ ಸೌಲನು ಮಾಡಿದ್ದಂಥ ನೀಚವಾದ ಒಂದು ಕುಯುಕ್ತಿಯನ್ನು ದಾವೀದನು ಉರೀಯನಿಗೆ ಮಾಡಿದನು. ಉರೀಯನನ್ನು ಯುದ್ಧರಂಗದಿಂದ ಕರೇಕಳುಹಿಸಿ ಸನ್ಮಾನಿಸಿ ಹಿಂತಿರುಗಿ ಹೋಗುವಾಗ ಯೋವಾಬನಿಗೆ ಒಂದು ಕಾಗದವನ್ನು ಬರೆದು ಕಳುಹಿಸಿದನು. ಆ ಕಾಗದದಲ್ಲಿ ಇವನನ್ನು ಅಪಾಯ ಸ್ಥಳದಲ್ಲಿ ನಿಲ್ಲಿಸಿ ಅಲ್ಲಿಯೇ ಅವನನ್ನು ಸಂಹಾರಕ್ಕೆ ಗುರಿಮಾಡ ಬೇಕೆಂದು ಬರೆದಿದ್ದನು. ಆದಕಾರಣ ಯೋವಾಬನು ಉರೀಯನನ್ನು ಕೋಟೇ ಗೋಡೆಯ ಅಡಿಯಲ್ಲಿ ಯಾವದೋ ಒಂದು ಕಾರ್ಯಕ್ಕಾಗಿ ಕಳುಹಲು, ಆ ಗೋಡೆಯ ಮೇಲಿನಿಂದ ಒಬ್ಬನು ದೊಡ್ಡ ಕಲ್ಲು ಉರುಳಿಸಲು, ಇದು ಉರೀಯನ ಮೇಲೆ ಬಿದ್ದು ಅವನನ್ನು ಕೊಂದಿತು. ಇವನ ಮರಣದ ಸುದ್ದಿಯನ್ನು ಕೇಳಿದಾಕ್ಷಣವೇ ದಾವೀದನು ಬತ್ಶೇಬಳನ್ನು ಸಮ್ಮತಿಪಡಿಸಿ, ಅವಳನ್ನು ಮದುವೆ ಮಾಡಿಕೊಂಡನು.

## ನಾತಾನನ ವಾಗ್ದಂಡನೆಯೂ ದಾವೀದನ ಪಶ್ಚಾತ್ತಾಪವೂ.

[ii ಸಮುವೇಲನು xii.]

ಇಂಥಾ ಕ್ರೂರಕೃತ್ಯಗಳನ್ನು ಆ ಕಾಲದ ಅರಸರು ಸರ್ವಸಾಧಾರಣವಾಗಿ ಮಾಡುತ್ತಿದ್ದುದರಿಂದ ದಾವೀದನ ಈ ಕೃತ್ಯವು ಯಾರ ಲಕ್ಷ್ಯಕ್ಕೂ ಬಾರದೆ ಹೋಯಿತು. ಆದರೆ ಬಲವುಳ್ಳ ಅರಸನಾಗಿಯೂ ಎಲ್ಲರ ಹೊಗಳಿಕೆಯನ್ನು ಸಂಪಾದಿಸಿದವನಾಗಿಯೂ ಇದ್ದ ದಾವೀದನನ್ನೇ ಜನರು ಸುಮ್ಮನೆ ಬಿಡಲಿಲ್ಲ. ಇದರಲ್ಲಿ ಇಸ್ರಾಯೇಲರ ಘನತೆಯು ಕಾಣಬರುತ್ತೆ. ಅರಸನು ಏನೂ ಕಾಣದವನ ಹಾಗೆ ಸುಮ್ಮನೆ ಇದ್ದನು. ಹೀಗೆ ದಾವೀದನಲ್ಲಿ ಆ ಪಾಪವನ್ನು ದಂಡಿಸದೆ ಬಚ್ಚಿಡುವದು ಜನಾಂಗದಲ್ಲಿ ಕುಷ್ಠರೋಗವು ಹುಟ್ಟಿ ವ್ಯಾಪಿಸುವ ಹಾಗೆ ಮಾಡುವಂತಿರುವದೆಂದು ಪ್ರವಾದಿಯಾದ ನಾತಾನನು ದೇವರಿಂದ ಬೋಧಿಸಲ್ಪಟ್ಟವನಾಗಿ ಅರಿತನು. ಅರಸನೂ ಆತನ ಜನರೂ ಇಂಥಾ ಘೋರ ಸ್ಥಿತಿಗೆ ತಪ್ಪಿಸಿಕೊಳ್ಳ ಬೇಕಾದರೆ ದಾವೀದನು ತನ್ನ ಪಾಪವನ್ನು ಒಪ್ಪಿಕೊಂಡು ಪಶ್ಚಾತ್ತಾಪ ಪಡುವದು ಅವಶ್ಯವಾಗಿತ್ತು. ಮೊದಲು ದಾವೀದನು ತನ್ನ ದುಷ್ಕೃತ್ಯವನ್ನು ತಾನೇ ಖಂಡಿಸಿಕೊಳ್ಳುವ ತೆರನಾಗಿ ನಾತಾನನು ಒಂದು ಸಾಮ್ಯವನ್ನು ಹೇಳಿದನು. ಹ್ಯಾಗಂದರೆ—ಒಬ್ಬ ಐಶ್ವರ್ಯವಂತನು ತನಗುಂಟಾಗಿರುವ ಸಮಸ್ತ ಸಂಭ್ರಮಗಳಲ್ಲಿ ತೃಪ್ತನಾಗದೆ ಬಡವನಾದ ತನ್ನ ನೆರೆಯವನಿಗಿದ್ದ ಒಂದೇ ಒಂದು ವಿಶೇಷ ವಸ್ತುವನ್ನು ಕದ್ದು ಕೊಂಡನೆಂದು ತಿಳಿಸಿದನು. ಅನಂತರ ಪ್ರವಾದಿಯು ದಾವೀದನ ಬಾಯಿಂದ ಹೊರಡಿಸಿದ ನ್ಯಾಯದಂತೆ ಮರಣದಂಡನೆಯನ್ನನುಭವಿಸತಕ್ಕ ಸ್ವಾರ್ಥಾಪೇಕ್ಷೆಯುಳ್ಳ ಐಶ್ವರ್ಯವಂತನು ದಾವೀದನೇ ಎಂಬುದನ್ನು ಆತನಿಗೆ ತಿಳಿಸಿದನು. ದಾವೀದನು ದೇವರಿಂದ ಪಡೆದ ನಾನಾವಿಧವಾದ ಸುಖ ಸಂಪತ್ತುಗಳನ್ನು ಒಂದೊಂದಾಗಿ ತಿಳಿಸಿ ದಾವೀದನು ದೇವರಲ್ಲಿ ಮಹಾ ಕೃತಘ್ನನಾಗಿದ್ದಾನೆಂಬುವದನ್ನು ನಿರ್ಧರಿಸಿದನು. ಈ ಕೃತ್ಯವನ್ನು

Digitized by ROJA MUTHIAH RESEARCH LIBRARY

ಕಪಟಭಾವದಿಂದ ಮರೆಮಾಡಿಕೊಂಡಿದ್ದದ್ದು ಆಗಲೇ ದಾವೀದನಿಗೆ ಮಹಾ ಹೇಯವಾಗಿ ತೋರುತಿತ್ತು. ಆದಕಾರಣ ಆತನು ಸಂತಪ್ತ ಚಿತ್ತನಾಗಿ ಪ್ರವಾದಿಗೆ ತನ್ನ ದುಷ್ಕೃತ್ಯವನ್ನು ಅರಿಕೆಮಾಡಿದನು. ಆಗ ನಾತಾನನು ದಾವೀದನಿಗೆ—ನೀನು ಪಶ್ಚಾತ್ತಾಪ ಪಟ್ಟರೆ ದೇವರಿಂದ ಪಾಪ ಮನ್ನಣೆ ಹೊಂದುವಿಯೆಂದು ಹೇಳಿದ್ದಲ್ಲದೆ "ನೀನು ದೇವರನ್ನು ಬಹಳ ದೂಷಿಸಿರುವದರಿಂದ" ನಿನ್ನ ಪಾಪದ ನಿಮಿತ್ತ್ಯ ಯಾವದಾದರೊಂದು ದಂಡನೆಯನ್ನು ಹೊಂದುವಿ ಎಂದು ತಿಳಿಯ ಮಾಡಿದನು. ಆದಕಾರಣ ದಾವೀದನ ಪಾಪದ ನಿಮಿತ್ತ ಆತನ ಕೂಸು ಸಾಯಬೇಕು, ಕತ್ತಿಯು ಅವನ ಮನೆಯನ್ನು ಬಿಟ್ಟು ತೊಲಗದು, ಆತನು ಉರೀಯನ ವಿಷಯದಲ್ಲಿ ಎಂಥಾ ನೀಚಕೃತ್ಯವನ್ನು ಮಾಡಿದನೋ ಅಂಥಾದ್ದೇ ತನಗೂ ಸಂಭವಿಸುವದು ಎಂಬದಾಗಿ ಹೇಳಿದನು. ಇದನ್ನೆಲ್ಲಾ ಕೇಳಿದ ದಾವೀದನ ಪಶ್ಚಾತ್ತಾಪವು ಯಥಾರ್ಥವಾದದಾಗಿತ್ತು. ಆದರೆ ಆತನ ಪಾಪವು ಆತನನ್ನು ವ್ಯಸನಾಕ್ರಾಂತನನ್ನಾಗಿಯೂ ತಗ್ಗಿಸಲ್ಪಟ್ಟವನನ್ನಾಗಿಯೂ ಮಾಡಿತು. ಈ ವೃತ್ತಾಂತದಲ್ಲಿ ಧೈರ್ಯಗೆಡದೆ ಸತ್ಯವನ್ನಾಡಿದ ಪ್ರವಾದಿಯನ್ನು ಮೆಚ್ಚಬೇಕೋ, ಕೇವಲ ದೈನ್ಯದಿಂದ ಪಶ್ಚಾತ್ತಾಪ ಪಟ್ಟು ದೇವರ ಚಿತ್ತಕ್ಕೆ ತನ್ನನ್ನೊಪ್ಪಿಸಿಕೊಟ್ಟ ದಾವೀದರಾಜನನ್ನು ಮೆಚ್ಚಬೇಕೋ ನಿಶ್ಚಯಿಸಲಶಕ್ಯವು. ಸೌಲನು ತನ್ನ ಅಂತ್ಯದಿನಗಳಲ್ಲಿ ದೇವರ ಮೇಲೆ ಇಟ್ಟ ಭರವಸವನ್ನು ಕಳೆದುಕೊಂಡು ನಿರಾಶೆಗೆ ಸಿಕ್ಕಿ ನಾಶವಾದನೆಂದು ತಿಳಿಸಿದೆವಷ್ಟೆ. ಆದರೆ ದಾವೀದನು ಪಶ್ಚಾತ್ತಾಪ ಪಟ್ಟದ್ದರಿಂದ ಅಂಥಾ ಗತಿಗೆ ತಪ್ಪಿಸಿಕೊಂಡನು.

### ಮಗುವಿನ ಮರಣ.

[ii ಸಮು. xii. 15—23.]

ದಾವೀದನು ತನ್ನ ಚಿಕ್ಕ ಕೂಸು ಅಸ್ವಸ್ಥವಾದದರಿಂದ ದೇವರಿಂದ ತನಗೆ ಬರುವದಕ್ಕಿದ್ದ ಶಿಕ್ಷೆಯು ಪ್ರಾರಂಭವಾಯಿತೆಂದು ಆ ಕ್ಷಣವೇ ತಿಳುಕೊಂಡನು ಆತನು ಯಾವ ವಿಧವಾದ ಭೋಜನವನ್ನೂ ಮುಟ್ಟದೆ, ರಾತ್ರಿಯೆಲ್ಲಾ ನೆಲದ ಮೇಲೆ ಬಿದ್ದು ದೇವರನ್ನು ಪ್ರಾರ್ಥಿಸಿದನು. ಆತನ ಸಮೀಪಬಂಧುಗಳು ಬಂದು ಆತನನ್ನು ಆದರಿಸಿದಾಗ್ಯೂ ಆದರಣೆ ಹೊಂದಲೊಲ್ಲದೆ ಇದ್ದನು. ಹೀಗೆ ಆರು ದಿನಗಳ ಪರ್ಯಂತರ ನಡೆದ ಮೇಲೆ ಏಳನೇ ದಿನ ಕೂಸು ಸತ್ತಿತು. ದಾವೀದನ ಸೇವಕರು ಮಗುವಿನ ಮರಣದ ಸುದ್ದಿಯನ್ನು ಆತನಿಗೆ ತಿಳಿಸುವದಕ್ಕೆ ಭಯಪಟ್ಟರು. ಯಾಕಂದರೆ ಅರಸನು ಮತ್ತಷ್ಟು ಚಿಂತಾಕ್ರಾಂತನಾಗುವನೆಂದು ನೆನಸಿದರು. ಆದರೆ ಅರಸನು ಅವರು ಭಯಪಡುತ್ತಿರುವದನ್ನು ತಿಳಿದು, ಕೂಸು ಸತ್ತಿತೋ ಎಂದು ಅವರನ್ನು ಕೇಳಿದನು. ಅವರು ಹೌದು ಎಂದರು. ಆಗ ದಾವೀದನು ಇಮ್ಮಡಿಯಾಗಿ ವ್ಯಸನಪಡುವದಕ್ಕೆ ಬದಲಾಗಿ ಎಲ್ಲರಿಗೆ ಸೋಜಿಗವಾಗುವ ಹಾಗೆ ವ್ಯಸನಸೂಚಕವಾದ ನಡವಳಿಕೆಯನ್ನು ಬಿಟ್ಟು ದೇವರನ್ನು ಸ್ತುತಿಸಿ ಊಟ ಮಾಡಿದನು. ಅವರು ದಾವೀದನ ಈ ವಿಪರೀತವಾದ ನಡತೆಗೆ ಕಾರಣವೇನೆಂದು ಕೇಳಿದಾಗ, ಕೂಸಿನ ಪ್ರಾಣವನ್ನು ದಕ್ಕಿಸಿಕೊಳ್ಳುವದಕ್ಕೆ ಪ್ರಾರ್ಥಿಸಿ ಗೋಳಾಡಿದೆನು, ಈಗ ನಿಷ್ಪ್ರಯೋಜನವಾದದರಿಂದ ನಾನು ದೇವರ ಚಿತ್ತಕ್ಕೆ



ಒಳಪಡಬೇಕು, ನನ್ನ ಮಗುವು ಇರುವಲ್ಲಿಗೆ ಒಂದು ದಿನ ನಾನು ಹೋಗಬೇಕೇ ಹೊರತು ಮಗುವು ನನ್ನ ಬಳಿಗೆ ತಿರುಗಿ ಬರುವದಿಲ್ಲ ಎಂದು ಅವರಿಗೆ ಪ್ರತ್ಯುತ್ತರವಾಗಿ ಹೇಳಿದನು.

### ಸೊಲೋಮೋನನ ಜನನವು.

[ii ಸಮು. xii. 24, 25.]

ತರುವಾಯ ಬತ್ಷೇಬಳು ದಾವೀದನಿಗೆ ಪ್ರಿಯನೂ ಆತನ ಬಳಿಕ ಅರಸನಾಗುವವನೂ ಆಗಿದ್ದ ಸೊಲೋಮೋನನನ್ನು ಪಡೆದಳು. (ಹೀಬ್ರು ಭಾಷೆಯಲ್ಲಿ ಶಿಲೊಮೋಹ್ ಎಂದರೆ "ಸಮಾಧಾನ"). ಅವನ ಈ ಹೆಸರಿನ ಅರ್ಥಕ್ಕೆ ಸರಿಯಾಗಿ ಇಸ್ರಾಯೇಲರ ರಾಜ್ಯಕ್ಕೆ ನೆರೆಹೊರೆಯ ರಾಜ್ಯಗಳ ಸಂಗಡ ಯುದ್ಧಗಳೇನೂ ಇಲ್ಲದೆ ಸಮಾಧಾನವಾಗಿತ್ತು. ಅಂಥ ಕಾಲದಲ್ಲಿ ಹುಟ್ಟಿದವನಾದ ಕಾರಣ ಈ ಹೆಸರು ಅವನಿಗೆ ಬಂದಿತೆಂದು ಊಹಿಸ ಬಹುದು. ಸೊಲೋಮೋನನು ಚಿಕ್ಕಂದಿನಿಂದ ಪ್ರವಾದಿಯಾದ ನಾತಾನನ ವಶಕ್ಕೆ ಒಪ್ಪಿಸಲ್ಪಟ್ಟನು. ಪ್ರವಾದಿಯು ಇವನಿಗೆ ಒಲಿದು ದೇವಪ್ರಿಯನು ಎಂದರ್ಥವುಳ್ಳ ಯೆದೀದ್ಯನೆಂದು ಹೆಸರಿಟ್ಟನು.

### ದಾವೀದನು ದೇವಾಲಯವನ್ನು ಕಟ್ಟುವದಕ್ಕೆ ನಿಶ್ಚಯಿಸಿದ್ದು.

[ii ಸಮು. vii; i ದಿನಚರ್ಯ. xvii.]

ದೊಡ್ಡ ದೊಡ್ಡ ಯುದ್ಧಗಳೆಲ್ಲಾ ಮುಗಿದು ದಾವೀದನು ಸಮಸ್ತ ಇಸ್ರಾಯೇಲರ ಮೇಲೆ ಆಳುತ್ತಾ ಯೂಪ್ರಟೀಸಿನಿಂದ ಸೇಯಿರ್ ಪರ್ವತದ ವರೆಗೂ ಇದ್ದ ಎಲ್ಲಾ ಅರಸರಿಂದ ಕಾಣ್ಕೆ ಕಪ್ಪವನ್ನು ಹೊಂದುತ್ತಾ ಸಮಾಧಾನದಿಂದಿರುವ ಸಮಯದಲ್ಲಿ ತನಗೆ ಅರಮನೆಯನ್ನು ಕಟ್ಟಿಸಿಕೊಂಡಂತೆಯೇ ದೇವರ ಸಮುಖದ ಪೆಟ್ಟಿಗೆಗೋಸ್ಕರವೂ ಒಂದು ದೇವಾಲಯವನ್ನಾದರೂ ಅರಮನೆಯನ್ನಾದರೂ ಕಟ್ಟಿಸಬೇಕೆಂದು ನಿಶ್ಚಯಿಸಿಕೊಂಡನು. ದೇವರ ಪೆಟ್ಟಿಗೆಯು ಗುಡಾರದೊಳಗಿರುವಾಗ ತಾನು ಮಾತ್ರ ದೇವದಾರು ಮರದಿಂದ ಕಟ್ಟಿದ ಮಾಳಿಗೆಯುಳ್ಳ, ದೇವದಾರು ಮರದ ಹಲಿಗೆಗಳು ಹೊದಿಸಿದ ಅರಮನೆಯಲ್ಲಿ ವಾಸಿಸುವದು ನ್ಯಾಯವೋ? ತನ್ನ ಅರಮನೆಯನ್ನು ಕಟ್ಟುವದರಲ್ಲಿಯೂ ಅದನ್ನು ಶೃಂಗರಿಸುವದರಲ್ಲಿಯೂ ಹಣವನ್ನು ವೆಚ್ಚಮಾಡಿ ದೇವಾರಾಧನೆಯ ಸ್ಥಾನಕ್ಕೆ ಮಾತ್ರ ಒಂದು ಕಾಸನ್ನಾದರೂ ವೆಚ್ಚಮಾಡದೆ ಇರುವದು ನ್ಯಾಯವೋ? ತಾನು ಅನೇಕ ರಾಜರಿಂದ ಸುಲುಕೊಂಡ ಅಪರಿಮಿತವಾದ ದ್ರವ್ಯದಲ್ಲಿ ಕೆಲವು ಭಾಗವನ್ನು ದೇವರಿಗಾಗಿ ಪ್ರತಿಷ್ಠೆಮಾಡಿ, ಅವುಗಳಿಂದ ದೇವರ ಪೆಟ್ಟಿಗೆಯ ಗುಡಾರವನ್ನು ಅಲಂಕರಿಸಿದ್ದನು. ಆದರೆ ಶೃಂಗಾರವಾದ ದೇವಾಲಯವನ್ನು ಕಟ್ಟಿಸಿ ದೇವೋಪಾಸನೆಯನ್ನು ನಡಿಸಿದರೆ ಜನರಿಗೆ ಮತ್ತೂ ಮನೋಹರವಾಗಿರಲಾರದೋ? ಅಂಥಾ ಆರಾಧನೆಯು ಘನ ಗಾಂಭೀರ್ಯವುಳ್ಳದ್ದಾಗಿರದೋ? ಮತ್ತು ಆರಾಧಕರಲ್ಲಿ ಕೇವಲ ನಮ್ರಭಾವವನ್ನೂ ಭಕ್ತಿಯನ್ನೂ ಹುಟ್ಟಿಸದೋ? ಎಂದು ಮೊದಲಾಗಿ ದಾವೀದನು

Digitized by ROJA MUTHIAH RESEARCH LIBRARY

ತನ್ನಲ್ಲಿ ಆಲೋಚಿಸಿ ನಾತಾನನಿಗೆ ತಿಳಿಸಲು, ಮೊದಲು ಆತನು ಅದಕ್ಕೆ ಸಮ್ಮತಿಸಿದನು. ಆದರೆ ಆ ರಾತ್ರಿ ದೇವರು ನಾತಾನನಿಗೆ ದರ್ಶನ ಕೊಟ್ಟು ಈ ವಿಷಯದಲ್ಲಿ ಬೇರೆ ಅಭಿಪ್ರಾವನ್ನು ತಿಳಿಸಿದನು. ಇಸ್ರಾಯೇಲರು ಅರಣ್ಯದಲ್ಲಿ ಸಂಚಾರ ಮಾಡುತ್ತಿರುವಾಗ ದೇವರು ತನ್ನ ಸಮುಖದ ಪೆಟ್ಟಿಗೆಗೆ ಶ್ರೇಷ್ಠವಾದ ಯಾವ ದೇವಾಲಯವನ್ನಾದರೂ ಕಟ್ಟಿಸಬೇಕೆಂದು ಅಪೇಕ್ಷಿಸಿರಲಿಲ್ಲ. ಇಸ್ರಾಯೇಲರ ಆತ್ಮಭಾವದ ಭಕ್ತಿಯೇ ಪ್ರಧಾನವಾದುದೆಂದು ಬೋಧಿಸುವಂಥಾದ್ದಾಗಿಯೂ, ವಿಶೇಷ ಡಂಭಾಚಾರಕ್ಕೆ ಅವಕಾಶವಿಲ್ಲದೆಯೂ ಇದ್ದ ಇಸ್ರಾಯೇಲರ ಮತಾಚಾರಕ್ಕೆ ಗುಡಾರವನ್ನೇ ಆರಾಧನಾಸ್ಥಾನವಾಗಿ ಮಾಡಿಕೊಂಡಿದ್ದುದು ತಕ್ಕದ್ದಾಗಿತ್ತು. ಹೊರಗಣ ಡಂಭದಿಂದ ದೇವಾರಾಧನೆಯನ್ನು ನಡಸುವದರಲ್ಲಿ ಲಾಭವೂ ಉಂಟು, ನಷ್ಟವೂ ಉಂಟು. ದಾವೀದನು ದೇವಾರಾಧನೆಗಾಗಿ ಇಷ್ಟು ಶ್ರದ್ಧನಾದುದು ಒಳ್ಳೇದೇ ಸರಿ. ದೇವರ ಸೇವೆ ಮಾಡಬೇಕೆಂದು ಆತನು ಹೃದಯಪೂರ್ವಕವಾಗಿ ಆಶಿಸಿದ್ದರಿಂದ ಭಗವಂತನು ದಾವೀದನಿಗೇ ಒಂದು ಮನೆಯನ್ನು ಕಟ್ಟಿಸಿಕೊಡುವೆನೆಂದು ವಾಗ್ದಾನವನ್ನು ಮಾಡಿದನು. ಮತ್ತು ಇಸ್ರಾಯೇಲಿನ ಸಿಂಹಾಸನವು ಆತನ ವಂಶದವರಿಗೇ ಶಾಶ್ವತವಾಗಿರುವದು. ಆತನ ಮಕ್ಕಳು ದೇವರಿಗೆ ವಿರೋಧವಾಗಿ ಪಾಪ ಮಾಡಿದರೆ ಇತರ ಮನುಷ್ಯರಂತೆಯೇ ದಂಡನೆಗೆ ಗುರಿಯಾಗುವರು. ಇಷ್ಟೇ ಹೊರತು ಸೌಲನಿಂದ ದೇವರು ರಾಜ್ಯವನ್ನು ಕಿತ್ತುಕೊಂಡ ಹಾಗೆ ಇವರಿಂದ ಕಿತ್ತುಕೊಳ್ಳಲಾರನು. ಸಿಂಹಾಸನದಲ್ಲಿ ಕೂತಿರುವ ಈತನ ವಂಶದ ಅರಸರು ಯಾವಾಗಲೂ ದೇವರ ಬಳಿಯಲ್ಲಿದ್ದು ದೇವರಿಗೆ ಕುಮಾರರಾಗಿದ್ದು ಭೂಮಿಯ ಮೇಲೆ ಆತನಿಗೆ ಪ್ರತಿನಿಧಿಗಳಾಗಿರ ಬೇಕೆಂತ ಪ್ರವಾದಿಯ ಮುಖಾಂತರ ದೇವರು ದಾವೀದನಿಗೆ ಹೇಳಿದನು. ದೇವರ ರಾಜ್ಯಾಭಿವೃದ್ಧಿಯು ಇಲ್ಲವೆ ಸತ್ಯಮತಾಭಿವೃದ್ಧಿಯು ದಾವೀದನ ವಂಶದವರಿಂದಲೆ ಆಗಬೇಕು. ಇದರಲ್ಲಿಯೇ ಮೆಸ್ಸೀಯನನ್ನು ಕುರಿತ ಪ್ರವಾದನೆಯು ಕಾಣಬರುತ್ತೆ. ಲೋಕರಕ್ಷಕನು ಬರುವನೆಂಬ ಕೋರಿಕೆಯು ನೆರವೇರುವುದಕ್ಕೆ ಯೂದಾ ಗೋತ್ರವೇ ಆಧಾರನೆಂದು ಯಾಕೋಬನು ಮುಂತಿಳಿಸಿದಂತೆಯೇ ಈಗ ಯೂದಾಗೋತ್ರದೊಳಗೆ ದಾವೀದನ ವಂಶವೊಂದೇ ಆಧಾರವೆಂದು ತಿಳಿಸಲಾಯಿತು. ದಾವೀದನು ದೇವರಿಂದ ಬಂದ ಈ ಶುಭವರ್ತಮಾನವನ್ನು ನಾತಾನನ ಮುಖಾಂತರ ಕೇಳಿ ಪರಿಶುದ್ಧ ಸ್ಥಳಕ್ಕೆ ಹೋಗಿ ಕೂತುಕೊಂಡು ದೇವರಿಗೆ ಹೃದಯಪೂರ್ವಕವಾದ ಕೃತಜ್ಞತಾಸ್ತುತಿಯನ್ನು ಸಲ್ಲಿಸಿದನು. ದೇವರು ಇಸ್ರಾಯೇಲರನ್ನು ಸ್ವಜನವಾಗಿ ಆರಿಸಿ ಕೊಂಡದರಲ್ಲಿಯೂ, ಅವರನ್ನು ಈಜಿಪ್ಟಿನಿಂದ ಬಿಡಿಸಿ ತಂದದರಲ್ಲಿಯೂ ಅವರಿಗುಂಟಾದ ವಿಶೇಷ ಪ್ರಭೆಯನ್ನು ಅನುಗ್ರಹಿಸಿದ್ದಕ್ಕಾಗಿ ದಾವೀದನು ದೇವರನ್ನು ಕೊಂಡಾಡಿದನು. ಇಷ್ಟೇ ಅಲ್ಲ, ತನಗೂ ತನ್ನ ಕುಟುಂಬದವರಿಗೂ ತನ್ನ ಸಂತಾನದವರಿಗೂ ದೇವರು ದಯಪಾಲಿಸಿದ ಎಲ್ಲಾ ವಾಗ್ದತ್ತಗಳ ನಿಮಿತ್ತ ಸ್ತುತಿಸಿದನು. ಶಾಶ್ವತವಾದ ಆ ಪರಮ ಪದದ ವಿಷಯವಾಗಿ ಬಹು ಸ್ವಲ್ಪವೇ ತಿಳಿದಿದ್ದ ಆ ಕಾಲದಲ್ಲಿಯೂ ಜನರು ಇಂಥಾ ಅಮರತ್ವವನ್ನು ತಮ್ಮ ವಂಶಪಾರಂಪರ್ಯವಾಗಿ ದೊರಕಿಸಿಕೊಳ್ಳಬೇಕೆಂದು ಸಾಧಾರಣವಾಗಿ ಆಶಿಸುತ್ತಿದ್ದರು. ಆದದರಿಂದ ಮಕ್ಕಳಿಲ್ಲದವರು ಚಿಂತಾಕ್ರಾಂತರಾಗಿಯೂ ಲಜ್ಜಾಭರಿತರಾಗಿಯೂ ಇರುವದು ಆ ಕಾಲದಲ್ಲಿ ರೂಢಿಯಾಗಿತ್ತು.

# ಆರನೇ ಅಧ್ಯಾಯ.

———:o:———

## ಕ್ಷೀಣದಶೆಯು.

——:o:——

### ದಾವೀದನಿಗುಂಟಾದ ಕ್ಷೀಣದಶೆ.

ಕ್ಷೀಣದಶೆಯೆಂಬಲ್ಲಿ ಅರಸನ ಆಳಿಕೆಯೊಳಗಣ ಪ್ರದೇಶವು ಕಡಿಮೆಯಾಯಿತೆಂಬ ಭಾವವಲ್ಲ. ರಾಜ್ಯದೊಳಗೆ ಭೇದಗಳೂ ಅಸಮಾಧಾನಗಳೂ ಉಂಟಾದುವೆಂಬುದೇ ಭಾವವು. ಇಷ್ಟು ವರೆಗೂ ರಾಜ್ಯದ ಎಲ್ಲಾ ಕಡೆಗಳಲ್ಲಿ ಜಯವೂ ಅಭಿವೃದ್ಧಿಯೂ ಕ್ರಮೇಣ ಹೆಚ್ಚುತ್ತಲೆ ಬಂದು ಈಗ ಉಚ್ಚಸ್ಥಾನವನ್ನು ಮುಟ್ಟಿತ್ತು. ಆದರೆ ದಾವೀದನು ಅದನ್ನು ಕಾಪಾಡಿಕೊಳ್ಳುವುದಕ್ಕೆ ಅಶಕ್ತನಾಗಿದ್ದನು. ಜನರಲ್ಲಿ ನೆಲೆಗೊಂಡಿದ್ದ ಸದ್ಗುಣವನ್ನೂ ಊರ್ಜಿತ ಸ್ಥಿತಿಯನ್ನೂ ಯಾವದೋ ಒಂದು ದುಷ್ಟ ದೈವವು ನೋಡಿ ಅಸೂಯೆಪಟ್ಟು, ಇವರ ಮೇಲೆ ಕ್ರೂರವಾದ ವ್ಯಸನವು ಬರುವಂತೆ ಬಯಸಿದಂತಾಯಿತು. ದಾವೀದನು ಊರೀಯನ ವಿಷಯದಲ್ಲಿ ನಡಸಿದ ದ್ರೋಹವು ಆತನನ್ನು ಆವರಿಸಿಕೊಂಡಿದ್ದಂತೆ ತೋರಿದ ಭಗವತ್ಕೃಪೆಯೆಂಬ ಆವರಣವನ್ನು ತೆಗೆದು ಹಾಕಿತು. ಅಂದಿನಿಂದ ಜನಾಂಗದ ಒಕ್ಕಟ್ಟೂ, ಅದರ ಸಮಾಧಾನವೂ ಎಲ್ಲಾ ಕಾರ್ಯಗಳಲ್ಲಿ ಪ್ರಕಟವಾಗುತ್ತಿದ್ದ ಸಾಹಸವೂ ಅವರಿಗಿದ್ದ ವೃದ್ಧಿ ದೆಶೆಯೂ ನಿರ್ನಾಮವಾದುವು!

### ಅಮ್ನೋನನ ಅಪರಾಧವು.

[ii ಸಮು. xiii.]

ಯೆಜ್ರೀಲಿನವಳಾದ ಅಹಿನೋವಾಮಳಿಂದ ತನಗೆ ಹುಟ್ಟಿದ ಚೊಚ್ಚಲ ಮಗನಾದ ಅಮ್ನೋನನಲ್ಲಿ ತನ್ನ ದುರ್ಗುಣವು ಕಾಣಬಂದದನ್ನು ದಾವೀದನು ನೋಡಿ, ಬಹಳ ಹೃತ್ತಾಪಪಟ್ಟನೆಂಬುದಕ್ಕೆ ಸಂಶಯವಿಲ್ಲ. ದಾವೀದನು ಅವನಿಗೆ ನಂಬಿಗಸ್ಥನೆಂದರ್ಥವುಳ್ಳ "ಅಮ್ನೋನ್" ಎಂಬುವ ಹೆಸರನ್ನಿಟ್ಟನು. ಆದರೆ ಆ ಹೆಸರು ತಂದೆಯ ಸದುದ್ದೇಶಕ್ಕೆ ಗುರುತಾಗಿತ್ತೇ ಹೊರತು ಮಗನ ನಿಜಗುಣವನ್ನು ಹೊರಪಡಿಸುವಂಥಾದ್ದಾಗಿರಲಿಲ್ಲ. ಈ ಅಮ್ನೋನನು ಗೆಷೂರಿನವಳಾದ ಮಾಕಳಿಂದ ದಾವೀದನಿಗೆ ಹುಟ್ಟಿದ ಮಗಳೂ, ತನಗೆ ತಂಗಿಯೂ ಆಗಬೇಕಾಗಿದ್ದ ತಾಮರಳನ್ನು ಕೆಡಿಸಿ ಬಿಟ್ಟದ್ದಲ್ಲದೆ ಅವಳನ್ನು ಬಹು ಕ್ರೂರವಾಗಿ ನಡಿಸಿದನು. ಈ ಅಪರಾಧದ ಸಮಾಚಾರವು ದಾವೀದನಿಗೆ ಬೇಗ ತಿಳಿಯ ಬಂದಾಗ್ಯೂ ಅವನನ್ನು ಶಿಕ್ಷಿಸುವದಕ್ಕೆ ಆತನಿಗೆ



Digitized by ROJA MUTHIAH RESEARCH LIBRARY

ಧೈರ್ಯವು ಸಾಲದೆ ಹೋಯಿತು. "ಅಮ್ನೋನನು ಚೊಚ್ಚಲ ಮಗನೆಂದು ದಾವೀದನು ಅವನನ್ನು ಅತಿ ಪ್ರೀತಿ ಮಾಡಿದ್ದರಿಂದ ಅವನ ಹೃದಯವನ್ನು ಕುಂದಿಸುವದಕ್ಕೆ ದಾವೀದನು ಇಷ್ಟವಿಲ್ಲದವನಾಗಿದ್ದನು."

## ಅಬ್ಸಲೋಮನು ಪ್ರತೀಕಾರವನ್ನು ಮಾಡಿ, ಓಡಿ ಹೋದದ್ದು.

[ii ಸಮು. xiii. 22—38.]

ಅಬ್ಸಲೋಮನು ಸಾಹಸವಂತನಾಗಿಯೂ ರಾಜಗೌರವದಲ್ಲಿ ಕೇವಲ ಆಸಕ್ತನಾಗಿಯೂ ಇದ್ದನು. ಪೂರ್ವದಿಗ್ದೇಶಗಳ ಜನರೊಳಗೆ ಸಹೋದರಿಯನ್ನು ಕಾಯುವದು ಸಹೋದರನ ಮುಖ್ಯ ಧರ್ಮವಾಗಿತ್ತು. ಆದಕಾರಣ ಅಬ್ಸಲೋಮನು ತನ್ನ ಸಹೋದರಿಯಾದ ತಾಮರಳಿಗೆ ಉಂಟಾದ ಅವಮಾನಕ್ಕೆ ಪ್ರತಿಯಾಗಿ ಅಮ್ನೋನನನ್ನು ಕೊಲ್ಲಬೇಕೆಂದು ನಿಶ್ಚಯಿಸಿಕೊಂಡನು. ತನ್ನ ಉದ್ದೇಶವನ್ನು ಪೂರಯಿಸುವದಕ್ಕಾಗಿ ಆ ಸಂಗತಿಯನ್ನು ಕುರಿತು ಒಬ್ಬರಲ್ಲೂ ಪ್ರಸ್ತಾಪವೇನಾದರೂ ಮಾಡದೆ ಸುಮ್ಮನಿದ್ದನು. ಅಮ್ನೋನನ ವಿಷಯದಲ್ಲಾದರೋ ಎಂದಿನಂತೆ ಭೇದ ತೋರದೆ ನಡಕೊಂಡನು. ಹೀಗೆ ಈ ಕಾರ್ಯವನ್ನು ಸರ್ವರೂ ಮರೆತು ಹೋಗುವ ತನಕ ಪೂರಾ ಎರಡು ವರುಷಗಳು ಕಾದುಕೊಂಡಿದ್ದನು. ತರುವಾಯ ಯೆರೂಸಲೇಮಿನ ವಾಯುವ್ಯ ದಿಕ್ಕಿನಲ್ಲಿದ್ದ ಬಾಳ್ ಹಜಾರಿನಲ್ಲಿ ತನ್ನ ಸ್ವಂತ ಉಂಬಳಿ ಗ್ರಾಮಕ್ಕೆ ಅರಸನನ್ನೂ ರಾಜಪುತ್ರರನ್ನೂ ಔತಣಕ್ಕೆ ಕರೆದನು. ಯಾಕಂದರೆ ಆಗ ಕುರಿ ಉಣ್ಣೆಯನ್ನು ಕತ್ತರಿಸುವ ಹಬ್ಬವಾಗಿತ್ತು. ದಾವೀದನು ಬರುವದಕ್ಕಾಗುವದಿಲ್ಲವೆಂತ ಹೇಳಲು, ಹಾಗಾದರೆ ಚೊಚ್ಚಲು ಮಗನಾಗಿ ಸಿಂಹಾಸನಕ್ಕೆ ಹಕ್ಕುದಾರನಾದ ಅಮ್ನೋನನನ್ನಾದರೂ ಔತಣಕ್ಕೆ ಕಳುಹಿಸ ಬೇಕೆಂದು ಅರಸನನ್ನು ಬೇಡಿಕೊಂಡನು. ಆದರೆ ಅರಸನು ಅಪಾಯ ಸಂಭವಿಸುವದೋ ಏನೋ ಎಂಬ ಅನುಮಾನದಿಂದ ಮೊದಲು ಒಪ್ಪದಿದ್ದರೂ, ಕಡೆಗೆ ಕಳುಹಿಸಿದನು. ಔತಣ ನಡೆಯುತ್ತಿರುವಾಗ ಅಮ್ನೋನನು ಮಿತಿ ಮೀರಿ ಮದ್ಯಪಾನ ಮಾಡಿ ತನ್ನನ್ನು ಸಂರಕ್ಷಿಸಿಕೊಳ್ಳಲಶಕ್ತನಾಗಿರುವ ಸ್ಥಿತಿಯನ್ನು ಕಂಡು ಅಬ್ಸಲೋಮನು ಸೌಜ್ಞೆಮಾಡಿದ ಕೂಡಲೆ ಅವನ ಸೇವಕರು ಅಮ್ನೋನನ ಮೇಲೆ ಬಿದ್ದು ಕೊಂದರು. ಇದನ್ನು ಕಂಡ ಕೂಡಲೆ ಎಲ್ಲರು ಭಯ ಹಿಡಿದವರಾಗಿ ಊರಿನ ಕಡೆಗೆ ಓಡಿದರು. ಆದರೆ ಅಮ್ನೋನನ ಮರಣದ ಸಮಾಚಾರವು ನಡೆದುದಕ್ಕಿಂತ ಹೆಚ್ಚಾಗಿ ಅಂದರೆ ಅಬ್ಸಲೋಮನು ರಾಜಪುತ್ರರೆಲ್ಲರನ್ನು ಸಂಹರಿಸಿದನೆಂಬುದಾಗಿ ಯೆರೂಸಲೇಮಿನಲ್ಲಿ ದಾವೀದನಿಗೆ ತಿಳಿಸಿದುದರಿಂದ ದಾವೀದನು ಅತಿ ದುಃಖಾಕ್ರಾಂತನಾದನು. ಆದರೆ ಯುಕ್ತಿಪರನಾಗಿದ್ದ ಯೋನದಾಬನು ವಾಸ್ತವ್ಯವಾದ ಸಂಗತಿಯನ್ನೂಹಿಸಿ ಅಮ್ನೋನನು ಮಾತ್ರವೇ ಕೊಲ್ಲಲ್ಪಟ್ಟಿರ ಬಹುದೆಂದು ಅರಸನಿಗೆ ಹೇಳಿದನು. ತಾಮರಳಿಗೆ ಅವಮಾನ ಉಂಟಾದಂದಿನಿಂದ ಪ್ರತೀಕಾರ ಮಾಡಿ ಕೋಪವನ್ನು ತೀರಿಸಿಕೊಳ್ಳ ಬೇಕೆಂಬ ಆಶೆಯು ಅಬ್ಸಲೋಮನ ಮುಖದಲ್ಲಿ ಪರಿಷ್ಕಾರವಾಗಿ ತೋರುತ್ತಿತ್ತೆಂದೂ ಹೇಳಿದನು. ಕ್ಷಿಪ್ರದಲ್ಲೇ ಕಾವಲಿಯವನು- "ಗುಡ್ಡದ ಬಳಿಯಲ್ಲಿ ಹೊರಾನಾಯಿಮಿಗೆ (ಅಂದರೆ, ಬೆತ್ಹೋರನೆಂಬ ಹೆಸರಿನ ಎರಡು ಊರುಗಳಿಗೆ) ಹೋಗುವ ಮಾರ್ಗವಾಗಿ ಜನರು ಯಾರೋ ಬರುತ್ತಾರೆಂದು ಅರಸನಿಗೆ

Digitized by ROJA MUTHIAH RESEARCH LIBRARY



A/4538

ಹೇಳಿದನು. ಇದರಿಂದ ಯೋನದಾಬನ ಊಹೆಯು ಸ್ಥಿರಪಟ್ಟಿತು. ಈ ಪ್ರಕಾರ ಬಂದವರು ರಾಜಪುತ್ರರೇ. ಆದರೆ ಇವರೊಳಗೆ ಅಬ್ಸಲೋಮನಿರಲಿಲ್ಲ. ಅವನು ತಪ್ಪಿಸಿಕೊಂಡು ಗೆಷೂರಿಗೆ ಓಡಿ ಹೋಗಿ ತನ್ನ ತಾತನಾದ ತಾಲ್ಮಯಿಯ ಬಳಿಯಲ್ಲಿ ಮೂರು ವರುಷಗಳ ವರೆಗೂ ವಾಸವಾಗಿದ್ದನು. ತಾಲ್ಮಯಿಯು ದಾವೀದನಿಗೆ ಕಪ್ಪಕೊಡಬೇಕಾದ ವಿಷಯದಲ್ಲಿ ವಿನಾ ಮಿಕ್ಕಾದ ಎಲ್ಲಾ ವಿಷಯಗಳಲ್ಲಿ ಸ್ವತಂತ್ರನಾಗಿದ್ದದರಿಂದ ಅಬ್ಸಲೋಮನಿಗೆ ಭಯವೇನೂ ಇರಲಿಲ್ಲ. ಪರಂತು ದಾವೀದನಿಗೆ ಮಗನ ಮೇಲೆ ವಾತ್ಸಲ್ಯವು ವಿಶೇಷವಾಗಿದ್ದ ಕಾರಣ ಅಬ್ಸಲೋಮನನ್ನು ಶಿಕ್ಷಿಸುವದಕ್ಕೆ ಉದ್ಯುಕ್ತನಾಗಲಿಲ್ಲ. ಇಷ್ಟೇ ಅಲ್ಲ. ತಾನು ಅಮ್ನೋನನನ್ನು ಸರಿಯಾದ ವಿಧವಾಗಿ ತಿದ್ದದೆ ಹೋದದರಿಂದಲೇ ಈ ಕ್ರೂರಕೃತ್ಯವು ಸಂಭವಿಸಿತೆಂದು ಆತನಿಗೆ ಮನವರಿಕೆಯಾಗಿದ್ದಿರ ಬೇಕು.

## ಅಬ್ಸಲೋಮನು ಯೆರೂಸಲೇಮಿಗೆ ಮರಳಿ ಬಂದದ್ದು.

[ii ಸಮು. xiii. 39; xiv. 1—22.]

ಮೂರು ವರುಷಗಳಾದನಂತರ ದಾವೀದನ ಕೋಪವು ಶಾಂತವಾಗಿ ಅಬ್ಸಲೋಮನನ್ನು ತಿರಿಗಿ ಕರೆಯಿಸಿಕೊಳ್ಳುವದಕ್ಕೆ ಆಶೆಯಿದ್ದರೂ, ಶಿಕ್ಷಿಸಲ್ಪಡದ ಕೊಲೆಗಾರನನ್ನು ತಿರಿಗಿ ಅರಮನೆಗೆ ಕರತರುವದು ಹ್ಯಾಗೆಂದು ಮನಸ್ಸು ಬಾಧಿಸುತ್ತಿತ್ತು. ಅಬ್ಸಲೋಮನು ಯೋವಾಬನಿಗೆ ಅತಿ ಪ್ರಿಯನಾಗಿದ್ದದರಿಂದ ಯೋವಾಬನು ದಾವೀದನ ಮನೋಗತವನ್ನು ತಿಳಿದು ನೀತಿಗೆ ಭಂಗವಾಗ ಬಾರದು, ಪ್ರೀತಿಗೂ ಚ್ಯುತಿಯಾಗ ಬಾರದು ಎಂಬ ಸೂತ್ರವನ್ನು ಅರಸನ ಲಕ್ಷ್ಯಕ್ಕೆ ತರುವಂತೆ ಒಂದುಪಾಯವನ್ನು ಮಾಡಿದನು. ಹ್ಯಾಗಂದರೆ — ಅತಿ ಚಮತ್ಕಾರಿಯಾದ ಒಬ್ಬ ಸ್ತ್ರೀಯನ್ನು ಈಗ ತೆಕುವ ಎಂದು ಹೆಸರು ಪಡೆದು ಯೆರೂಸಲೇಮಿನ ದಕ್ಷಿಣಕ್ಕೆ ೧೨ ಮೈಲು ದೂರದಲ್ಲಿರುವ ತೆಕೋವದಿಂದ ಕರೆಯಿಸಿ ಅವಳು ಮಾಡಬೇಕಾದದನ್ನು ಅವಳಿಗೆ ಹೇಳಿಕೊಟ್ಟನು ಇವಳು ದುಃಖ ಸೂಚಕ ವಸ್ತ್ರಗಳನ್ನು ಧರಿಸಿದವಳಾಗಿ ಅರಸನು ನ್ಯಾಯಾಸನದಲ್ಲಿ ಕುಳಿತಿರುವಾಗ ಮುಂದೆ ಬಂದು ಅಡ್ಡಬಿದ್ದಳು. ತಾನು ವಿಧವೆಯಾದದ್ದು ಹ್ಯಾಗೆಂಬುದನ್ನೂ ತನ್ನ ಇಬ್ಬರು ಮಕ್ಕಳು ಜಗಳವಾಡಿ ಅವರಲ್ಲಿ ಒಬ್ಬನು ಸತ್ತನೆಂಬುದನ್ನೂ ತಿಳಿಸಿದಳು. ಇದಲ್ಲದೆ ತನ್ನ ಮನೆತನದವರೆಲ್ಲರು ಪದ್ಧತಿಯ ಪ್ರಕಾರ ಕೊಲೆಪಾತಕನಾದ ಆ ಒಬ್ಬ ಮಗನನ್ನು ಕೊಂದು ಪ್ರತೀಕಾರ ಮಾಡುವದಕ್ಕೆ ನಿಶ್ಚಯಿಸಿಕೊಂಡರೆಂತಲೂ ಅವರು ಹಾಗೆ ಪ್ರತೀಕಾರವನ್ನು ನಡಸಿದಲ್ಲಿ ಮರದ ತುಂಡು ಸುಟ್ಟು ಬೂದಿಯಾಗುವ ಹಾಗೆ ತನ್ನ ಗಂಡನ ವಂಶವೂ ನಾಶವಾಗುವದೆಂತಲೂ ಹೇಳಿದಳು. ಆ ಕ್ಷಣವೆ ಅರಸನು ಅವಳ ಮಗನನ್ನು ಕಾಯುತ್ತೇನೆಂದು ವಾಗ್ದಾನ ಮಾಡಿದನು. ಅನಂತರ ಅವಳು — ಹೀಗೆ ಆ ಮಗನನ್ನು ಕಾಯುವದು ಒಂದು ವೇಳೆ ಅನ್ಯಾಯವಾಗಿಯೂ ಪಾಪಕೃತ್ಯವಾಗಿಯೂ ಇದ್ದರೆ ಆ ತಪ್ಪು ಅರಸನ ಮೇಲೆ ಇರದೆ, ತನ್ನ ಮೇಲೆ ಇರುವದೆಂದು ಹೇಳಿದಳು. ಹೀಗೆ ಈ ಕಾರ್ಯವು ಅನ್ಯಾಯವೇ ಎಂದು ಸೂಚಿಸಿ ಇದಕ್ಕೆ ಅರಸನು ತನ್ನ ವಾಗ್ದಾನವೊಂದನ್ನಲ್ಲದೆ ಆಣೆಯನ್ನೂ ಇಡಬೇಕೆಂದು

Q,6:2 N

ಕೇಳಿಕೊಂಡಳು. ಆ ಮೇಲೆ ಇವಳು ಅರಸನಿಗೆ—ತಮ್ಮ ನ್ಯಾಯವು ತಮ್ಮ ನಡೆಯನ್ನೇ ಖಂಡಿಸುತ್ತದೆಂದು ವಿಜ್ಞಾಪಿಸಿಕೊಳ್ಳುತ್ತಾಳೆ. ಹ್ಯಾಗಂದರೆ—ವಂಶೋದ್ಧಾರಕನಾದ ಮಗನನ್ನೇ ಕೊಲ್ಲಬೇಕೆಂದು ತನ್ನ ಮನೆತನದವರು ಪ್ರಯತ್ನಿಸಿದ ಪ್ರಕಾರ ಅರಸನೂ ದೇವರ ಜನರಿಗೆ ಬಾಧ್ಯಸ್ಥನಾಗಿರುವ ಯುವರಾಜನನ್ನು ಕೊಲ್ಲುವದು ನ್ಯಾಯವೋ? ಜೀವಕಾಲ ಬೇಗ ಮುಗಿಯುವಂಥಾದ್ದು· ಸತ್ತವರೇನೋ ಸತ್ತರು. ಅವರಿಗಾಗಿ ಪ್ರತೀಕಾರ ಮಾಡುವದರಿಂದ ಅವರು ತಿರಿಗಿ ಬದುಕಿ ಬರಲಾರರು. ಮತ್ತು ದೇವರೇ ಕೃಪಾವಂತನಾಗಿ ಮಾದಿರಿಯನ್ನು ಮನುಷ್ಯರಿಗೆ ತೋರಿಸಿದ್ದಾನೆ ಎಂದು ಮೊದಲಾಗಿ ಯುಕ್ತಿ ಯುಕ್ತವಾದ ಮಾತುಗಳನ್ನು ನುಡಿದಳು. ಮತ್ತು ಅರಸನ ನಡತೆಯ ವಿಷಯವಾಗಿ ತಾನು ಪ್ರಸ್ತಾಪಿಸಿದ್ದೆಲ್ಲಾ ಹೆಂಗಸಿನ ಒಣ ಹರಟೆ ಎಂಬುದಾಗಿ ತಿಳಿಯ ಬೇಕೆಂತಲೂ ಹ್ಯಾಗೂ ತನ್ನ ವ್ಯಾಜ್ಯವು ಸಫಲವಾದ್ದರಿಂದ ತಾನು ಸಂತೋಷದಿಂದ ಮನೆಗೆ ಹೋಗಿ ಬರುತ್ತೇನೆಂತಲೂ ಹೇಳಿದಳು. ಆ ಹೆಂಗಸು ಹೀಗೆ ಎಷ್ಟು ಮರೆಮಾಜಿ ಮಾತಾಡಿದಾಗ್ಯೂ ಅರಸನು—ಇವಳ ಮುಖ್ಯೋದ್ದೇಶವು ನನ್ನ ವಿಷಯವಾಗಿ ಮಾತಾಡ ಬೇಕೆಂಬುದೇ ಹೊರತು ಬೇರೇನೂ ಅಲ್ಲವೆಂದು ತಿಳುಕೊಂಡದ್ದರಿಂದಲೂ ಅಬ್ಸಲೋಮನು ಯೋವಾಬನಿಗೆ ಅತಿ ಪ್ರಿಯನೆಂದು ಅರಿತಿದ್ದದರಿಂದಲೂ ಇವಳು ಯೋವಾಬನ ಪ್ರೇರಣೆಯಿಂದ ಇದನ್ನು ಮಾಡಿದ್ಧಾಳೆಂದು ಊಹಿಸಿ ಕೇಳಲು, ಅವಳು—ದೇವದೂತನಂತೆ ಎಲ್ಲಾ ಸಂಗತಿಗಳನ್ನು ತಿಳಿಯುವ ಜ್ಞಾನವುಳ್ಳ ಅರಸನಿಗೆ ಮರೆಮಾಡತಕ್ಕ ಯಾವ ರಹಸ್ಯ ಕಾರ್ಯವು ತಾನೆ ಇದೆಯೆಂದು ವಾಸ್ತವ್ಯವನ್ನು ಅರಿಕೆ ಮಾಡಿದಳು. ಆಗ ದಾವೀದನು ಯೋವಾಬನನ್ನು ಕರೆಯಿಸಿ ಗೆಷೂರಿಗೆ ಹೋಗಿ ತನ್ನ ಪ್ರಿಯ ಕುಮಾರನನ್ನು ಮನೆಗೆ ಕರಕೊಂಡು ಬರುವ ಹಾಗೆ ಅಪ್ಪಣೆಕೊಡಲು ಯೋವಾಬನು ಅತ್ಯುಲ್ಲಾಸದಿಂದ ಹೊರಟನು.

### ಅಬ್ಸಲೋಮನು ತಿರಿಗಿ ಅರಸನ ದಯೆಯನ್ನು ಸಂಪಾದಿಸಿದ್ದು.

[ii ಸಮು. xiv. 24, 28—33.]

ಅಬ್ಸಲೋಮನು ಹಿಂದಿರಿಗಿ ಬರುವದರೊಳಗೆ ಅರಸನ ಮನಸ್ಸು ಮಾರ್ಪಟ್ಟದರಿಂದ ಅವನನ್ನು ನೋಡುವದಕ್ಕೆ ಒಪ್ಪದೆ ಹೋಗಲು ಅರಮನೆಗೆ ಹೋಗುವದಕ್ಕೆ ಅಪ್ಪಣೆಯನ್ನು ಪಡೆಯಲಾರದೆ ಎರಡು ವರುಷಗಳ ತನಕ ಯೆರೂಸಲೇಮಿನಲ್ಲಿದ್ದ ತನ್ನ ಸ್ವಂತ ಮನೆಯೊಳಗೆ ವಾಸಮಾಡುತ್ತಿದ್ದನು. ತರುವಾಯ ತನ್ನ ಪಕ್ಷವಾಗಿ ಅರಸನ ಸಂಗಡ ಮಾತಾಡುವ ಹಾಗೆ ಅಬ್ಸಲೋಮನು ಯೋವಾಬನನ್ನು ಕರೇಕಳುಹಿಸಿದಾಗ್ಯೂ ಯೋವಾಬನು ಬಾರದೆ ಹೋಗಲು ಕಡೆಗೆ ಯೋವಾಬನ ಜವೆಗೋಧಿಯ ಪೈರನ್ನು ಸುಟ್ಟುಬಿಡುವ ಹಾಗೆ ಅಬ್ಸಲೋಮನು ತನ್ನ ಸೇವಕರಿಗೆ ಆಜ್ಞಾಪಿಸಿದನು. ಆಗ ಯೋವಾಬನು ಈ ದುಷ್ಟ ಕಾರ್ಯವನ್ನು ಕುರಿತು ಅಬ್ಸಲೋಮನಿಗೆ ತಿಳಿಸುವದಕ್ಕೆ ಬರಲು ಅಬ್ಸಲೋಮನು ತನಗಾಗಿ ಅರಸನ ಸಂಗಡ ಮಾತಾಡುವಂತೆ ಯೋವಾಬನನ್ನು ಬೇಡಿಕೊಂಡನು. ಹೀಗೆ ದುರ್ಮಾರ್ಗಿಯಾದ ಮಗನು ತಂದೆಯ ಪಾದಕ್ಕೆ ಬಿದ್ದು ಕ್ಷಮೆಯನ್ನು ಬೇಡಿಕೊಳ್ಳಲು, ಐದು ವರ್ಷಗಳು ದೇಶಭ್ರಷ್ಟನಾಗಿದ್ದವನು ಪುನಃ ತಂದೆಯ ಅನ್ಯೋನ್ಯಪ್ರೀತಿಯನ್ನು ಸಂಪಾದಿಸಿಕೊಂಡನು.



### ಮೂರು ವರ್ಷಗಳ ಕ್ಷಾಮ.

[ii ಸಮು. xxi. 1—14.]

ಸುಮಾರು ಇದೇ ಸಮಯದಲ್ಲಿ ದೇಶದಲ್ಲೆಲ್ಲಾ ಮೂರು ವರ್ಷಗಳ ಅನಾವೃಷ್ಟಿಯೂ, ಕ್ಷಾಮವೂ ಉಂಟಾದವು. ದಾವೀದನು ಈ ಉಪಹತಿಗೆ ಕಾರಣವನ್ನು ಯಾಜಕರ ಮುಖಾಂತರ ಯೆಹೋವನಿಂದ ಕೇಳಿದಾಗ ಅರಸನಾದ ಸೌಲನ ನಂಬಿಕೆದ್ರೋಹದ ದೆಸೆಯಿಂದ ಈ ಆಪತ್ತು ಸಂಭವಿಸಿತೆಂದು ಉತ್ತರವು ಬಂದಿತು. ಇದು ಹ್ಯಾಗಂದರೆ—ಯೆಹೋಷುವನು ಕಾನಾನ್ ದೇಶವನ್ನು ಜಯಿಸಿದ ಕಾಲದಲ್ಲಿ ಗಿಬಿಯೋನಿನಲ್ಲಿ ವಾಸಮಾಡುತ್ತಿದ್ದ ಕಾನಾನ್ಯರು ಯೆಹೋಷುವನಿಂದ ಅಭಯವನ್ನು ಹೊಂದಿ ಅಂದಿನಿಂದ ಸಮಾಧಾನವಾಗಿ ಜೀವಿಸುತ್ತಿದ್ದರು. ಸೌಲರಾಜನಾದರೋ ಇವರನ್ನು ದೇಶದಿಂದ ಸಂಪೂರ್ಣವಾಗಿ ಹೊರಡಿಸಿ ಬಿಟ್ಟು ಇಸ್ರಾಯೇಲರ ಅಧಿಕಾರವನ್ನು ಸ್ಥಾಪಿಸುವದಕ್ಕೆ ನಿಶ್ಚಯಿಸಿಕೊಂಡದ್ದೇ ಈ ನಂಬಿಕೆದ್ರೋಹವಾಗಿರ ಬಹುದು. ಈ ಸಂಹಾರದಲ್ಲಿ ಕಳೆದುಳಿದ ಗಿಬಿಯೋನಿಯರು ತಮ್ಮ ಬಂಧುಗಳ ಪ್ರತಿಕ್ರಿಯೆಗಾಗಿ ಹಣವನ್ನು ತೆಗೆದುಕೊಳ್ಳುವದಕ್ಕೆ ಒಡಂಬಡದೆ ಸೌಲನ ಸಂತಾನದಲ್ಲಿ ಏಳು ಮಂದಿಯನ್ನು ಸೌಲನ ಪಟ್ಟಣವಾದ ಗಿಬಿಯದಲ್ಲಿ ಪರಿಶುದ್ಧ ಸ್ಥಳಕ್ಕೆ ಎದುರಾಗಿ ಶೂಲಕ್ಕೆ ಹಾಕುವ ಹಾಗೆ ತಮಗೆ ಒಪ್ಪಿಸಿಕೊಡಬೇಕೆಂದು ದಾವೀದನನ್ನು ಕೇಳಿಕೊಂಡರು. ದಾವೀದನು ನಿರ್ವಾಹವಿಲ್ಲದೆ ಒಪ್ಪಿಕೊಂಡು ಸೌಲನಿಗೆ ಸೂಳೆಯಾಗಿದ್ದ ರಿಜ್ಪಳಿಂದ ಹುಟ್ಟಿದ ಇಬ್ಬರು ಕುಮಾರರನ್ನೂ ಅವನ ಚೊಚ್ಚಲು ಮಗಳಾದ ಮೀರಾಬಳ ಐದು ಮಂದಿ ಕುಮಾರರನ್ನೂ ಅಂತು ಏಳು ಮಂದಿಯನ್ನು ಅವರಿಗೆ ಒಪ್ಪಿಸಿ ಕೊಟ್ಟನು. ಆದರೆ ಯೋನತಾನನಿಗೆ ಪ್ರಮಾಣ ಮಾಡಿದ್ದದರಿಂದ ಯೋನತಾನನ ಸಂತತಿಯವರನ್ನು ಉಳಿಸಿದನು. ಗಿಬ್ಯೋನ್ಯರು ಈ ಏಳು ಮಂದಿಯನ್ನು ಸುಗ್ಗಿಕಾಲದ ಆರಂಭದಲ್ಲಿ (ಅಂದರೆ, ಏಪ್ರೆಲ್ ತಿಂಗಳಿನ ಆರಂಭದಲ್ಲಿ) ಶೂಲಕ್ಕೆ ಹಾಕಿದರು. ಮತ್ತು ಮಳೆಯು ಬರುವ ವರೆಗೂ ಅವರ ಶವಗಳನ್ನು ಅಲ್ಲಿಯೇ ತೂಗಾಡುತ್ತಿರುವಂತೆ ಬಿಟ್ಟರು. ರಿಜ್ಪಳಾದರೋ ಪುತ್ರವಾತ್ಸಲ್ಯ ಪ್ರೇರಿತಳಾಗಿ ಆ ಶವಗಳು ನೇತಾಡುತ್ತಿದ್ದ ಸ್ಥಳವನ್ನು ಬಿಡದೆ ಹಗಲಿನಲ್ಲಿ ಹದ್ದುಗಳನ್ನು ಓಡಿಸುತ್ತಾ ರಾತ್ರಿಯಲ್ಲಿ ನಾಯಿನರಿಗಳನ್ನು ಓಡಿಸುತ್ತಾ ಕಾಯುತ್ತಾ ಇದ್ದಳು. ಮಳೆ ಬಂದಾಗ ದೇವರ ಕೋಪವು ಶಾಂತವಾಯಿತೆಂದರಿತು ಶವಗಳನ್ನು ಇಳಿಸಿ ಅವುಗಳೊಂದಿಗೆ ಯಾಬೇಷ್ ಗಿಲ್ಯಾದಿನಿಂದ ತಂದ ಸೌಲ ಯೋನತಾನರ ಅಸ್ಥಿಗಳನ್ನು ಸಹಾ ಬೆನ್ಯಮೀನ ದೇಶದ ಜೇಲವೆಂಬಲ್ಲಿರುವ ಅವರ ಕುಟುಂಬದ ಸಮಾಧಿಯಲ್ಲಿ ಹೂಣಿಟ್ಟರು.

### ಖಾನೇಷುಮಾರಿಯೂ ಸಾಂಕ್ರಾಮಿಕ ರೋಗವೂ.

[ii ಸಮು. xxiv; i ದಿನಚರ್ಯ. xxi.]

ದಾವೀದನ ಆಳಿಕೆಯೊಳಗೆ ಸಂಭವಿಸಿದ ಪ್ರಜಾಕ್ಷೋಭೆಗಳೊಳಗೆ ಎರಡನೇದು ಘೋರವಾದದ್ದೊಂದು ಸಾಂಕ್ರಾಮಿಕ ರೋಗವಾಗಿದ್ದಿತು. ಈ ರೋಗವು ಸಂಭವಿಸುವದಕ್ಕೆ

Digitized by ROJA MUTHIAH RESEARCH LIBRARY

ದಾವೀದನ ಪಾಪವು ಕಾರಣವಾಯಿತೇ ಹೊರತು ಆತನ ಪೂರ್ವಾಧಿಕಾರಿಗಳದಲ್ಲ. ತನ್ನ ಆಳಿಕೆಯೊಳಗಣ ಪ್ರಜೆಗಳ ಲೆಕ್ಕವನ್ನೆಲ್ಲಾ ಬರೆಸಬೇಕೆಂಬುವ ದುರ್ಬುದ್ಧಿಯು ದಾವೀದನಲ್ಲಿ ಹೊಕ್ಕಿತು. ಆತನಲ್ಲಿ ಪ್ರಜೆಗಳ ಲೆಕ್ಕವನ್ನು ತಿಳಿಯ ಬೇಕೆಂಬ ಉದ್ದೇಶವು ಮಾತ್ರವಿದ್ದಿತೆಂದು ಊಹಿಸಲಾಗದು. ಇದಕ್ಕಿಂತಲೂ ಹೆಚ್ಚಾದ ಬೇರೆ ಯಾವುದೋ ಒಂದು ಕೆಟ್ಟ ಆಲೋಚನೆಯಿದ್ದಿರ ಬೇಕು. ಇಲ್ಲದಿದ್ದರೆ ಮೋಶೆ ತಾನೆ ಎರಡಾವರ್ತಿ ಈ ಪ್ರಕಾರ ಜನಸಂಖ್ಯೆ ಮಾಡಿದುದನ್ನೂ ಪಾಪಕೃತ್ಯವೆಂದೇ ಹೇಳಬೇಕಾಗುವದು. ಬಹುಶಃ ದಾವೀದನು ಫಿನಿಷಿಯರ ಪದ್ಧತಿಯನ್ನೋ ಈಜಿಪ್ಟಿನವರ ಪದ್ಧತಿಯನ್ನೋ ಅನುಸರಣೆಗೆ ತಂದು ಬಲವಾದ ಸೈನ್ಯವನ್ನು ಸ್ಥಾಪಿಸಿ ಪ್ರಜೆಗಳ ಮೇಲೆ ಕಂದಾಯವನ್ನು ವಿಧಿಸಿ ಸೇನೆಯ ನಿರಂಕುಶ ಪ್ರಭುತ್ವವನ್ನು ಸ್ಥಾಪಿಸ ಬೇಕೆಂಬುವ ಉದ್ದೇಶದಿಂದಲೇ ಹೀಗೆ ಮಾಡಿದನೆಂದು ವಿದ್ವಾಂಸರು ಊಹಿಸಿರುವದು ತಪ್ಪಾಗಿರಲಾರದು. ಇಂಥ ಏರ್ಪಾಟಿನಿಂದ ಪ್ರಜೆಗಳ ಸ್ವಾತಂತ್ರ್ಯಕ್ಕೆ ಭಂಗವುಂಟಾಗಿ ರಾಜನ ಅಧಿಕಾರವೇ ಪ್ರಧಾನವಾಗುವುದಕ್ಕೆ ಅವಕಾಶವಾಗುವದರಿಂದ ದಾವೀದನ ಈ ಉದ್ದೇಶದಲ್ಲಿ ದೇವರು ಇಸ್ರಾಯೇಲರ ಪ್ರಭುತ್ವದ ವಿಷಯವಾಗಿ ಚಿತ್ತಗೊಂಡಿದ್ದ ಅಭಿಪ್ರಾಯಕ್ಕೆ ವಿರೋಧ ಭಾವವು ತೋರುವುದು. ಇದು ಪಾಪವೇ ಸರಿ. ಇಸ್ರಾಯೇಲರ ಅರಸನಾದವನು ಅದೃಶ್ಯ ರಾಜ್ಯಾಧಿಪತಿಯಾದ ಮೆಸ್ಸೀಯನ ರಾಜ್ಯಾಭಿವೃದ್ಧಿಯನ್ನು ಮುಖ್ಯವಾಗಿ ಭಾವಿಸಬೇಕೇ ವಿನಾ, ಸ್ವಂತ ವೈಭವವನ್ನು ಆಶಿಸಕೂಡದೆಂದು ತಿಳಿದಿರತಕ್ಕದ್ದು. ಇಂಥ ಉದ್ದೇಶಕ್ಕೆ ಭಂಗವಾಗುವ ಕಾರ್ಯವನ್ನು ಯಾವನು ಪ್ರಯತ್ನಿಸುವನೋ ಅವನು ಭಗವಂತನ ಚಿತ್ತಕ್ಕೆ ವಿರೋಧವಾಗಿ ನಡೆದು ಪಾಪವನ್ನು ಹೊತ್ತುಕೊಳ್ಳುತ್ತಾನಷ್ಟೆ. ದಾವೀದನು ಖಾನೇಷುಮಾರಿ ಲೆಕ್ಕ ನೂಡ ಬೇಕೆಂದು ಅಪ್ಪಣೆ ಕೊಡಲಾಗಿ ಯೋವಾಬನೇ ಮೊದಲಾದ ಸೇನಾಪತಿಗಳು ಆಕ್ಷೇಪಿಸಿದರು. ಆದರೂ ದಾವೀದನು ಹಿಡಿದ ಪಟ್ಟನ್ನು ಬಿಡಲಿಲ್ಲ. ಅರಸನ ಆಜ್ಞೆಯ ಮೇರೆಗೆ ದಂಡಿಗೆ ಸೇರತಕ್ಕ ವಯಸ್ಸುಳ್ಳ ಎಲ್ಲಾ ಗಂಡಸರ ಲೆಕ್ಕದ ಪಟ್ಟಿಯನ್ನು ಸಿದ್ಧಮಾಡುವದಕ್ಕೆ ಕಳುಹಿಸಲ್ಪಟ್ಟರು. ಇವರು ರಾಜ್ಯದ ಆಗ್ನೇಯ ಭಾಗದಿಂದ ಮೊದಲು ಮಾಡಿಕೊಂಡು ಯೋರ್ದನಿನ ಆಚೆ ರೂಬೇನನ ಸೀಮೆಯೊಳಗಿದ್ದ ಅರೆಯೋರಿನಲ್ಲಿ ಆರಂಭಮಾಡಿ ಅಲ್ಲಿಂದ ಉತ್ತರಕ್ಕೆ ಗಿಲ್ಯಾದು ತಾಹಟಿಮ್ ಹೊಡ್ಷಿಯ ವರೆಗೂ ಮತ್ತು ಉತ್ತರ ಭಾಗದ ಕೊಟ್ಟ ಕೊನೆಯಲ್ಲಿರುವ ಡಾನಿಗೂ ಅಲ್ಲಿಂದ ಪೂರ್ವಕ್ಕೆ ಚಿದೋನಿನ ವರೆಗೂ ಬಂದರು. ಮತ್ತು ಅಲ್ಲಿಂದ ದಕ್ಷಿಣವಾಗಿ ಯೋರ್ದನಿಗೆ ಪಶ್ಚಿಮದಲ್ಲಿದ್ದ ಗೋತ್ರಗಳನ್ನು ಲೆಕ್ಕಮಾಡಿಕೊಂಡು ದಕ್ಷಿಣದಲ್ಲಿದ್ದ ಬತ್ಸೇಬದ ವರೆಗೂ ಬಂದರು. ಇವರು ಮಾಡಿದ ಲೆಕ್ಕದ ಪ್ರಕಾರ ಇಸ್ರಾಯೇಲಿನೊಳಗೆ ೮,೦೦,೦೦೦ ಮಂದಿಯೂ ಯೂದಾಯದೊಳಗೆ ೫.೦೦,೦೦೦ ಮಂದಿಯೂ ಇದ್ದದ್ದು ಗೊತ್ತಾಯಿತು. ಈ ಲೆಕ್ಕದೊಳಗೆ ಯಾಜಕರಾದ ಲೇವಿಯ ಗೋತ್ರದವರನ್ನೂ ಯೆರೂಸಲೇಮಿನ ನಿವಾಸಿಗಳನ್ನೂ ಸೇರಿಸಲಿಲ್ಲ. ಈ ಖಾನೇಷುಮಾರಿ ಲೆಕ್ಕವನ್ನು ಮಾಡಿ ಮುಗಿಸುವದಕ್ಕೆ ಒಂಭತ್ತು ತಿಂಗಳು ಇಪ್ಪತ್ತು ದಿನ ಹಿಡಿಯಿತು. ಲೆಕ್ಕವೆಲ್ಲಾ ಮುಗಿದ ಮೇಲೆ ತಾನು ಈ ವಿಷಯದಲ್ಲಿ ಪಾಪಮಾಡಿದನೆಂಬುವದು ದಾವೀದನಿಗೆ ಮನವರಿಕೆಯಾಯಿತು. ಮತ್ತು ಗಾಡನೆಂಬ ಪ್ರವಾದಿಯು ಆತನ ಬಳಿಗೆ ಬಂದು ದೇವರು ಈ ಪಾಪಕ್ಕಾಗಿ ಕಳುಹಿ

Digitized by ROJA MUTHIAH RESEARCH LIBRARY



ಸುವದಕ್ಕಿರುವ ಮೂರು ವಿಧಗಳಾದ ಶಿಕ್ಷೆಗಳನ್ನು ತಿಳಿಸಿ ಅವುಗಳೊಳಗೆ ಯಾವದಾದರೊಂದನ್ನು ಆದುಕೊಳ್ಳುವ ಹಾಗೆ ಹೇಳಿದನು. ಆ ಶಿಕ್ಷೆಗಳ್ಯಾವವಂದರೆ — ಮೂರು ವರ್ಷದ ಕ್ಷಾಮ, ಮೂರು ವರ್ಷಗಳ ವರೆಗೂ ಅಪಜಯವು, ಮೂರು ದಿನಗಳ ಜಾಡ್ಯವು. ಈ ಜಾಡ್ಯವು "ದೇವರ ಕೈ" ಎಂದು ಸಾಧಾರಣವಾಗಿ ಗೊತ್ತಾದದರಿಂದ ಮನುಷ್ಯರ ಕೈಯೊಳಗೆ ಬೀಳುವದಕ್ಕಿಂತ ದೇವರ ಕೈಯಲ್ಲಿ ಬೀಳುವದು ಲೇಸು ಎಂಥೇಳಿ ದಾವೀದನು ಕಡೇ ಶಿಕ್ಷೆಯನ್ನು ಆದುಕೊಂಡನು. ಅದೇ ಮೇರೆಗೆ ಈ ಘೋರ ಬಾಧೆಯು ಆರಂಭವಾಗಿ ೭೦,೦೦೦ ಮಂದಿಯನ್ನು ಶೀಘ್ರದಲ್ಲಿಯೇ ನಾಶಮಾಡಿತು. ಇದು ವಿಷೂಚಿಯೋ ಪ್ಲೇಗು ರೋಗವೋ ಗೊತ್ತಿಲ್ಲ.

## ರೋಗವು ನಿಂತದ್ದು.

[ii ಸಮು. xxiv. 16—25; i ದಿನಚರ್ಯ. xxi. 15—30.]

ಯೆರೂಸಲೇಮ್ ಪಟ್ಟಣಕ್ಕೆ ಅತಿ ಸಮೀಪದಲ್ಲಿ ಈ ಬಾಧೆಯು ಬಂದಾಗ್ಯೂ ಆ ಪಟ್ಟಣದೊಳಕ್ಕೆ ಮಾತ್ರ ಬಾರದೆ ಹೋದದು ಆಶ್ಚರ್ಯವೇ. ಪಟ್ಟಣದ ಹೊರಗಾದರೋ ಅತಿ ಘೋರವಾಗಿತ್ತು. ಉತ್ತರೋತ್ತರ ದೇವಾಲಯವನ್ನು ಕಟ್ಟಿದ ಗುಡ್ಡದ ಮೇಲಿದ್ದ ಯೆಬೂಸ್ಯನಾದ ಅರುವ್ನನ ಕಣದ ವರೆಗೂ ಈ ಬಾಧೆಯು ಬಂದಿತ್ತು. ಈ ಸಮಯದಲ್ಲಿ ಸಂಹಾರ ದೂತನು ಪರಿವಾರ ಸಮೇತವಾಗಿ ಅದೇ ಸ್ಥಳದಲ್ಲಿ ಇದ್ದ ಹಾಗೆ ದಾವೀದನು ದರ್ಶನವನ್ನು ಕಂಡು ಈ ಬಾಧೆಯು ತನ್ನ ಮೇಲಾದರೂ ತನ್ನ ಕುಟುಂಬದ ಮೇಲಾದರೂ ಬರಲಿ, ನಿರಪರಾಧಿಗಳಾದ ತನ್ನ ಪ್ರಜೆಗಳನ್ನು ಬಿಡಲಿ ಎಂದು ಆ ದೂತನನ್ನು ಬೇಡಿಕೊಂಡನು. ತರುವಾಯ ಬಾಧೆಯು ಅಕಸ್ಮಾತ್ತಾಗಿ ನಿಂತು ಹೋದದನ್ನು ನೋಡಿ ದಾವೀದನ ಪ್ರಾರ್ಥನೆಗೆ ಇಷ್ಟುಬೇಗ ಉತ್ತರ ಬಂದಿತಲ್ಲಾ ಎಂದು ಹೇಳಿ ಎಲ್ಲರೂ ಆಶ್ಚರ್ಯಪಟ್ಟರು. ಯೆಹೋವನು ಆ ಸ್ಥಳದಲ್ಲಿ ದರ್ಶನ ಕೊಟ್ಟದರಿಂದ ಪ್ರವಾದಿಯಾದ ಗಾಡನು ಆ ಸ್ಥಳವು ಪರಿಶುದ್ಧವಾದದ್ದೆಂದು ತಿಳಿದು ಆ ಸ್ಥಳದಲ್ಲಿ ಬಲಿಪೀಠವನ್ನು ಕಟ್ಟಿ ದೇವಾರಾಧನೆ ನಡಸೆಂದು ದಾವೀದನಿಗೆ ಹೇಳಿದನು. ದಾವೀದನು ಆ ಸ್ಥಳಕ್ಕೆ ಬಂದಾಗ ಕಣದ ಯಜಮಾನನು ಗೋಧಿ ತುಳಿಸುತ್ತಿದ್ದನು. ಆಗ ದಾವೀದನು ಆ ಭೂಮಿಯನ್ನು ಬೆಲೆಗೆ ಕೊಡುವ ಹಾಗೆ ಅವನನ್ನು ಕೇಳಿದನು. ಮತ್ತು ಎತ್ತುಗಳನ್ನು ಬಲಿಗೋಸ್ಕರವೂ ಮರದ ಸಾಮಾನುಗಳನ್ನು ಸೌದೆಗೋಸ್ಕರವೂ ಉಪಯೋಗಿಸ ಬೇಕೆಂದು ನಿಶ್ಚಯಿಸಿದನು. ಆದರೆ ಆ ಯೆಬೂಸಿಯನು ಅವೆಲ್ಲವನ್ನು ಅರಸನಿಗೆ ಬಹುಮಾನವಾಗಿ ಕೊಡುತ್ತೇನೆಂದಾಗ್ಯೂ ಒಬ್ಬನು ತನ್ನದಲ್ಲದ್ದನ್ನು ಬಲಿ ಅರ್ಪಿಸ ಕೂಡದೆಂಬ ಕಟ್ಟಳೆಯ ಪ್ರಕಾರ ದಾವೀದನು ಅದಕ್ಕೆ ತಕ್ಕ ಕ್ರಯವನ್ನು ಕೊಟ್ಟು ತಕ್ಕೊಂಡನು. ಎಷ್ಟಂದರೆ, ೫೦ ಷೆಕೆಲು ಬೆಳ್ಳಿ ಅಥವಾ ೧೦೦ ರೂಪಾಯಿಗಳು. ದಿನಚರ್ಯಗಳ ಪುಸ್ತಕದಲ್ಲಿ ೬೦೦ ಷೆಕೆಲು ಚಿನ್ನ ಇಲ್ಲವೆ ೧೮,೦೦೦ ರೂಪಾಯಿಗಳು ಎಂದು ಬರೆದಿರುವದರಿಂದ ಯಾವದು ಸರಿಯೋ ಎಂಬುವ ಸಂಶಯವು ಇದೆ. ದಾವೀದನು ಅರುವ್ನನ ಹೊಲವನ್ನು ಕೊಂಡು ಕೊಂಡು ಒಂದು ಮಣ್ಣಿನ ಬಲಿಪೀಠವನ್ನು ಕಟ್ಟಿ ಅದರ ಮೇಲೆ ಬಲಿ ಅರ್ಪಿಸಿದ ಕೂಡಲೆ ಬಾಧೆಯು ನಿಂತುಹೋಯಿತು.

## ಅಬ್ಸಲೋಮನು ದಂಗೆ ಏಳುವದಕ್ಕೆ ಕಾರಣಗಳು.

### (೧) ತಾನೇ ಕಾರಣನಾದದ್ದು.

ದಾವೀದನ ಮೂರನೇ ಮಗನಾದ ಅಬ್ಸಲೋಮನು ದಾವೀದನಿಗೆ ವಿರೋಧವಾಗಿ ತಿರುಗಿ ಬಿದ್ದದ್ದು ಆತನ ಆಳಿಕೆಯಲ್ಲಿ ನಡೆದ ಮತ್ತೊಂದು ವಿಷಯ. ಯೌವನಸ್ಥನಾದ ಈ ರಾಜಪುತ್ರನ ದ್ರೋಹದ ವಿಷಯದಲ್ಲಿ ಯಾವ ಕಾರಣಗಳು ಇದ್ದವೆಂದು ಬಹಳ ದೂರ ಹುಡುಕ ಬೇಕಾದುದಿಲ್ಲ. ಇವನ ಆಶೆಗೆ ಮಟ್ಟ ಮೇರೆ ಇದ್ದಿಲ್ಲ. ಅಮ್ನೋನನು ಸತ್ತಂದಿನಿಂದ ತಾನೇ ಸಿಂಹಾಸನಕ್ಕೆ ಹಕ್ಕುದಾರನೆಂದು ತಾನೂ ಪ್ರಜೆಗಳೂ ಎಣಿಸಿದ್ದರು. ದಾವೀದನ ಎರಡನೇ ಮಗನಾದ ಕಿಲಿಯಾಬನನ್ನು ಕುರಿತು ಯಾವದೊಂದು ವಿಷಯವೂ ಈ ಚಂತ್ರೆಯಲ್ಲಿ ಇಲ್ಲದ್ದರಿಂದ ಅವನು ಚಿಕ್ಕ ಪ್ರಾಯದಲ್ಲೇ ಸತ್ತಿರ ಬಹುದು. ರಾಜ್ಯದಲ್ಲೆಲ್ಲಾ ಅಬ್ಸಲೋಮನೇ ಬಹಳ ಸೌಂದರ್ಯವಂತನೆಂದು ಸರ್ವತ್ರ ಅಂಗೀಕಾರವಾಗಿತ್ತು. ಇವನು ರೂಪದಲ್ಲಿಯೂ ಶರೀರ ಸ್ಥಿತಿಯಲ್ಲಿಯೂ ಕುಂದೂ ಕೊರತೆಯೂ ಇಲ್ಲದೆ ಸಂಪೂರ್ಣನಾಗಿದ್ದನು. ಅವನ ಡಂಭವೋ ತನ್ನ ಅತ್ಯಾಶೆಗೆ ಅನುಗುಣವಾಗಿಯೇ ಇತ್ತು. ಅವನು ಉದ್ದವಾದ ಕೂದಲು ಬೆಳಸಿಕೊಂಡು ವರ್ಷಕ್ಕೊಂದು ಸಾರಿ ಅದನ್ನು ಕತ್ತರಿಸುತಿದ್ದನು. ಅವನ ಸೌಂದರ್ಯಕ್ಕೆ ತಲೆಯ ಕೂದಲೂ ಒಂದು ಕಾರಣವಾಗಿತ್ತು. ಅವನ ಕೂದಲನ್ನು ಕತ್ತರಿಸಿ ತೂಕ ಮಾಡಿದರೆ "ಅರಸನ ತೂಕದ ಪ್ರಕಾರ" ಇನ್ನೂರು ಷೆಕೆಲುಗಳು ಅಂದರೆ ೧೪೯ ತೊಲೆ ತೂಕವುಳ್ಳದ್ದಾಗಿರುತಿದ್ದುದರಿಂದ ಅವನ ಕೂದಲಿನ ಉದ್ದವೂ ಅಂದವೂ ವ್ಯಕ್ತವಾಗುತ್ತೆ. ಅವನ ಮಕ್ಕಳು ಕೂಡ ಅತಿ ಸೌಂದರ್ಯವಂತರೆಂದು ಎಣಿಸಲ್ಪಟ್ಟಿದ್ದರು. ಮುಖ್ಯವಾಗಿ ತಾಮರಳು ಮಹಾ ಸೌಂದರ್ಯಶಾಲಿ. ಅವನು ಸಾಹಸ ಗುಣವುಳ್ಳವನೂ ಬಲಾತ್ಕಾರಕ್ಕೆ ಬೊಗ್ಗದವನೂ ಆಗಿದ್ದನೆಂದು ಹಿಂದೆಯೇ ಹೇಳಿದೆವಷ್ಟೆ. ತಾನು ಮಾಡಿದ ತಪ್ಪಿಗೆ ಅಧಿಕ ಕಠಿಣವಾದ ಶಿಕ್ಷೆಯನ್ನು ಹೊಂದತಕ್ಕವನಾಗಿದ್ದರೂ ಅವನು ಗೆಷೂರಿನಿಂದ ಬಂದ ಮೇಲೆ ದಾವೀದನು ಅವನನ್ನು ಅರಮನೆಗೆ ಬಾರದೆ ಸ್ವಂತ ಮನೆಯಲ್ಲಿಯೇ ಇರಬೇಕೆಂದು ಕಟ್ಟುಮಾಡಿದ್ದು ಇವನಿಗೆ ಸಹಿಸಕೂಡದಷ್ಟು ದೊಡ್ಡ ಶಿಕ್ಷೆಯಾಗಿದ್ದಿತು. ಅರಮನೆಯ ಸೌಖ್ಯವು ಇವನಿಗೆ ಅತ್ಯಗತ್ಯವಾಗಿತ್ತು. ದಾವೀದನು ಅವನ ಆಶೆಗಳನ್ನು ಖಂಡಿಸಿ ಅವನು ಅತ್ಯಾಶೆಗೆ ಇಂಬು ಕೊಡದ ಹಾಗೆ ಬುದ್ಧಿ ಹೇಳುವದಕ್ಕೆ ಧೈರ್ಯಪಡಲಿಲ್ಲ. ಆದಕಾರಣ ಈಗ ಅವನ ಅತ್ಯಾಶೆಯು ತಂದೆಯ ಮರಣಕ್ಕೆ ಮುಂಚಿತವಾಗಿಯೇ ತಾನು ಸಿಂಹಾಸನಾರೂಢನಾಗ ಬೇಕೆಂಬುವ ಬಯಕೆಯನ್ನು ಅವನೊಳಗೆ ಹುಟ್ಟಿಸಿತು.

### (೨) ಪ್ರಜೆಗಳ ಪಕ್ಷದಲ್ಲಿದ್ದ ಕಾರಣಗಳು.

ಇಸ್ರಾಯೇಲಿನ ರಾಜ್ಯದವರು ಮುಖ್ಯವಾಗಿ ದಾವೀದನ ಸ್ವಂತ ಗೋತ್ರವಾದ ಯೂದಾಯ ಗೋತ್ರದವರು ಅಬ್ಸಲೋಮನ ದಂಗೆಗೆ ಹ್ಯಾಗೆ ಸಮ್ಮತಿಸಿದರೋ ನಿಶ್ಚಯಿಸಲ ಶಕ್ಯವು. ಇಸ್ರಾಯೇಲರೊಳಗೆ ದಾವೀದನ ಮೇಲೆ ಅಸಂತುಷ್ಟಿ ಹುಟ್ಟುವ ಹಾಗೆ ಮಾಡಿದ ಕಾರಣಗಳನ್ನು ಸತ್ಯವೇದದಲ್ಲಿ ಬರೆಯದೆ ಇದ್ದರೂ ಯಾವದಾದರೊಂದು ಕಾರಣವು ಇದ್ದೇ



ಇರಬೇಕು. ಖಾನೇಷುಮಾರಿ ಲೆಕ್ಕವು ಜನರ ಸ್ವಾತಂತ್ರ್ಯವನ್ನು ಹೋಗಲಾಡಿಸಿ ಸೈನ್ಯದ ನಿರಂಕುಶಪ್ರಭುತ್ವವನ್ನು ಸ್ಥಾಪಿಸುವದಕ್ಕೆ ಹೇತುವಾದದೆಂಬುದು ನಿಜವಾದರೆ ಅದೇ ಜನರ ಅಸಮಾಧಾನಕ್ಕೆ ಒಂದು ಮುಖ್ಯಕಾರಣವಾಗುವುದರಲ್ಲಿ ಸಂಶಯವಿಲ್ಲ. ಅಷ್ಟು ಮಾತ್ರವಲ್ಲದೆ ಖಾನೇಷುಮಾರಿ ಮುಗಿದ ಕೂಡಲೆ ಈ ಬಾಧೆಯೂ ಹುಟ್ಟಿತು. ಇದು ದಾವೀದನು ಯತ್ನಿಸಿದ ಅಕ್ರಮಕ್ಕೆ ದೇವರು ಕಳುಹಿಸಿದ ಒಂದು ಶಿಕ್ಷೆಯೆಂದು ಜನರೂ ಮತ್ತು ದಾವೀದನೂ ಚನ್ನಾಗಿ ತಿಳಿದರು. ರಾಜ್ಯದಲ್ಲೆಲ್ಲಾ ೭೦,೦೦೦ ಮಂದಿ ಸತ್ತದ್ದು ದಾವೀದನ ಅಕ್ರಮದಿಂದಲೇ ಎಂದು ಸರ್ವಸಮ್ಮತವಾಗಿ ಒಪ್ಪಿದರು. ಮತ್ತು ದಾವೀದನು ತಮ್ಮ ಹಕ್ಕುಗಳಿಗೆ ಕುಂದು ಬರಮಾಡಲು ಯತ್ನಿಸಿದ್ದನ್ನು ಯೋಚಿಸಿದರೆ ಜನರೆಲ್ಲರು ದಾವೀದನ ವಿಷಯದಲ್ಲಿ ಅತೃಪ್ತಿಪಟ್ಟದ್ದು ಕೌತುಕವೋ? ದಾವೀದನು ನಡಸಿದ್ದಾಗಿ ಬರೆದಿರುವ ಅಕ್ರಮ ಕಾರ್ಯವು ಆತನು ಪ್ರಜೆಗಳ ವ್ಯಾಜ್ಯಗಳನ್ನು ಕಾಲಕಾಲಕ್ಕೆ ಸರಿಯಾಗಿ ತೀರಿಸಲಿಲ್ಲವೆಂಬುವದೇ. ಪ್ರಾಚೀನ ಪದ್ಧತಿಯ ಪ್ರಕಾರ ಪ್ರತಿಯೊಂದು ವ್ಯಾಜ್ಯವನ್ನು ಅರಸನು ತಾನೇ ವಿಚಾರಿಸಬೇಕಾಗಿತ್ತು. ಆದಕಾರಣ ಇಷ್ಟು ವಿಸ್ತಾರವಾದ ರಾಜ್ಯದ ವ್ಯಾಜ್ಯಗಳನ್ನು ವಿಚಾರಿಸುವ ಭಾರವು ಬಹು ದೊಡ್ಡದಾಗಿ ಇದ್ದಿರ ಬೇಕು. ಕ್ಲುಪ್ತ ಸಮಯದಲ್ಲಿ ವ್ಯಾಜ್ಯಗಳನ್ನು ವಿಚಾರಿಸುವದು ಅಸಾಧ್ಯವಾಯಿತು. ದಾವೀದನು ವಯಸ್ಸು ಮಾರಿದವನಾಗಿಯೂ ಬಹುಶಃ ಅಸ್ವಸ್ಥನಾಗಿಯೂ ಇದ್ದದರಿಂದ ಅಂಥಾ ವ್ಯಾಜ್ಯಗಳ ವಿಚಾರಣೆಯನ್ನು ತಡೆಮಾಡಲು ಜನರೆಲ್ಲರ ಅಸಮಾಧಾನಕ್ಕೆ ಕಾರಣನಾದನು.

## ಅಬ್ಸಲೋಮನು ಸಿದ್ಧಮಾಡಿಕೊಂಡದ್ದು.

[ii ಸಮು. xv. 1—6.]

ದಾವೀದನು ಅಬ್ಸಲೋಮನನ್ನು ಅರಮನೆಗೆ ಸೇರಿಸಿಕೊಂಡ ಬಳಿಕ ಅವನು ಜನರ ಮನಸ್ಸನ್ನು ವಶಪಡಿಸಿಕೊಳ್ಳ ಬೇಕೆಂದು ಪ್ರಯತ್ನಿಸ ತೊಡಗಿದನು. ಮೊದಲು ಡಂಭಾಚಾರಿಗಳಾದವರ ಮನಸ್ಸಿಗೆ ತನ್ನನ್ನು ಒಡಂಬಡಿಸುವಂತೆ ತಾನೂ ಬಹು ಡಂಭವಾಗಿ ನಡೆಯಲುಪಕ್ರಮಿಸಿದನು. ಮೊದಲಿದ್ದ ಸಾಧಾರಣ ವಾಡಿಕೆಗಳನ್ನು ತ್ಯಜಿಸಿ ಬಿಟ್ಟನು. ಪೂರ್ವದಲ್ಲಿ ಇಸ್ರಾಯೇಲರ ಅರಸರು ಯುದ್ಧಕ್ಕೆ ಹೋಗುವಲ್ಲಿ ಮಾತ್ರ ಕುದುರೆಗಳನ್ನು ಹೂಡಿದ ರಥಗಳಲ್ಲಿ ಹೊರಡುತ್ತಿದ್ದರು. ಅಬ್ಸಲೋಮನಾದರೋ ಈಜಿಪ್ಟ್ ದೇಶದವರ ಹಾಗೆ ಪ್ರತಿ ದಿನವೂ ಕುದುರೆ ಹೂಡಿದ ರಥಗಳಲ್ಲಿ ಸ್ವಾರಿ ಮಾಡುತ್ತಿದ್ದನು. ಮತ್ತು ತನ್ನ ಸಾರೋಟಿನ ಮುಂದೆ ದಾರಿ ಬಿಡಿಸಿಕೊಂಡು ಹೋಗುವಂತೆ ೫೦ ಮಂದಿ ಕಟ್ಟಿಗೆಯವರನ್ನು ಓಡಿಸುತ್ತಿದ್ದನು. ಮತ್ತು ನ್ಯಾಯವಿಚಾರಣೆ ಮಾಡುವ ಸ್ಥಳವಾದ ಹೆಬ್ಬಾಗಲಿನಲ್ಲಿ ಕೂತುಕೊಂಡು ವ್ಯಾಜ್ಯಗಾರರನ್ನು ಬಹು ವಿವರವಾಗಿ ಅವರವರ ವ್ಯಾಜ್ಯಗಳನ್ನು ಕುರಿತು ಪ್ರಶ್ನೆ ಮಾಡುವನು. ವಿಚಾರಣೆಯೆಲ್ಲಾ ತೀರಿದ ಮೇಲೆ ಎರಡು ಪಕ್ಷದವರಿಗೂ ಅವರವರ ವ್ಯಾಜ್ಯವೇ ನ್ಯಾಯವೆಂದು ಹೇಳುವನು. ಮತ್ತು ಅರಸನು ವಿಚಾರಣೆಗೆ ಬಾರದೆಯೂ ಯಾರನ್ನಾದರೂ ತನಗೆ ಬದಲಾಗಿ ನೇಮಿಸದೆಯೂ ಇರುವದರಿಂದ ತನಗೆ ಬಹಳ ವ್ಯಸನವಿದ್ದ ಹಾಗೆ ತೋರ್ಪಡಿಸುವನು. ಸಮಯ



Digitized by ROJA MUTHIAH RESEARCH LIBRARY

ಜಿದ್ದರೆ ತನ್ನ ಡಂಭವನ್ನೆಲ್ಲಾ ಒಂದು ಕಡೆಗಿಟ್ಟು ಬಹು ದೀನನ ಹಾಗೆ ಕಾಣಿಸಿಕೊಳ್ಳುವನು. ದಾರಿಕಾರರು ಈತನು ಅರಸಿನ ಕುಟುಂಬದವನೆಂದು ತಿಳಿದು ಅವನಿಗೆ ಸಾಷ್ಟಾಂಗ ನಮಸ್ಕಾರ ಮಾಡುವದಕ್ಕೆ ಬಂದರೆ ಅವರನ್ನು ಕೈ ಹಿಡಿದು ಎಬ್ಬಿಸಿ ತಾನೂ ಅವರಂತೆಯೇ ಸಾಧಾರಣ ಮನುಷ್ಯನೆಂದು ತೋರ್ಪಡಿಸುವಂತೆ ಅವರನ್ನು ಆಲಿಂಗನ ಮಾಡುವನು. ಇಂಥಾ ಕುಯುಕ್ತಿಯಿಂದಲೂ, ಇಚ್ಚಕತನದಿಂದಲೂ, ತನ್ನ ಸೌಂದರ್ಯವಿಶೇಷದಿಂದಲೂ, ಬಹು ದೊಡ್ಡ ಮನುಷ್ಯನೆಂಬುದಾಗಿ ಕಾಣಿಸಿ, ಜನರೆಲ್ಲರ ಮನಸ್ಸನ್ನು ತನ್ನ ಕಡೆಗೆ ಎಳೆದುಕೊಂಡನು. ಅರಿಯದವರು ಅವನ ಅಂತರ್ಯದಲ್ಲಿದ್ದ ಗುಣವನ್ನು ಕಂಡುಹಿಡಿಯಲಿಲ್ಲ. ಆದರೆ ದಾವೀದನ ತರುವಾಯ ಬರುವ ಅರಸನು ಅವನಿಗಿಂತಲೂ ಬಲು ಒಳ್ಳೇ ಅರಸನಾಗಿರುವನೆಂತ ಜನರೆಲ್ಲರು ನಂಬಿಕೆಯಿಂದ ಎದುರು ನೋಡುವ ಹಾಗೆ ಆಯಿತು.

## ಅಬ್ಸಲೋಮನು ದಂಗೆ ನಡಿಸಿದ್ದು.

[ii ಸಮು. xv. 7—12.]

ಹೀಗೆ ನಾಲ್ಕು ವರ್ಷಗಳು ಕಳೆದ ಮೇಲೆ ಅಬ್ಸಲೋಮನು ತನ್ನ ಮನೋಭೀಷ್ಟವನ್ನು ಸಿದ್ಧಿಸಿಕೊಳ್ಳುವದಕ್ಕೆ ತಕ್ಕಷ್ಟು ಬಲವುಳ್ಳವನಾದನು. ತಾನು ಗೆಷೂರಿನಲ್ಲಿರುವಾಗ ಯೆರೂಸಲೇಮಿಗೆ ತಿರಿಗಿ ಬಂದರೆ ತನ್ನ ಜನ್ಮ ಸ್ಥಳವಾದ ಹೆಬ್ರೋನಿನಲ್ಲಿ ಯೆಹೋವನಿಗೆ ಬಲಿ ಅರ್ಪಿಸುವ ಹಾಗೆ ಹರಿಕೆಮಾಡಿಕೊಂಡದ್ದೆನೆಂದು ನೆವ ಹೇಳಿ ದಾವೀದನ ಅನುಮತಿಯನ್ನು ಹೊಂದಿ ಹೆಬ್ರೋನಿಗೆ ಹೋದನು. ಅದೇ ಸಮಯದಲ್ಲಿಯೇ ದೇಶದಲ್ಲೆಲ್ಲಾ ಚಾರರನ್ನು ಕಳುಹಿಸಿ— ಯಾವಾಗ ತುತೂರಿಯ ಧ್ವನಿಯನ್ನು ಕೇಳುವಿರೋ ಆಗಲೆ ಅಬ್ಸಲೋಮನು ಅರಸನಾಗಿದ್ದಾನೆಂದು ಸಾರುವ ಹಾಗೆ ಅವರಿಗೆ ಹೇಳಿ ಕಳುಹಿಸಿದ್ದನು. ಯೆರೂಸಲೇಮಿನಿಂದ ಅವನು ಸುಮಾರು ೨೦೦ ಮಂದಿಯನ್ನು ಔತಣಕ್ಕೆಂಬುವ ನೆವದಿಂದ ಕರೆದುಕೊಂಡು ಹೋದನು. ಇವರು ಅವನ ಒಳಸಂಚಿನಲ್ಲಿ ಪಾಲುಗಾರರಾಗಿರದಿದ್ದರೂ ತನ್ನಲ್ಲಿ ಅನುರಾಗವುಳ್ಳವರಾಗಿದ್ದಾರೆಂದು ಅಬ್ಸಲೋಮನು ಚನ್ನಾಗಿ ತಿಳುಕೊಂಡಿದ್ದನು. ಹೆಬ್ರೋನನ್ನು ಸೇರಿ ಬಲಿಯರ್ಪಿಸುವ ಸಮಯಕ್ಕೆ ಅಲ್ಲಿಗೆ ಸಮೀಪದಲ್ಲಿದ್ದ ಗೈಲೊ ಹಳ್ಳಿಗೆ ಮನುಷ್ಯರನ್ನು ಕಳುಹಿಸಿ ವಿವೇಕವುಳ್ಳ ಅಹಿತೋಫೆಲನನ್ನು ಕರೆಯಿಸಿದನು. ಇವನು ಪೂರ್ವದಲ್ಲಿ ದಾವೀದನಿಗೆ ಸ್ನೇಹಿತನಾಗಿಯೂ ಆಲೋಚನಾಕರ್ತನಾಗಿಯೂ ಇದ್ದನು. ಆದರೆ ಇವನು ದಾವೀದನ ಸಂಗಡ ಕಲಹ ಮಾಡಿಕೊಂಡು ಅರಮನೆಯನ್ನು ಬಿಟ್ಟು ಹೋಗಿರ ಬಹುದು. ಅನಂತರ ಅಬ್ಸಲೋಮನು ಯಜ್ಞ ಭೋಜನವನ್ನು ಭುಜಿಸುತ್ತಿರುವಾಗ ಅತಿಥಿಗಳಿಗೆ ತನ್ನ ಉದ್ದೇಶವನ್ನು ಬಯಲುಪಡಿಸಿದ್ದರಿಂದ ಯಜ್ಞದ ಯಾಜಕನು ಅವನನ್ನು ಅರಸನಾಗ ಅಭಿಷೇಕಿಸಿದನು. ಅಲ್ಲಿ ಕೂಡಿದ್ದವರೆಲ್ಲರು ಅವನಿಗೆ ಮಣಿದರು. ಮತ್ತು ಈ ಸಮಾಚಾರವು ಹಬ್ಬಿದ ಸ್ಥಳಗಳಲ್ಲೆಲ್ಲಾ ಅವನ ಚಾರರು ಅವನನ್ನು ಅರಸನೆಂದು ಸಾರಿದರು. ಹೀಗೆ ಇವನ ಕಡೆಗೆ ಬಹಳ ಮಂದಿ ಸೇರಿದರು. ಅನೇಕರು ಇವನ ಪಕ್ಷವನ್ನು ವಹಿಸುವದಕ್ಕೆ ಹೆಬ್ರೋನಿಗೆ ಬಂದರು.



## ದಾವೀದನು ಯೆರೂಸಲೇಮನ್ನು ಬಿಟ್ಟು ಓಡಿ ಹೋದದ್ದು.

[ii ಸಮು. xv. 13—30.]

ದಾವೀದನು ದಂಗೆಯ ಸಮಾಚಾರವನ್ನು ಕೇಳಿದ ಕೂಡಲೆ ಯೆರೂಸಲೇಮನ್ನು ಬಿಡಬೇಕೆಂದು ನಿಶ್ಚಯಿಸಿಕೊಂಡನು. ಬಹುಶಃ ದಾವೀದನು ಕೇಳಿದ ಸಮಾಚಾರವು ಉತ್ಪ್ರೇಕ್ಷಿಸಲ್ಪಟ್ಟದ್ದಾಗಿತ್ತೆಂಬುವದಕ್ಕೆ ಸಂದೇಹವಿಲ್ಲ. ಆ ಪಟ್ಟವು ಮುತ್ತಿಗೆಯನ್ನು ತಡೆಯುವಷ್ಟು ಶಕ್ತಿಯುಳ್ಳದಾಗಿರಲಿಲ್ಲ. ಒಂದು ವೇಳೆ ಎದುರಾಂತು ನಿಂತ ಮೇಲೆ ಅಬ್ಸಲೋಮನು ಪಟ್ಣವನ್ನು ಸ್ವಾಧೀನ ಮಾಡಿಕೊಂಡರೆ ಬೀದಿಗಳಲ್ಲಿ ಜನರನ್ನು ದೊಡ್ಡವರು ಚಿಕ್ಕವರು ಎಂಬುವ ಭೇದ ನೋಡದೆ ನಿಸ್ಸಂದೇಹವಾಗಿ ಅವನು ಸಂಹರಿಸುವನೆಂದು ನಂಬಿ ಈ ಸಂಹಾರಕ್ಕೆಡೆಕೊಡಬಾರದೆಂದು ದಾವೀದನು ಅರಮನೆಯನ್ನು ಕಾಯುವದಕ್ಕೆ ಹತ್ತು ಮಂದಿ ಸ್ತ್ರೀಯರನ್ನು ಮಾತ್ರ ಬಿಟ್ಟು ಉಳಿದ ತನ್ನ ಕುಟುಂಬದ ಸಮೇತ ಆ ಕ್ಷಣವೇ ಹೊರಟನು. ಅರಸನಲ್ಲಿ ಭಕ್ತಿಯುಳ್ಳವರೆಲ್ಲರು ಆತನನ್ನು ಹಿಂಬಾಲಿಸ ಬಹುದೆಂದು ಅಪ್ಪಣೆಯಾಯಿತು. ಇವರು ಪಟ್ಣದ ಪೂರ್ವ ಭಾಗದಿಂದ ಹೊರಟು ಕೆದ್ರೋನು ಹಳ್ಳಕ್ಕೆ ಸರಿಯಾಗಿ ಒಲೀವ ಗುಡ್ಡದ ಕಡೆಗೆ ಬಂದು ಆ ಹಳ್ಳದಲ್ಲಿ “ದೂರದಲ್ಲಿದ್ದ ಮನೆ” ಎಂಬಲ್ಲಿ ನಿಂತು, ತನ್ನ ಸಂಗಡ ಬಂದವರು ತನ್ನ ಮುಂದೆ ಹಾದು ಹೋಗುವಂತೆ ಮಾಡಿ ತಾನು ನಿಂತು ನೋಡುತ್ತಿದ್ದನು. ಆತನ ಸಂಗಡ ಹೋದ ಮಂತ್ರಿಗಳೂ ಮುಖ್ಯ ಹುದ್ದೇದಾರರೂ ರಾಜಭಕ್ತಿಯಿಂದ ತುಂಬಿದವರಾಗಿದ್ದರು. ಆತನ ಮೈಗಾವಲಿನವರು “ಪರಾಕ್ರಮಿಗಳು” ಎಂದು ಹೆಸರ್ಗೊಂಡ ಆ ಆರುನೂರು ಮಂದಿ ಕೆರೇತ್ಯರು ಪೆಲೇತ್ಯರು. ಮತ್ತು ಗಾತು ಊರಿನಿಂದ ಕೆಲವು ಮಂದಿಯ ಸಂಗಡ ಬಂದು ಸೈನ್ಯದಲ್ಲಿ ಸೇರಿಕೊಂಡಿದ್ದ ಇತ್ತಾಯಿಯೂ ಆತನ ಸಂಗಡ ಬಂದಿದ್ದನು. ಹೀಗೆ ದೇಶದಲ್ಲಿದ್ದ ಆತನ ದಂಡಿನವರೆಲ್ಲರು ಆತನ ಸಂಗಡ ಇದ್ದರು. ದಾವೀದನ ಸೇನೆಯವರು ಸಂಖ್ಯೆಯಲ್ಲಿ ಕೆಲವರಾಗಿದ್ದರೂ ಯುದ್ಧದಲ್ಲಿ ಶಿಕ್ಷಿತರಾಗಿಯೂ ಒಳ್ಳೇ ಯುದ್ಧೋಪಕರಣಗಳುಳ್ಳವರಾಗಿಯೂ ಇದ್ದರು. ದಾವೀದನು ಇತ್ತಾಯಿಯನ್ನೂ ಅವನ ಸಂಗಡ ಬಂದಿದ್ದ ಭಟರನ್ನೂ ನೋಡಿ ಅವರು ಹೊಸತಾಗಿ ಬಂದು ಸೇರಿಕೊಂಡಿದ್ದದರಿಂದ ಅವರಿಗೆ ತನ್ನ ಮೇಲೆ ಅಷ್ಟು ಅಭಿಮಾನವಿರಲಾರದೆಂದೆಣಿಸಿ, ಹೊಸ ಅರಸನ ಸಂಗಡ ಇರುವದು ನಿಮಗೆ ಉತ್ತಮವೆಂತ ಹೇಳಿ ಅವರನ್ನು ಹಿಂದಕ್ಕೆ ಕಳುಹಿಸಲೆತ್ನಿಸಿದನು. ಆದರೆ ಶೂರನಾದ ಆ ಫಿಲಿಷ್ಟಿಯನು—“ಬದುಕಿದ್ದರೂ ಸತ್ತರೂ, ತಮ್ಮ ಸಂಗಡಲೇ ಇರುವೆ” ನೆಂದು ಅರಸನಿಗೆ ದೃಢವಾಗಿ ಹೇಳಿದನು. ಆ ಮೇಲೆ ನಡೆದ ಯುದ್ಧದಲ್ಲಿ ಇವನು ಬಹಳ ಸಹಾಯಕನಾಗಿದ್ದನು. ಯಾಜಕರಾದ ಚದೋಕನೂ ಅಬಿಯಾತರನೂ ಕೂಡಾ ಒಡಂಬಡಿಕೆಯ ಪೆಟ್ಟಿಗೆಯನ್ನು ಯಥಾಪ್ರಕಾರ ಹೊತ್ತುಕೊಂಡು, ದಾವೀದನ ಹಿಂಬಾಲಕರೆಲ್ಲರು ದಾಟಿಹೋಗುವ ತನಕ ಆತನ ಬಳಿಯಲ್ಲೆ ನಿಂತಿದ್ದರು. ತರುವಾಯ ಅರಸನು—ದೇವರ ಚಿತ್ತವಾದರೆ ನಾನು ತಿರಿಗಿ ಬಂದು ಈ ಪೆಟ್ಟಿಗೆಯ ಮುಂದೆ ಆರಾಧಿಸುವೆನೆಂತ ಹೇಳಿ ಆ ಯಾಜಕರನ್ನು ತಿರಿಗಿ ಆ ಪೆಟ್ಟಿಗೆಯೊಂದಿಗೆ ಯೆರೂಸಲೇಮಿಗೆ ಕಳುಹಿಸಿದನು. ಇದಲ್ಲದೆ ಅವರು ಹಿಂದಕ್ಕೆ ಹೋದರೆ ತನಗೆ ಪ್ರಯೋಜಕರಾಗಿರುವರೆಂತಲೂ, ಅವರ ಮಕ್ಕಳಾದ ಅಹಿಮಾಜ ಯೋನತಾನರ ಮುಖಾಂತರ ಶತ್ರುಗಳ ಸಮಾ

Digitized by ROJA MUTHIAH RESEARCH LIBRARY

ಚಾರವನ್ನೆಲ್ಲಾ ತಾನು ತಿಳಿಯುವದಕ್ಕನುಕೂಲವಾಗುವದೆಂತಲೂ ದಾವೀದನು ಆಲೋಚಿಸಿದನು. ಇದಕ್ಕೆ ಅವರು ಸಮ್ಮತಿಸಿದರು. ತರುವಾಯ ದಾವೀದನು ಪ್ರಯಾಣ ಬೆಳಸಿ ಕಾಲುನಡೆಯಾಗಿಯೇ ಹೋಗುತ್ತಾ ಅಧಿಕ ದುಃಖಭರಿತನಾಗಿದ್ದದರಿಂದ ಮುಖಕ್ಕೆ ಮುಸುಕು ಹಾಕಿಕೊಂಡು ಬೀಡಿನ ಹಿಂದೆ ಒಲೀವ ಗುಡ್ಡದ ಮೇಲಕ್ಕೆ ಹೋದನು. ಅರಸನ ಈ ದುಃಖದ ಸೂಚನೆಯನ್ನು ನೋಡಿ ಜನರೆಲ್ಲರು ಗಟ್ಟಿಯಾಗಿ ಗೋಳಾಡುತ್ತಾ ತಾವೂ ಮುಸುಕಿ ಹಾಕಿಕೊಂಡವರಾಗಿ ಹೋದರು.

### ಹುಷಾಯನು ಹಿಂದಕ್ಕೆ ಹೋದದ್ದು.

[ii ಸಮು. xv. 31—37.]

ರಾಜ್ಯದ ದಕ್ಷಿಣ ಭಾಗವೆಲ್ಲಾ ಅಬ್ಸಲೋಮನಿಗೆ ಒಳಪಟ್ಟಿದ್ದದರಿಂದ ದಾವೀದನು ಯೋರ್ದನಿನ ಬೈಲಿಗೆ ಹೋಗಬೇಕೆಂಬುವ ಉದ್ದೇಶದಿಂದ ಉತ್ತರ ದಿಕ್ಕಿಗೆ ಪ್ರಯಾಣವಾಗಿ ಹೊರಟನು. ತಾನು ಏನುಮಾಡಬೇಕೆಂದು ಚದೋಕನೂ ಅಬಿಯಾತರನೂ ತಿಳಿಸುವ ವರೆಗೂ ಅಲ್ಲಿಯೇ ಇರುವ ಹಾಗೆ ಅರಸನು ನಿಶ್ಚಯಿಸಿಕೊಂಡನು. ಆದರೆ ಅಹಿತೋಫೆಲನು ಅಬ್ಸಲೋಮನ ಪಕ್ಷವನ್ನು ವಹಿಸಿದ ಸಮಾಚಾರವನ್ನು ಕೇಳಿ ದಾವೀದನು ಬಹು ಅಧೈರ್ಯ ಪಟ್ಟವನಾದನು. ಯಾಕಂದರೆ ಜನರು ಅವನ ಆಲೋಚನೆಯು ತಪ್ಪದೆ ನಡೆಯತಕ್ಕದ್ದೆಂದು ಭಾವಿಸಿದ್ದರು. ದಾವೀದನು ಈ ಸಮಾಚಾರವನ್ನು ಕೇಳಿದ ಕ್ಷಣವೇ "ಅಪ್ರಬುದ್ಧಿಯ ತಮ್ಮನು" ಎಂಬ ಅವನ ಹೆಸರಿನ ಅರ್ಥಕ್ಕೆ ಸರಿಯಾಗಿ ದೇವರು ಈ ಸಮಯದಲ್ಲಿ ಅವನ ಆಲೋಚನೆಗೆ ಭಂಗವನ್ನು ಬರಮಾಡಲೆಂದು ದೇವರನ್ನು ಪ್ರಾರ್ಥಿಸಿದನು. ಆದರೆ ಗುಡ್ಡದ ತುದಿಯಲ್ಲಿ "ದೇವರು ಆರಾಧಿಸಲ್ಪಡುವ" ಆ ಸ್ಥಳಕ್ಕೆ ಬಂದಾಗ ದಾವೀದನ ಬಹುಕಾಲದ ಸ್ನೇಹಿತನಾಗಿದ್ದ ಅರ್ಕಿಯನಾದ ಹುಷಾಯನು ದುಃಖಸೂಚಕ ವಸ್ತ್ರಗಳನ್ನು ಹೊದ್ದವನಾಗಿ ಬಂದದನ್ನು ಕಂಡು ಅರಸನು ಅತ್ಯಾನಂದಭರಿತನಾದನು. ಎಫ್ರಾಯಿಮಿನಲ್ಲಿದ್ದ ಎರೆಕ ಊರಿನವನಾದ ಅವನು ಯೋಧನಲ್ಲದರಿಂದ ದಾವೀದನು ಹುಷಾಯನನ್ನು ಹಿಂದಕ್ಕೆ ಹೊರಟು ಹೋಗಬೇಕೆಂದು ಬೇಡಿಕೊಂಡು, ನೀನು ಹೋಗಿ ಅಬ್ಸಲೋಮನ ವಿಷಯದಲ್ಲಿ ರಾಜಭಕ್ತಿಯನ್ನು ನಟಿಸುತ್ತಿದ್ದು ಹಾಗೇ ಅಹಿತೋಫೆಲನ ಆಲೋಚನೆಯನ್ನು ಕೂಡ ಭಂಗಪಡಿಸ ಬೇಕು ಎಂದು ಕೇಳಿಕೊಂಡನು. ಅರಸನ ಅಪ್ಪಣೆಯ ಪ್ರಕಾರ ಹುಷಾಯನು ಹಿಂತಿರುಗಿ ಹೋಗಿ ಅಬ್ಸಲೋಮನು ಮತ್ತೊಂದು ಕಡೆಯಿಂದ ಯೆರೂಸಲೇಮನ್ನು ಸೇರಿದಾಗ ಇವನು ಇನ್ನೊಂದು ಕಡೆಯಿಂದ ಯೆರೂಸಲೇಮನ್ನು ಹೊಕ್ಕನು.

### ಜೀಬನ ವಂಚನೆ.

[ii ಸಮು. xvi. 1—4.]

ದಾವೀದನು ಗುಡ್ಡದ ಆಚೆಕಡೆ ಸ್ವೋಪದ ತುದಿಯಿಂದ ಇಳಿದು ಹೋಗುತ್ತಿರುವಾಗ ಮೆಫಿಬೊಷೆತನ ಉಗ್ರಾಣಿಕನಾದ ಜೀಬನನ್ನು ಎದುರುಗೊಂಡನು. ಇವನು ಬೆನ್ಯಮೀನನ



ಪ್ರಾಂತ್ಯದಲ್ಲಿ ತನ್ನ ಯಜಮಾನನಿಗೆ ಸೇರಿದ ಜಮೀನಿನ ಕಡೆಯಿಂದ ಬರುತ್ತಿದ್ದನು. ಇವನು ಅರಸನ ಕುಟುಂಬದವರು ಏರುವದಕ್ಕೆ ಸಬರ ಹಾಕಿ ಸಿದ್ಧಮಾಡಿದ ಎರಡು ಕತ್ತೆಗಳನ್ನೂ ಇನ್ನೂರು ರೊಟ್ಟಿಗಳನ್ನೂ ಒಣಗಿದ ದ್ರಾಕ್ಷೇ ಹಣ್ಣಿನ ಎರಡು ಗೊಂಚಲುಗಳನ್ನೂ ಒಂದು ಸಿದ್ದಿಗೆಯ ದ್ರಾಕ್ಷಾರಸವನ್ನೂ ಬಹುಮಾನವಾಗಿ ತಂದಿದ್ದನು. ಆ ಸಮಯಕ್ಕೆ ಅವನು ತಂದ ಪದಾರ್ಥಗಳು ಕೇವಲ ಅನುಕೂಲವಾಗಿದ್ದವು. ಮೆಫಿಬೊಷೆತನು ಯಾಕೆ ಬರಲಿಲ್ಲ ಎಂದು ದಾವೀದನು ಜೀಬನನ್ನು ಕೇಳಲು, ಅವನು ಸುಳ್ಳು ಸುದ್ದಿಯನ್ನು ದಾವೀದನಿಗೆ ತಿಳಿಸಿದನು. ಏನಂದರೆ—ಮೆಫಿಬೊಷೆತನು ಈಗ ಯೆರೂಸಲೇಮಿನಲ್ಲಿ ನಡೆಯುತ್ತಿರುವ ಗಲಭೆಯ ಕಾಲದಲ್ಲಿ ಯೆರೂಸಲೇಮಿನ ಸಿಂಹಾಸನವು ಸೌಲನ ಕುಟುಂಬದಲ್ಲಿ ಉಳುಕೊಂಡಿರುವ ತನಗೆ ಸಿಕ್ಕುವದೆಂಬ ನಿರೀಕ್ಷೆಯಿಂದ ಅಲ್ಲಿಯೇ ಕಾದುಕೊಂಡಿದ್ದಾನೆಂದು ಹೇಳಿದನು. ಅರಸನು ಇದನ್ನು ಕೇಳಿ ಅತ್ಯಾತುರದಿಂದ ಮೆಫಿಬೊಷೆತನು ದಂಗೆಗಾರರ ಪಕ್ಷದಲ್ಲಿದ್ದಾನೆಂದು ನೆನಸಿ ಮೆಫಿಬೊಷೆತನ ಸ್ವಾಸ್ಥ್ಯಗಳನ್ನೆಲ್ಲಾ ಕಿತ್ತುಕೊಂಡು ಜೀಬನು ಮಾಡಿದ ಬಹುಮಾನಕ್ಕೆ ಪ್ರತಿಫಲವಾಗಿ ಕೊಟ್ಟುಬಿಟ್ಟನು.

### ಗೇರನ ಮಗನಾದ ಷಿಮ್ಯೈನ ದೂಷಣೆ.

[ii ಸಮು. xvi. 5—14.]

ದಾವೀದನೂ ಆತನ ಪರಿವಾರದವರೂ ಚಿಕ್ಕ ಪಟ್ಣವಾದ ಬಾಹುರಿಮಿಗೆ ಬಂದಾಗ ಸೌಲನ ಜ್ಞಾತಿಯಾಗಿದ್ದ ಷಿಮ್ಯೈ ಎಂಬೊಬ್ಬ ಮನುಷ್ಯನು ಇವರ ಮೇಲೆ ಕಲ್ಲುಗಳನ್ನು ಎಸೆಯುತ್ತಾ, ದಾವೀದನು ಸೌಲನ ಕುಟುಂಬವನ್ನು ಕ್ರೂರವಾಗಿ ನಡಸಿದನೆಂದು ಹೇಳಿ ಪ್ರತಿಯಾಗಿ ಅವನನ್ನು ಶಪಿಸ ತೊಡಗಿದನು. ಬಹುಶಃ ದಾವೀದನು ಸೌಲನ ಕುಟುಂಬದ ಏಳು ಮಂದಿಯನ್ನು ಗಿಬ್ಯೋನ್ಯರು ಕೊಲ್ಲುವ ಹಾಗೆ ಒಪ್ಪಿಸಿ ಕೊಟ್ಟದಕ್ಕಾಗಿ ಇವನು ಹೀಗೆ ಮಾಡಿರ ಬಹುದು. ಇಲ್ಲವಾದರೆ ಸೌಲನ ಕುಟುಂಬದವರಲ್ಲಿ ಮತ್ಯಾರನ್ನೂ ದಾವೀದನು ಕೊಲ್ಲಿಸಿದ ಹಾಗೆ ಕಾಣಬರುವದಿಲ್ಲ. ದಾವೀದನ ಹಿಂಬಾಲಕರಲ್ಲೊಬ್ಬನಾದ ಅಬಿಷಾಯನು ಇದನ್ನು ನೋಡಿ, "ಈ ದೂಷಕನನ್ನು ಕೊಲ್ಲುವುದಕ್ಕೆ ಅಪ್ಪಣೆಯಾಗ ಬೇಕು" ಎಂದು ಕೇಳಿಕೊಂಡನು. ಆದರೆ ದಾವೀದನು ಈಗ ತನ್ನನ್ನು ತಗ್ಗಿಸಿಕೊಳ್ಳುವದೇ ಧರ್ಮವೆಂತಲೂ, ಈ ಸಂಕಷ್ಟವು ನಿಸ್ಸಂದೇಹವಾಗಿ ದೇವರಿಂದ ತನ್ನ ಮೇಲೆ ಕಳುಹಿಸಲ್ಪಟ್ಟದೆಯೆಂತಲೂ ಅದರಿಂದ ತಪ್ಪಿಸಿಕೊಳ್ಳುವದಕ್ಕೆ ಆತುರಪಡಬಾರದೆಂತಲೂ ಹೇಳಿದನು. "ನನ್ನ ಸ್ವಂತ ಮಗನೇ ನನ್ನ ಪ್ರಾಣವನ್ನು ತೆಗೆದುಕೊಳ್ಳುವದಕ್ಕೆ ಪ್ರಯತ್ನಿಸುತ್ತಿರುವಾಗ ಸ್ವಜನರ ಪಕ್ಷವಾಗಿ ಪ್ರತೀಕಾರ ಮಾಡಬೇಕೆಂದು ಹೊರಟಿರುವ ಈ ಬೆನ್ಯಮೀನಿನವನು ನನ್ನನ್ನು ದೂಷಿಸುವದು ಸೋಜಿಗವೋ? ನಾನು ತಾಳ್ಮೆಯನ್ನು ಧರಿಸಿದರೆ ಈ ಕಷ್ಟದೊಳಗಿಂದ ನನಗೆ ಲಾಭವೇ ಪ್ರಾಪ್ತಿಸ ಬಹುದು" ಎಂದು ದೈನ್ಯಭಾವದಿಂದ ನುಡಿದನು. ಹೀಗೆ ದಾವೀದನು ಆ ದುಷ್ಟನು ತನ್ನ ಮನಸ್ಸಿಗೆ ಬಂದಷ್ಟು ಕೋಪಮಾಡಲಿ ಎಂದು ಇಂಬು ಕೊಟ್ಟನು. ತದನಂತರ ದಾವೀದನು ಪರಿವಾರದ ಸಂಗಡ ಸೂರ್ಯನು ಅಸ್ತಮಿಸುವದಕ್ಕಿಂತ ಮುಂಚೆಯೇ ಯೋರ್ದನಿನ

Digitized by ROJA MUTHIAH RESEARCH LIBRARY

ಸಮೀಪದಲ್ಲಿ ವಿಶೇಷವಾಗಿ ಜನಸಂಚಾರವಿಲ್ಲದ ಸ್ಥಳವನ್ನು ಸೇರಿ ಇಲ್ಲಿ ಶತ್ರುಬಾಧೆಯೇನೂ ಇರಲಾರದೆಂದೆಣಿಸಿ ಮೊಕ್ಕಾಂಮಾಡಿ, ವಿಶ್ರಮಿಸಿ ಕೊಂಡನು.

### ಅಬ್ಸಲೋಮನು ಯೆರೂಸಲೇಮಿಗೆ ಬಂದದ್ದು.

[ii ಸಮು. xvi. 15—xvii. 1—14.]

ಅತ್ತ ಅಬ್ಸಲೋಮನೂ ದಂಗೆಗಾರರೂ ಯೆರೂಸಲೇಮನ್ನು ಸೇರಿ ಅದನ್ನು ಸ್ವಾಧೀನ ಮಾಡಿಕೊಂಡಿದ್ದರು. "ಅರಸನು ನಿರಂತ್ರ ಬಾಳಲಿ" ಎಂದು ಆರ್ಭಟಿಸಿ ಅಬ್ಸಲೋಮನನ್ನು ವಂದಿಸಿದವರೊಳಗೆ ಹೂಷಾಯನು ಮೊದಲನೆಯವನಾಗಿದ್ದನು. ಅಬ್ಸಲೋಮನು ಮೊದಲು ಇವನಲ್ಲಿ ಸಂಶಯ ಪಟ್ಟು—ನಿನ್ನ ಸ್ನೇಹಿತನನ್ನು ಇಷ್ಟು ಶೀಘ್ರವಾಗಿ ತ್ಯಜಿಸಿ ಬಿಟ್ಟೆಯಾ? ಎಂದು ಅವನನ್ನು ಕೇಳಿದನು. ಅದಕ್ಕೆ ಆ ಇಚ್ಛಕನು ತಾನು ಅಬ್ಸಲೋಮನಿಗೇ ಸ್ನೇಹಿತನಾಗಿದ್ದಂತೆ ಚನ್ನಾಗಿ ನಟಿಸಿದುದರಿಂದಲೂ, ಆ ಸಮಯದಲ್ಲಿ ಅಬ್ಸಲೋಮನು ಜಯೋನ್ಮತ್ತನಾಗಿ ಯಾರಾದರೂ ತನಗೆ ಸಹಾಯ ಮಾಡುತ್ತೇವಂದರೆ ಅವರ ಮಾತುಗಳನ್ನು ಪೂರ್ಣವಾಗಿ ನಂಬುವವನಾಗಿದ್ದದರಿಂದಲೂ ಹೂಷಾಯನ ಮಾತುಗಳನ್ನು ನಂಬಿದನು. ಅನಂತರ ಅಬ್ಸಲೋಮನು ಇನ್ನು ಮುಂದೆ ಏನು ಮಾಡಬೇಕೆಂದು ತನ್ನ ಮಂತ್ರಿಗಳಲ್ಲಿ ಆಲೋಚನೆ ಕೇಳಿದಾಗ, ಅಹಿತೋಫೆಲನು ಅವನಿಗೆ ಪ್ರತ್ಯುತ್ತರವಾಗಿ ಹೇಳಿದ್ದೇನಂದರೆ—ಮೊಟ್ಟಮೊದಲು ಜನರೆಲ್ಲರು ಅಬ್ಸಲೋಮನಿಗೂ, ದಾವೀದನಿಗೂ ತೀರದ ಕಲಹವು ಇದೆ ಎಂದು ತಿಳುಕೊಳ್ಳುವ ಹಾಗೆ ಯಾವದಾದರೊಂದು ಕಾರ್ಯದಿಂದ ಪ್ರಕಟಿಸಿದರೆ ಆಗ ಜನರೆಲ್ಲರು ನಿನಗೆ ಒಳಪಡುವರು, ನಿನ್ನ ಸ್ಥಾನವು ಭದ್ರವಾಗಿರುವದೆಂದು ಹೇಳಿ ಕೊಟ್ಟನು. ಆದದರಿಂದ ದಾವೀದನು ಅರಮನೆಯಲ್ಲಿ ಬಿಟ್ಟುಹೋದ ಹತ್ತು ಮಂದಿ ಗುಲಾಮ ಸ್ತ್ರೀಯರನ್ನು ಅಬ್ಸಲೋಮನು ತನ್ನ ಅಂತಃಪುರ ಸ್ತ್ರೀಯರನ್ನಾಗಿ ಮಾಡಿಕೊಳ್ಳ ಬೇಕು, ಮತ್ತು ಅದೇ ರಾತ್ರಿಯಲ್ಲಿ ೧೨೦೦೦ ಮಂದಿಯೊಡನೆ ದಾವೀದನನ್ನು ಬೆನ್ನಟ್ಟಬೇಕು. ಈ ಪ್ರಕಾರ ಅರಸನು ಚಿಕ್ಕ ಪರಿವಾರದ ಸಮೇತ ಮಾರ್ಗಾಯಾಸದಿಂದ ಸುಲಭವಾಗಿ ಅಬ್ಸಲೋಮನಿಗೆ ಒಳಬೀಳುವನು. ಆಗ ಸಂಘಟಿಸುವ ಯುದ್ಧದಲ್ಲಿ ಅರಸನೊಬ್ಬನು ಕೊಲ್ಲಲ್ಪಟ್ಟರೆ ಸಾಕು, ಯುದ್ಧಮಾಡಲಗತ್ಯವೇ ಇರುವುದಿಲ್ಲ. ಹೀಗೆ ಮಾಡಿದ್ದಾದರೆ, "ಮದುವಣಗಿತ್ತಿಯು ಮದುವಣಿಗನ ಬಳಿಗೆ ಬರುವಪ್ಪಂದ" ಎಲ್ಲಾ ಜನರನ್ನು ಅಬ್ಸಲೋಮನ ಪಾದಗಳ ಬಳಿಗೆ ತರಬಲ್ಲೆನು ಎಂದು ಅಹಿತೋಫೆಲನು ನುಡಿದ ಆಲೋಚನೆಯನ್ನು ಕೂಡಿದ್ದವರೆಲ್ಲರು ಒಪ್ಪಿಕೊಂಡರು. ಹೂಷಾಯನ ಆಲೋಚನೆಯು ಏನಾಗಿದ್ದೀತೋ ಕೇಳೋಣ ಎಂದು ಅವನನ್ನು ವಿಚಾರಿಸುವಲ್ಲಿ, ಅವನು—ದಾವೀದನೂ ಅವನ ಜನರೂ ಬಹಳ ಕಾಲದಿಂದ ಯುದ್ಧಮಾಡಿ ಪಳಗಿದವರು, ಪ್ರಕೃತದಲ್ಲಿ ಮಹಾ ಕೋಪಿಷ್ಠರಾಗಿ ಕೇವಲ ಧೈರ್ಯವನ್ನೂ ಸಾಹಸವನ್ನೂ ತಾಳಿರುವರು, ಆದದರಿಂದ ಅವರನ್ನು ಕೂಡಲೆ ಬೆನ್ನಟ್ಟುವದನ್ನು ಮನನ ಮಾಡಬೇಕು. ಯುದ್ಧದಲ್ಲಿ ಅರಸನು ಸೈನ್ಯದ ಸಂಗಡ ಇರಬಾರದೆಂಬುವ ಪದ್ಧತಿಯ ಪ್ರಕಾರ ದಾವೀದ ರಾಜನನ್ನು ಅವರು ಯಾವದೋ ಒಂದು ಕುಣಿಯೊಳಗಾಗಲಿ ಗುಹೆಯೊಳಗಾಗಲಿ ಅಡಿಗಿಸಿಟ್ಟಿರುವರು, ಅರಸನನ್ನು ಕೊಲ್ಲುವದಕ್ಕೆ



ಮುಂಚೆ ಆತನ ಮೈಗಾವಲಿನ ಸೈನ್ಯದ ಸಂಗಡ ಹೋರಾಡಬೇಕು. ಹಾಗೆ ಹೋರಾಡುವಲ್ಲಿ ಅಪಜಯವಾದರೆ ನಮ್ಮ ಸೈನ್ಯವೆಲ್ಲವು ಮನಗುಂದುವದು. ಆದಕಾರಣ ಸೈನಿಕರ ಸಂಖ್ಯೆಯನ್ನು ಹೆಚ್ಚಿಸಿ ಜಯವನ್ನು ಪಡೆಯಬೇಕು. ಹುಲ್ಲಿನ ಮೇಲೆ ಮಂಜಿನ ಹನಿಗಳು ಹ್ಯಾಗೆ ಕವಿದುಕೊಳ್ಳುತ್ತವೋ ಹಾಗೆಯೇ ದಾವೀದನ ಸೈನ್ಯದ ಮೇಲೆ ಲಕ್ಷಕಟ್ಲೆಯಾಗಿ ನಮ್ಮ ಸೈನ್ಯವು ಕವಿಯಬೇಕು. ಆತನು ಒಂದುವೇಳೆ ಕೋಟೆಯೊಳಗೆ ಸೇರಿಕೊಂಡರೂ ಆ ಕೋಟೆಗೆ ಮುತ್ತಿಗೆ ಹಾಕಿ ಅದನ್ನು ಹೊಳೆಯೊಳಗೆ ಎಳೆದು ಹಾಕುವಷ್ಟು ಬಲವಾದ ಸೈನ್ಯದಿಂದ ಆತನ ಮೇಲೆ ಯುದ್ಧಕ್ಕೆ ಹೋಗಬೇಕು ಎಂಬುದಾಗಿ ಆಲೋಚನೆ ಹೇಳಿ ಕೊಟ್ಟನು. ಇವನ ಆಲೋಚನೆಯು ಅಬ್ಸಲೋಮನಿಗೆ ಇತರರ ಆಲೋಚನೆಗಿಂತಲೂ ಒಳ್ಳೇದಾಗಿ ತೋಚಿದ್ದರಿಂದ ಈ ಬುದ್ಧಿಗೇಡಿಯಾದ ಯೌವನಸ್ಥನು ಅವನ ಆಲೋಚನೆಯನ್ನು ಅನುಸರಿಸಿ ಕೆಲವು ದಿನಗಳ ವರೆಗೂ ಮಾತ್ರ ಅರಸನಾಗಿ ಆಳುವ ಸುಖವನ್ನು ಸಂಪಾದಿಸಿದನು. ತನ್ನ ಸ್ಥಾನವು ಭದ್ರವಾಗ ಬೇಕಾದರೆ ತಾಮಸವಿಲ್ಲದೆ ಕೈಮಾಡ ಬೇಕು, ತಡೆಮಾಡಿದ್ದೇಯಾದರೆ ಪ್ರಜೆಗಳು ತಮ್ಮ ಪೂರ್ವದ ಅರಸನ ಪಕ್ಷವಾಗಿ ತಮ್ಮ ಮನಸ್ಸನ್ನು ತಿರುಗಿಸಿಕೊಳ್ಳುವರೆಂಬುದನ್ನು ತಿಳಿಯದೆ ಹೋದನು.

### ಅಹಿತೋಫೆಲನ ಆತ್ಮಹತ್ಯ.

[ii ಸಮು. xvii. 23]

ಹೂಷಾಯನ ಆಲೋಚನೆಯಂತೆ ಅಬ್ಸಲೋಮನು ಮಾಡುವನೆಂದು ಅಹಿತೋಫೆಲನು ತಿಳುಕೊಂಡಾಗ ಅಬ್ಸಲೋಮನ ಕಾರ್ಯವು ಭಂಗವಾಯಿತೆಂದು ಅರಿತವನಾಗಿ ನಿರಾಶಾಪೀಡಿತನಾಗಿ ಸ್ವಸ್ಥಳವಾದ ಗೈಲೊಕ್ಕೆ ಬಂದು ಮರಣಶಾಸನವನ್ನು ಬರೆದು, ತನ್ನ ಆಸ್ತಿಯನ್ನೆಲ್ಲ ಹಂಚಿಕೊಟ್ಟು ನೇಣು ಹಾಕಿಕೊಂಡು ಸತ್ತನು.

### ದಾವೀದನು ಯೋರ್ದನನ್ನು ದಾಟಿಹೋದದ್ದು.

[ii ಸಮು. xvii. 23.]

ಹೂಷಾಯನು ತನ್ನ ಆಲೋಚನೆಯನ್ನು ಅಬ್ಸಲೋಮನಿಗೆ ತಿಳಿಸಿದ ಉತ್ತರಕ್ಷಣನಲ್ಲೇ, ಅವನು ಯಾರ ಆಲೋಚನೆಯ ಪ್ರಕಾರ ನಡೆಯುವನೋ ಎಂಬುವದನ್ನು ತಿಳುಕೊಳ್ಳುವದಕ್ಕಿಂತ ಮುಂಚೆಯೇ, ತನ್ನ ಪಕ್ಷದವರಾದ ಯಾಜಕರ ಬಳಿಗೆ ಸಮಾಚಾರವನ್ನು ಕಳುಹಿಸಿದನು. ಮತ್ತು ಅವರು ತಮ್ಮ ಕುಮಾರರಾದ ಅಹಿಮಾಜನೂ ಯೋನತಾನನೂ ದಾವೀದನ ಬಳಿಗೆ ಹೋಗಿ ಈ ಸಮಾಚಾರವನ್ನು ತಿಳಿಸಿ ಅಬ್ಸಲೋಮನು ಅಕಸ್ಮಾತ್ತಾಗಿ ಬಂದು ಕವಿಯುವದಕ್ಕೆ ಮೊದಲೆ ಯೋರ್ದನನ್ನು ದಾಟಿ ಹೋಗುವಂತೆ ಹೇಳಿ ಕಳುಹಿಸಿದರು. ಈ ಇಬ್ಬರು ಯೌವನಸ್ಥರು ಯಾವ ಸಮಾಚಾರವಾದರೂ ತಮಗೆ ತಿಳಿಯುವ ವರೆಗೆ ಪಟ್ಣದ ಹೊರಗೇ ಎನ್ ರೋಗೆಲ್ ಎಂಬ ಅಗಸರ ಭಾವಿಯ ಹತ್ತರ ಹಗಲೆಲ್ಲಾ ಅಡಗಿಕೊಂಡಿದ್ದರು. ಆಗ ಒಬ್ಬ ಸ್ತ್ರೀಯು ಬಂದು ಹೂಷಾಯಿಯ ಆಜ್ಞೆಗಳನ್ನು ಇವರಿಗೆ ತಿಳಿಸಿದಳು. ಇವರು ಆ ಕ್ಷಣವೇ ಯೋರ್ದನಿನ ಕಡೆಗೆ ಹೊರಟರು. ಇವರು ಇಷ್ಟು ಜಾಗ್ರತೆಯಾಗಿದ್ದಾಗ್ಯೂ ಅಬ್ಸ

Digitized by ROJA MUTHIAH RESEARCH LIBRARY

ಲೋಮನ ಕಡೆಯವರು ಇವರನ್ನು ಕಂಡು ಅನುಮಾನಿಸಿ ಹಿಂದಟ್ಟಿ ಹೋದರು. ಇವರು ತಪ್ಪಿಸಿಕೊಂಡು ಬಾಹುರಿವ್ ಎಂಬ ಸ್ಥಳವನ್ನು ಸೇರಿದಾಗ ಒಬ್ಬ ಸ್ತ್ರೀಯು ಅವರನ್ನು ಮನೆಯ ಅಂಗಳದಲ್ಲಿ ಬತ್ತಿ ಹೋಗಿದ್ದ ಒಂದು ಭಾವಿಯೊಳಗೆ ಬಚ್ಚಿಟ್ಟು ಆ ಭಾವಿಯ ಮೇಲೆ ಒಂದು ಚಾಪೆಯನ್ನು ಹಾಸಿ, ಚಾಪೆಯ ಮೇಲೆ ಧಾನ್ಯವನ್ನು ಒಣಗಿಸುವದಕ್ಕೆ ಹರಡಿದಳು. ಅಬ್ಸಲೋಮನ ಕಡೆಯವರು ಬಂದು ಅವಳನ್ನು ಅವರ ವಿಷಯವಾಗಿ ಕೇಳಿದಾಗ—ಅವರು ಈ ಹಳ್ಳವನ್ನು ದಾಟಿ ಹೋದರೆಂದು ಅವಳು ಹೇಳಿಬಿಟ್ಟಳು. ತದನಂತರ ಈ ಯೌವನಸ್ಥರಿಬ್ಬರು ದಾವೀದನ ಪಾಳೆಯವನ್ನು ಸುರಕ್ಷಿತವಾಗಿ ಸೇರಿ ಎಲ್ಲಾ ಸಮಾಚಾರವನ್ನು ದಾವೀದನಿಗೆ ತಿಳಿಸಿದರು. ಆ ಸುದ್ದಿಯನ್ನು ಕೇಳುತ್ತಲೆ ದಾವೀದನು ಯೋರ್ದನಿನ ಹಾಯಗಡವನ್ನು ದಾಟಿ, ಕೋಟೆಯುಳ್ಳ ಮಹಾನಾಯಿಮ್ ಪಟ್ಟಣಕ್ಕೆ ಬಂದನು. ಇಲ್ಲಿ ದಾವೀದನಿಗೆ ಬೇಕಾದ ಹಾಸಿಗೆಗಳು ಅಡಿಗೆಯ ಸಾಮಾನು, ಊಟದ ಸಾಮಗ್ರಿ, ಮೊದಲಾದವುಗಳನ್ನೆಲ್ಲಾ ಸಮೀಪದಲ್ಲಿದ್ದ ಐಶ್ವರ್ಯವಂತರಾದ ಮೂವರು ಒದಗಿಸಿಕೊಟ್ಟರು. ಆ ಮೂವರ ಹೆಸರುಗಳ್ಯಾವವಂದರೆ—ರಾಬ್ಬತ್ ಅಮ್ಮೋನಿಸವನಾದ ಶೋಬಿ (ಬಹುಶಃ ಇವನು ಅಮ್ಮೋನಿಯರ ಅರಸನ ಸಹೋದರನಾಗಿರ ಬಹುದು), ಲೋಡಿಬಾರಿನ ಮಾಖಿರನು, ಮತ್ತು ರೋಗಿಲಿಮಿನ ಬಾರ್ಜಿಲಾಯನು.

## ಅಬ್ಸಲೋಮನು ಅಪಜಯ ಹೊಂದಿ ಮೃತನಾದದ್ದು.

[ii ಸಮು. xviii. 1—18.]

ಅಬ್ಸಲೋಮನು ಕೆಲವು ದಿವಸಗಳ ವರೆಗೂ ಯೆರೂಸಲೇಮಿನೊಳಗೆ ಓಲಗವನ್ನು ನಡಸಿದ ತರುವಾಯ ಯೋರ್ದನನ್ನು ದಾಟಿ ತನ್ನ ತಂದೆಯನ್ನು ಎದುರಿಸುವದಕ್ಕೆ ಹೊರಟನು. ಅಬ್ಸಲೋಮನು ಇಸ್ಮಯೇಲ್ಯನಾಗಿದ್ದ ಇತ್ರನಿಗೆ ದಾವೀದನ ಸಹೋದರಿಯಿಂದ ಹುಟ್ಟಿದ ಅಮಾಸನನ್ನು ತನ್ನ ಮುಖ್ಯ ಸೇನಾನಿಯಾಗಿ ನೇಮಿಸಿದನು. ಕೆಲವರು ಊಹಿಸುವ ಹಾಗೆ ಅಬ್ಸಲೋಮನು ಮಹಾನಾಯಿಮನ್ನು ಮುತ್ತಿಗೆ ಹಾಕಿದನೋ ಇಲ್ಲವೋ ನಿಶ್ಚಯಿಸಲಶಕ್ಯವು. ಈ ಮಧ್ಯ ಕಾಲದಲ್ಲಿ ರಾಜಭಕ್ತಿಯುತರಾದವರೆಲ್ಲರು ದಾವೀದನನ್ನು ಸೇರಲಾಗಿ ಆತನ ಕಡೆಯ ಸೈನ್ಯವು ದೊಡ್ಡದಾಯಿತು. ಮಹಾನಾಯಿಮಿಗೆ ಕೊಂಚ ದೂರದಲ್ಲಿದ್ದ "ಎಫ್ರಾಯಿಮ್ ಅಡವಿ" ಎಂದು ಕರೆಯಲ್ಪಟ್ಟ ಮಹಾರಣ್ಯದಲ್ಲಿಯೋ ಅಥವಾ ಕಾಡಿನಲ್ಲಿಯೋ ನಿರ್ಣಯವಾದ ಯುದ್ಧವು ನಡೆಯಿತು. ದಾವೀದನ ಸೈನಿಕರೇ ಯುದ್ಧವನ್ನು ಆರಂಭಿಸಿದವರಾಗಿದ್ದರು. ಯಾಕಂದರೆ ಆತನು ತನ್ನ ಸೈನ್ಯವನ್ನು ಮೂರು ವಿಭಾಗಗಳಾಗಿ ಮಾಡಿ ಯೋವಾಬನು, ಅಬಿಷಾಯಿ, ಇತ್ತಾಯಿ ಎಂಬುವ ಮೂವರು ಸೇನಾನಿಗಳ ವಶಕ್ಕೊಪ್ಪಿಸಿ ಮೂರು ದಿಕ್ಕುಗಳಿಂದ ಅವರ ಮೇಲೆ ಬೀಳುವ ಹಾಗೆ ನೇಮಿಸಿದನು. ದಾವೀದನು ತಾನೇ ರಣಕ್ಕೆ ಬರುವೆನೆಂದು ಹೇಳಿದಾಗ ಜನರು ಪದ್ಧತಿಯ ಪ್ರಕಾರ ಅರಸನು ಯುದ್ಧದಲ್ಲಿ ಸೇರಕೂಡದೆಂದು ಆತನನ್ನು ತಡೆದರು. ಅರಸನು ಹೆಬ್ಬಾಗಲಿನ ಹತ್ತರ ನಿಂತು ತನ್ನ ಮುಂದೆ ಹಾದು ಹೋಗುತ್ತಿದ್ದ ಸೈನಿಕರನ್ನು ನೋಡುತ್ತಾ, ಸಾಧ್ಯವಾದರೆ ಅಬ್ಸಲೋಮನನ್ನು ಮಾತ್ರ ಕೊಲ್ಲದೆ ಬಿಡಬೇಕೆಂದು ಒಂದೊಂದು ಗುಂಪಿನವರನ್ನೂ ಬೇಡಿಕೊಂಡನು. ಅಬ್ಸಲೋಮನ ಪಕ್ಷದವರು ಅಕಸ್ಮಾತ್ತಾಗಿ ದಾವೀದನ ಸೈನ್ಯವು ತಮ್ಮ ಮೇಲೆ ಬಂದುದನ್ನು ನೋಡಿ ಬಹಳ ಗಾಬರಿಯಿಂದ ದಿಕ್ಕು ದಿಕ್ಕಿಗೆ ಓಡುವದಕ್ಕೆ ಹತ್ತಿದರು. ದಾವೀದನವರು ಅಬ್ಸಲೋಮನ ಸೈನ್ಯದಲ್ಲಿ ಮಾಡಿದ ಸಂಹಾರವು ಅಪರಿಮಿತವಾಗಿದ್ದಿತು. ಯುದ್ಧದೊಳಗೆ ಎಷ್ಟುಮಂದಿ ಸತ್ತರೋ ಇನ್ನು ಅಷ್ಟುಮಂದಿ ಕೊಳಚೆ ಭೂಮಿಯಲ್ಲಿಯೂ, ಹೊದರುಗಳಲ್ಲಿಯೂ ಸಿಕ್ಕಿ ಸತ್ತರು. ಸುಮಾರು ೨೦,೦೦೦ ಮಂದಿ ಮಡಿದರೆಂದು ಹೇಳಿದೆ. ಅಬ್ಸಲೋಮನು ಕೂಡ ಪ್ರಾಣಭೀತಿಯಿಂದ ಓಡುತ್ತಿರುವಾಗ ಅವನ ಕತ್ತೆಯು ಒಂದು ಏಲದ ಮರದ ಕೆಳಗೆ ನುಸಿದು ಹೋಗಲು, ಅವನ ಉದ್ದವಾದ ಕೂದಲು ಆ ಮರದಲ್ಲಿ ಸಿಕ್ಕಿಕೊಂಡದರಿಂದ ಕತ್ತೆ ಮುಂದಕ್ಕೆ ಹೊರಟು ಹೋಯಿತು. ಇವನು ಗಿಡದಲ್ಲಿ ಸಿಕ್ಕಿ ನೇತಾಡುತಿದ್ದನು. ದಾವೀದನ ಸೈನಿಕರಲ್ಲೊಬ್ಬನು ಅಬ್ಸಲೋಮನು ಈ ಸ್ಥಿತಿಯಲ್ಲಿರುವದನ್ನು ಕಂಡು ಅರಸನ ಆಜ್ಞೆಯನ್ನು ಜ್ಞಾಪಕಮಾಡಿಕೊಂಡು, ಅವನನ್ನು ಕೊಲ್ಲದೆ ಸೇನಾನಿಯಾದ ಯೋವಾಬನಿಗೆ ಸುದ್ದಿಯನ್ನು ಮುಟ್ಟಿಸಿದನು. ಯೋವಾಬನು ಅರಸನ ಆಜ್ಞೆಯನ್ನು ಲಕ್ಷ್ಯಮಾಡದೆ ತನಗೆ ಸುದ್ದಿತಂದ ಭಟನ ಮೇಲೆ ಕೋಪಿಸಿಕೊಂಡು ತಾನು ಹೋಗಿ ಮೂರು ಅಂಬುಗಳನ್ನು ಬಿಟ್ಟು ಅಬ್ಸಲೋಮನನ್ನು ಕೊಂದು ಹಾಕಿದನು. ಆಗ ಯೋವಾಬನ ಆಯುಧಗಳನ್ನು ಹೊರುವವರು ಬಂದು ಅಬ್ಸಲೋಮನ ಶವವನ್ನು ಕೆಳಕ್ಕೆ ಇಳಿಸಿ ಅದನ್ನು ಹಾಳುಕುಣಿಯಲ್ಲಿ ಹಾಕಿ, ಅವಮಾನಕರವಾದ ಮರಣಕ್ಕೊಳಪಟ್ಟವನೆಂದು ಹೇಳಿ, ತಮ್ಮ ಅಸಹ್ಯವನ್ನು ತೋರಿಸುವ ಬಗ್ಯೆ ಅವನ ಶವವನ್ನು ಹಾಕಿದ ಸ್ಥಳದ ಮೇಲೆ ಕಲ್ಲುಗಳನ್ನು ಗುಡ್ಡೆ ಹಾಕಿದರು. ಹೀಗೆ ದುರಾಶಾಮಗ್ನನಾಗಿದ್ದ ಆ ಯುವ ರಾಜನ ಜೀವಮಾನವು ಮುಗಿಯಿತು. ಇವನ ಮರಣಕ್ಕೆ ಮುಂಚೆಯೇ ಅವನ ಮಕ್ಕಳು ಮೃತರಾಗಿದ್ದರೆಂದು ತೋರುವದು. ಇವನು ತಾನು ಜೀವದಿಂದಿರುವಾಗಲೇ ತನ್ನ ನಾಮ ಜ್ಞಾಪಕಾರ್ಥವಾಗಿ "ಅರಸನ ಕಣಿವೆ" ಎಂಬಲ್ಲಿ ಒಂದು ದೊಡ್ಡ ಸಮಾಧಿಯನ್ನು ಸಿದ್ಧಮಾಡಿಸಿಕೊಂಡಿದ್ದನು. ಆದರೆ ಇದು ಕೂಡ ಅವನು ಮಾಡಿದ ಅನೇಕ ಬುದ್ಧಿಗೇಡಿತನದ ಕಾರ್ಯಗಳಲ್ಲೊಂದಾಗಿತ್ತು. ಯಾಕಂದರೆ ದುರ್ಮಾರ್ಗಿಯ ಕೀರ್ತಿಯನ್ನು ಅವನೊಂದಿಗೆ ನಿರ್ನಾಮವಾಗಿ ಅಳಿದು ಹೋಗಗೊಡುವದೇ ಲೇಸು.



## ದಾವೀದನು ಅಬ್ಸಲೋಮನಿಗಾಗಿ ದುಃಖಿಸಿದುದು.

[ii ಸಮು. xviii. 19—33; xix. 1—8.]

ಅಬ್ಸಲೋಮನು ಕೊಲ್ಲಲ್ಪಟ್ಟ ಬಳಿಕ, ಯೋವಾಬನು ಶತ್ರುವಿನ ಬೆನ್ನಟ್ಟುವದನ್ನು ನಿಲ್ಲಿಸಬೇಕೆಂದು ಆಜ್ಞೆಮಾಡಿದನು. ದಂಗೆಗೆ ಕಾರಣನಾದ ಅಬ್ಸಲೋಮನೇ ಹತನಾದ ಮೇಲೆ ಅವನ ಭಟರನ್ನು ಕೊಲ್ಲುವದಕ್ಕೆ ಯೋವಾಬನಿಗೆ ಇಷ್ಟವಿರಲಿಲ್ಲ. ಆಗ ಈ ವಿಜಯದ ಸಮಾಚಾರವನ್ನು ತಕ್ಕೊಂಡು ಮಹಾನಾಯಿಮಿಗೆ ಹೋಗುವುದಾಗಿ ಅಹಿಮಾಚನು ಯೋವಾಬನ ಅಪ್ಪಣೆಯನ್ನು ಕೇಳಿದನು. ಒಳ್ಳೇ ಸಮಾಚಾರವನ್ನು ತಂದವನಿಗೆ ಯಾವಾಗಲೂ ಸನ್ಮಾನವಿರುತಿತ್ತು. ದುಃಖದ ಸಮಾಚಾರವನ್ನು ತಂದವನಲ್ಲಿ ಜನರಿಗೆ ಬಹು ಕೋಪವಿರುವದು.



Digitized by ROJA MUTHIAH RESEARCH LIBRARY

ಅಬ್ಸಲೋಮನ ಮರಣದ ಸುದ್ದಿಯು ದಾವೀದನಿಗೆ ಬಹು ಅಹಿತವಾಗಿರುವದರಿಂದ ಯಾಜಕನಾದ ಅಹಿಮಾಚನು ಒಯ್ಯುವದಕ್ಕೆ ಯೋವಾಬನು ಸಮ್ಮತಿಸದೆ ತನ್ನ ಜೀತಗಾರನಾದ ಒಬ್ಬ ಐತಿಯೋಪ್ಯನನ್ನು ಈ ಕಾರ್ಯಕ್ಕೆ ನೇಮಿಸಿ ಕಳುಹಿದನು. ಆ ಐತಿಯೋಪ್ಯನು ಹೊರಟು ಹೋದನಂತರ ಅಹಿಮಾಚನು ತನ್ನನ್ನು ಕಳುಹಿಸುವ ಹಾಗೆ ಯೋವಾಬನನ್ನು ಪುನಃ ಬಲಾತ್ಕಾರ ಮಾಡಿದ್ದರಿಂದ ಕಡೆಗೆ ಅವನು ಒಪ್ಪಿಕೊಂಡನು. ಅಹಿಮಾಚನು ಓಟದಲ್ಲಿ ಗಟ್ಟಿಗನಾಗಿದ್ದುದರಿಂದ ಐತಿಯೋಪ್ಯನನ್ನು ಹಿಂದೆ ಹಾಕಿ ಮಹಾನಾಯಿಮನ್ನು ಮೊದಲು ಸೇರಿದನು. ಇಲ್ಲಿ ದಾವೀದನು ಯುದ್ಧ ಸಮಾಚಾರವನ್ನು ಕೇಳುವದಕ್ಕೆ ಅತ್ಯಾತುರದಿಂದ ಪಟ್ಣದ ಹೆಬ್ಬಾಗಲಿನ ಬಳಿಯಲ್ಲಿ ಕಾದುಕೊಂಡಿದ್ದನು. ಅಹಿಮಾಚನು ಬರುವದನ್ನು ನೋಡಿ ಕೋವರದವನು — ಯಾರೋ ಒಬ್ಬನು ಪಟ್ಣಣದ ಕಡೆಗೆ ಓಡಿ ಬರುತ್ತಾ ಇದ್ದಾನೆಂದು ದಾವೀದನಿಗೆ ತಿಳಿಸಿದಾಗ ಆತನು ಆ ಕ್ಷಣವೆ ಅವನು ಜಯದ ವರ್ತಮಾನವನ್ನು ತರುವವನೆಂದು ನಿಶ್ಚಯಿಸಿದನು. ಯಾಕಂದರೆ ತನ್ನ ಭಟರು ಯುದ್ಧದಲ್ಲಿ ಸೋತು ಹೋಗಿದ್ದರೆ, ಓಡಿ ಬರುವವರು ಅನೇಕರಾಗಿರುವರೆಂದು ಹೇಳಿದನು. ಅಷ್ಟರೊಳಗೆ ಐತಿಯೋಪ್ಯನು ಓಡಿಬರುವದನ್ನು ನೋಡಿ ಮುಂದೆ ಬರುವವನು ಯಾಜಕನಾದ ಅಹಿಮಾಚನೆಂದರಿತು ಅವನ ಬಾಯಿಯಿಂದ ಶುಭಸಮಾಚಾರವನ್ನು ಕೇಳುವೆನೆಂದು ಅರಸನು ಆಶಾಭರಿತನಾಗಿ ಅವನು ಬಂದಕೂಡಲೆ ಅಬ್ಸಲೋಮನು ಜೀವಿಸಿದ್ಧಾನೋ ಎಂದು ಅವನನ್ನು ಕೇಳಿದನು. ಆಗಲವನು ವಿಜಯದ ವರ್ತಮಾನವನ್ನು ಅರಸನಿಗೆ ತಿಳಿಸಿ, ಅಬ್ಸಲೋಮನ ಮರಣದ ವಿಷಯವನ್ನು ಅರಿಯದವನ ಹಾಗೆ ಮೌನವನ್ನು ತಾಳಿದನು. ಅರಸನು ಐತಿಯೋಪ್ಯನನ್ನು ಸಹಾ ಅದೇ ಪ್ರಶ್ನೆ ಕೇಳಿದಾಗ, ಅವನು — ಯುವರಾಜನು ರಾಜದ್ರೋಹಿಯ ಗತಿಯನ್ನು ಹೊಂದಿದನೆಂದು ಗಂಭೀರಾಭಿಪ್ರಾಯದಿಂದ ಉತ್ತರ ಕೊಟ್ಟನು. ಆ ಕ್ಷಣವೇ ದಾವೀದನು ಯುದ್ಧದ ವಿವರವನ್ನು ಕೇಳುವದಕ್ಕೆ ಇಷ್ಟವಿಲ್ಲದವನಾಗಿ ಹೆಬ್ಬಾಗಲಿನ ಮೇಲೆ ಕಟ್ಟಿದ್ದ ಚಿಕ್ಕ ಕೊಟಡಿಯೊಳಕ್ಕೆ ಹೋಗಿ ಅಬ್ಸಲೋಮನಿಗೆ ಬದಲಾಗಿ ತಾನು ಸತ್ತಿದ್ದರೆ ಚನ್ನಾಗಿತ್ತೆಂದು ಹೇಳಿ ಅವನಿಗೋಸ್ಕರ ಅತ್ತು ಗೋಳಾಡಿದನು. ಹೀಗೆ ಜಯಶಾಲಿಯಾದ ಅರಸನು ಪುತ್ರವಿಯೋಗ ಶೋಕದಲ್ಲಿ ಮಗ್ನನಾದನು. ಈ ಗೋಳಾಟದ ಸುದ್ದಿಯು ದಂಡಿನವರಿಗೆ ತಿಳಿದಾಗ ಜಯವೀರರಾದ ಇವರು ತಾವೇ ಪರಾಜಿತರಾದವರ ಹಾಗೆ ಚಿಕ್ಕ ಚಿಕ್ಕ ಗುಂಪುಗಳಾಗಿ ಪಟ್ಣವನ್ನು ಹೊಕ್ಕರು. ಜಯಶಾಲಿಗಳ ಮೇಲೆ ಸ್ತುತಿ ಪದಗಳನ್ನು ಹಾಡುತ್ತಾ ಅವರನ್ನು ಇದಿರ್ಗೊಳ್ಳುವದಕ್ಕೆ ಸ್ತ್ರೀಯರಾದರೂ, ಗಾಯಕರಾದರೂ, ನಾಟ್ಯದವರಾದರೂ ಬರಲಿಲ್ಲ. ತದನಂತರ ಯೋವಾಬನು ಧೈರ್ಯಗೊಂಡು ಅರಸನು ಹೀಗೆ ಅಬ್ಸಲೋಮನಿಗೋಸ್ಕರ ದುಃಖಮಾಡುವದು ಬಹಳ ಕೇಡಿಗೆ ಕಾರಣವಾಗಿದೆ ಎಂತಲೂ, ವಿಶ್ವಾಸಘಾತುಕನಾದ ಒಬ್ಬ ಮಗನು ಸತ್ತದಕ್ಕಿಂತ ರಾಜಭಕ್ತಿಯುತರಾದ ಅನೇಕ ಭಟರು ಸತ್ತಿದ್ದರೆ ಲೇಸು ಎಂದು ಬಹಿರಂಗವಾಗಿ ಕೋರಿದ ಹಾಗಿದೆ ಎಂತಲೂ, ತನ್ನ ಪ್ರಜೆಗಳು ತನ್ನ ಪ್ರಾಣವನ್ನು ಕಾಪಾಡುವದಕ್ಕೋಸ್ಕರವೂ ರಾಜ್ಯದ ಕೀರ್ತಿಗೋಸ್ಕರವೂ ತಮ್ಮ ಪ್ರಾಣಗಳನ್ನು ಲಕ್ಷಿಸದೆ ಇದ್ದಾಗ್ಯೂ ಸಂತೋಷಪಡುವದನ್ನು ಬಿಟ್ಟು ದುಃಖಪಡುವುದು ನ್ಯಾಯವಲ್ಲವೆಂತಲೂ, ಈ ಕ್ಷಣವೆ ಎದ್ದು ತನ್ನ ಭಟರಿಗೆ ತಕ್ಕ ಬಹುಮಾನವನ್ನು ಮಾಡದಿದ್ದರೆ ಅವರೆಲ್ಲರು



ತನ್ನನ್ನು ಬಿಟ್ಟುಹೋಗಲು ನಿಶ್ಚಯಿಸಿಕೊಂಡಿದ್ಧಾರೆಂತಲೂ ಅರಸನಿಗೆ ಖಂಡಿತವಾಗಿ ಹೇಳಿದನು. ಯೋವಾಬನ ಬುದ್ಧಿಮಾತುಗಳನ್ನು ಅರಸನು ಕೇಳಿ, ಒಡನೆ ಎದ್ದು, ಕೋಟೇಬಾಗಲಿನಲ್ಲಿ ಕೂತುಕೊಂಡು, ಜಯಶಾಲಿಗಳಾದ ಭಟರು ತನ್ನ ಮುಂದೆ ಹಾದು ಹೋಗುತ್ತಿರಲು, ಅವರೆಲ್ಲರಿಗೆ ತನ್ನಿಂದಾದ ಮಟ್ಟಿಗೂ ಸುಪ್ರಸನ್ನನಾಗಿ ಮರ್ಯಾದೆ ಮಾಡಿದನು.

### ದಾವೀದನು ಯೆರೂಸಲೇಮಿಗೆ ತಿರಿಗಿ ಬಂದದ್ದು.

[ii ಸಮು. xix. 9—40.]

ಇಸ್ರಾಯೇಲರು ತಮ್ಮ ಅರಸನಾದ ದಾವೀದನು ತಮಗೆ ಮಾಡಿದ ಉಪಕಾರಗಳನ್ನು ಜ್ಞಾಪಕಮಾಡಿಕೊಂಡು ತಾವು ದುಷ್ಟನಾದ ಅಬ್ಸಲೋಮನ ಪಕ್ಷವಾಗಿ ಸೇರಿಕೊಂಡದ್ದಕ್ಕೋಸ್ಕರ ಲಜ್ಜಾಭರಿತರಾದರು. ದೇಶದ ಉತ್ತರ ಭಾಗದ ಗೋತ್ರಗಳವರು ದಾವೀದನು ಸಿಂಹಾಸನಕ್ಕೆ ತಿರಿಗಿ ಬರುವಂತೆ ಬಿನ್ನಹ ಮಾಡುವದಕ್ಕೆ ಆತನ ಬಳಿಗೆ ರಾಯಭಾರವನ್ನು ಕಳುಹಿಸಿದರು. ಯೆಹೂದನ ಗೋತ್ರದವರು ಮಾತ್ರ ತಮಗೆ ಅಬ್ಸಲೋಮನು ನೇಮಿಸಿದ್ದ ಸೈನ್ಯಾಧಿಪತಿಯಾದ ಅಮಾಸನ ಕೆಳಗೆ ದಾವೀದನಿಗೆ ಮಣಿಯದೆ ಸ್ಥಿರವಾಗಿ ನಿಂತರು. ಆದರೆ ದಾವೀದನು ಅವರ ಮೇಲೆ ಕೈಮಾಡುವದಕ್ಕೆ ಮುಂಚೆ ಅವರ ಸಂಗಡ ಸಮಾಧಾನ ಮಾಡಿಕೊಳ್ಳುವ ಉದ್ದೇಶದಿಂದ ತಾನು ಯೂದಾಯ ಗೋತ್ರಕ್ಕೆ ಸೇರಿದವನೆಂತಲೂ, ಉಳಿದ ಗೋತ್ರಗಳವರು ತಮ್ಮ ಅರಸನನ್ನು ತಿರಿಗಿ ಕರೆದುತರುವದಕ್ಕೆ ಸಮ್ಮತಿಸಿದ್ದಲ್ಲಿ ಅವರು ಮಾತ್ರ ಸಮ್ಮತಿಸದೆ ಇರುವದು ಸರಿಯಲ್ಲವೆಂತಲೂ, ಅಮಾಸನು ತನ್ನ ಸೋದರದಳಿಯನಾಗಿರುವದರಿಂದ ಅವನು ಮಾಡಿದ ತಪ್ಪನ್ನು ಕ್ಷಮಿಸಿ ಯೋವಾಬನಿಗೆ ಬದಲು ಅವನನ್ನು ಸೇನಾನಾಯಕನನ್ನಾಗಿ ನೇಮಿಸುವೆನೆಂತಲೂ ಅವರಿಗೆ ಹೇಳುವ ಹಾಗೆ ತನ್ನ ಯಾಜಕರಾದ ಚದೋಕನನ್ನೂ ಅಬಿಯಾತರನನ್ನೂ ಅವರ ಬಳಿಗೆ ಕಳುಹಿಸಿದನು. ಅದೇಪ್ರಕಾರ ಅವರು ಒಪ್ಪಿ, ಗಿಲ್ಗಾಲಿಗೆ ಬಂದು ವಶವರ್ತಿಗಳಾಗುವದಾಗಿ ಮಾತು ಕೊಟ್ಟರು. ಆದರೆ ಅರಸನು ಗಿಲ್ಗಾಲಿಗೆ ಬಂದಾಗ ಆ ಗೋತ್ರಗಳ ಪ್ರತಿನಿಧಿಗಳಲ್ಲಿ ಯಾರೂ ದಾವೀದನನ್ನು ಇದಿರ್ಗೊಳ್ಳುವದಕ್ಕೆ ಬಂದಿರಲಿಲ್ಲ. ಯಾಕಂದರೆ ಯೂದಾಯದ ಗೋತ್ರದವರು ಇದಕ್ಕೆ ತಕ್ಕ ಏರ್ಪಾಡುಗಳನ್ನು ಮಾಡಿರಲಿಲ್ಲವಾದದರಿಂದ ಬೆನ್ಯವಿಾನನ ಗೋತ್ರವೊಂದು ಹೊರತು ಮಿಕ್ಕಾದವರು ಬರಲಿಲ್ಲ. ಬೆನ್ಯವಿಾನನ ಗೋತ್ರದ ಪ್ರತಿನಿಧಿಯಾದ ಶಿಮ್ಯೆನು ಸಾವಿರ ಮಂದಿಯೊಡನೆ ಬಂದು ಅರಸನನ್ನು ಇದಿರ್ಗೊಂಡು ತನ್ನ ಅಕ್ರಮಕಾರ್ಯಕ್ಕೆ ಕ್ಷಮಾಪಣೆ ಬೇಡಿಕೊಂಡನು. ಮೆಫಿಬೋಷೆತನ ಸೇವಕನಾದ ಜೀಬನು ತನ್ನ ಕುಟುಂಬದೊಂದಿಗೆ ಅಲ್ಲಿಗೆ ಬಂದನು. ಶಿಮ್ಯೆನು ಬಂದು ತನ್ನ ಅಕ್ರಮವನ್ನು ಅರಿಕೆ ಮಾಡಿ ಮನ್ನಣೆ ಬೇಡಿದಾಗ ಅಬಿಷಾಯಿ ಇವನು ಮರಣಕ್ಕೆ ಪಾತ್ರನಾಗಿದ್ಧಾನೆಯೇ ಹೊರತು ಮನ್ನಣೆಗೆ ಯೋಗ್ಯನಲ್ಲವೆಂದನು. ಆದರೆ ದಾವೀದನು ಈ ದಿನ ಶುಭದಿನವಾದದರಿಂದ ಈ ದಿನದಲ್ಲಿ ಒಬ್ಬರೂ ಕೊಲ್ಲಲ್ಪಡಬಾರದೆಂತ ಅವನನ್ನು ಮನ್ನಿಸಿಬಿಟ್ಟನು. ಮೆಫಿಬೋಷೆತನು ಕೂಡ ದಾವೀದ ರಾಜನು ಯೆರೂಸಲೇಮನ್ನು ಬಿಟ್ಟಂದಿನಿಂದ ಅತಿ ದುಃಖಾಕ್ರಾಂತನಾಗಿದ್ದ ಹಾಗೆ ತೋರಿಸುವ ಗುರ್ತುಗಳಿಂದ ದಾವೀದನಲ್ಲಿಗೆ ಬಂದಿದ್ದನು; ಜೀಬನು

Digitized by ROJA MUTHIAH RESEARCH LIBRARY

ತನಗೆ ಮಾಡಿದ ಮೋಸವನ್ನು ಅರಸನ ಮುಂದೆ ವಿವರಿಸಿ ಹೇಳಿದನು. ತಾನು ಅರಸನನ್ನು ಇದಿರ್ಗೊಳ್ಳುವದಕ್ಕೆ ಹೋಗುವ ಬಗ್ಯೆ ಕತ್ತೆಗೆ ಸಬರ ಕಟ್ಟಿ ಸಿದ್ಧಪಡಿಸುವಂತೆ ಹೇಳಿದರೆ ಅವನು ಹಾಗೆ ಮಾಡದೆ ಹೋದದರಿಂದ ತಡವಾಯಿತೆಂತಲೂ, ಅಷ್ಟರೊಳಗೆ ಅಬ್ಸಲೋಮನು ಪಟ್ಣವನ್ನು ಸ್ವಾಧೀನಮಾಡಿಕೊಂಡದರಿಂದ ತಪ್ಪಿಸಿಕೊಳ್ಳುವದು ದುರ್ಲಭವಾಯಿತೆಂತಲೂ, ಅರಸನು ತನ್ನ ಪ್ರಾಣವನ್ನು ಕಾಪಾಡಿದ್ದಕ್ಕೆ ಕೃತಜ್ಞನಾಗಿದ್ದನೇ ಹೊರತು ಎಂದಾದರೂ ತನ್ನ ಮನಸ್ಸಿನಲ್ಲಿ ಅರಸನಿಗೆ ದ್ರೋಹಿಯಾಗಿರಬೇಕೆಂಬುವ ಉದ್ದೇಶವು ತನ್ನಲ್ಲಿ ಹುಟ್ಟಲಿಲ್ಲವೆಂತಲೂ ಹೇಳಿದನು. ದಾವೀದನು ಈ ವೃತ್ತಾಂತವನ್ನು ಪೂರ್ತಿಯಾಗಿ ನಂಬಿದಾಗ್ಯೂ ಜೀಬನು ಅರಸನಿಗೆ ಅತ್ಯುಪಕಾರಿಯಾಗಿದ್ದದರಿಂದ ಅರಸನು ಅವನಿಗೆ ಕೊಟ್ಟಿದ್ದ ಸ್ವಾಸ್ಥ್ಯವನ್ನು ಕಿತ್ತುಕೊಳ್ಳುವದಕ್ಕೆ ಇಷ್ಟಪಡದೆ ಆ ಸ್ವಾಸ್ಥ್ಯವನ್ನು ಅವರಿಬ್ಬರಿಗೆ ಹಂಚಿಕೊಟ್ಟನು. ಮಹಾನಾಯಿಮಿನಲ್ಲಿ ದಾವೀದನಿಗೆ ಬೇಕಾದವುಗಳನ್ನೆಲ್ಲಾ ಒದಗಿಸಿಕೊಟ್ಟ ಗಿಲ್ಯಾದಿನವನಾದ ಬಾರ್ಜಿಲ್ಲಾಯಿ ಕೂಡ ಅರಸನನ್ನು ಯೋರ್ದನಿನ ಈಚೆಯವರೆಗೂ ಸಾಗಕಳುಹಿಸಿದನು. ಈ ಉಪಕಾರಕ್ಕೆ ಬದಲಾಗಿ ದಾವೀದನು ತನ್ನ ಅರಮನೆಯೊಳಗೆ ವರ್ಷಾಶನವನ್ನು ಹೊಂದಿ ಸಾಯುವವರೆಗೂ ಅಲ್ಲಿಯೇ ವಾಸಮಾಡುವಂತೆ ಅವನನ್ನು ಕೇಳಿಕೊಂಡನು. ಆದರೆ ತಾನು ಎಂಭತ್ತು ವರ್ಷದ ಮುದುಕನಾಗಿರುವದರಿಂದ ಅರಮನೆಯ ವಾಸವು ತನಗೆ ಸಂತೋಷವನ್ನುಂಟುಮಾಡಲಾರದೆಂತಲೂ, ತನಗೆ ಬದಲಾಗಿ ತನ್ನ ಮಗನಾದ ಚಿಮ್‌ಹಾಮನನ್ನು ಕರೆದುಕೊಂಡು ಹೋಗಬೇಕೆಂತಲೂ ಬೇಡಿಕೊಂಡದ್ದಕ್ಕೆ ಅರಸನು ಸಮ್ಮತಿಸಿ ಅವನ ಮಗನನ್ನು ತನ್ನ ಅರಮನೆಯೊಳಗೆ ಸೇರಿಸಿಕೊಂಡನು.

## ಬಿಕ್ರಿಯ ಮಗನಾದ ಶೇಬನ ದಂಗೆ.

[ii ಸಮು. xix. 41—xx.]

ಯೆಹೂದನ ಗೋತ್ರದವರು ತಾವು ಮಾತ್ರ ಹೋಗಿ ಅರಸನನ್ನು ಕರೆದುಕೊಂಡು ಬಂದು ಸತ್ಕರಿಸುವ ವರ್ತಮಾನವನ್ನು ಉತ್ತರ ಭಾಗದಲ್ಲಿದ್ದವರಿಗೆ ತಿಳಿಸದೆ ಇದ್ದದ್ದನ್ನು ಅವರು ಕೇಳಿದಾಗ, ಯೆಹೂದನವರ ಮೇಲೆ ಕೋಪಗೊಂಡರು. ಯಾಕಂದರೆ ಯೆಹೂದನವರು ಅರಸನಿಗೆ ಮಾಡಿದ ಸತ್ಕಾರಕ್ಕೆ ಬದಲಾಗಿ ಅವರಿಗೆ ಅರಸನು ಘನಮಾನಗಳನ್ನು ಸಲ್ಲಿಸುವನೆಂತಲೂ ಆ ಘನಮಾನಗಳು ತಮಗೆ ಸಿಕ್ಕದೆ ಹೋಗುವವೆಂತಲೂ ನೆನಸಿದರು. ಅದಕ್ಕೆ ಯೆಹೂದನವರು — ಅರಸನು ತಮ್ಮ ಗೋತ್ರದವನಾಗಿರುವದರಿಂದ ತಮಗೆ ಹಕ್ಕುಂಟೆಂದು ಬದಲು ಹೇಳಿದರು. ಆಗ ಆ ಉತ್ತರ ಭಾಗದವರು ತಮಗೆ ಹತ್ತುಭಾಗ ಹೆಚ್ಚು ಹಕ್ಕು ಮಾತ್ರವಲ್ಲದೆ ಜ್ಯೇಷ್ಠ ಹಕ್ಕು ಕೂಡ ಉಂಟೆಂತಲೂ, ಅರಸನು ಬಂದ ವರ್ತಮಾನವನ್ನು ತಮಗೆ ತಿಳಿಸದೆ ಹೋದದರಿಂದ ತಮ್ಮನ್ನು ಅವರು ಉದಾಸೀನ ಮಾಡಿದ್ದಾರೆಂತಲೂ, ತಿರುಗಬಿದ್ದರು. ಹೀಗೆ ಅವರೊಳಗೆ ಕಲಹವು ಉಂಟಾದಾಗ ಬೆನ್ಯಮೀನ ಗೋತ್ರದ ಬಿಕ್ರಿಯ ಮಗನಾದ ಅತ್ಯಾಶೆಯುಳ್ಳ ಶೇಬನು—ಅವರು ಇಶಾಯಿಯ ಮಗನನ್ನು ಅರಸನನ್ನಾಗಿ ಮಾಡಿಕೊಂಡರೆ ನಾವು ಇನ್ನೊಬ್ಬನನ್ನು ಅರಸನಾಗಿ ಮಾಡಿಕೊಳ್ಳುವ ಎಂದು ಹೇಳಿ ತುತೂರಿಯನ್ನೂದಿದನು. ಉತ್ತರ

Digitized by ROJA MUTHIAH RESEARCH LIBRARY



ಭಾಗದ ಆ ಹತ್ತು ಕುಲದವರಿಗೆ ಯೆಹೂದನವರ ಮೇಲೆ ಬಹಳ ಕಾಲದಿಂದ ಅಸೂಯೆಯಿದ್ದದರಿಂದ ಅವರು ಶೇಬನ ಸಂಗಡ ಸೇರಿಕೊಂಡು ಕಲಹವನ್ನು ಬೆಳಿಸುವದಕ್ಕೆ ಇದು ಯುಕ್ತ ಸಮಯವಾಯಿತು.

## ಅಮಾಸನ ಮರಣ.

[ii ಸಮು. xx. 4—10.]

ಈ ದಂಗೆಯ ಸಮಾಚಾರವನ್ನು ಕೇಳಿದ ಕೂಡಲೆ ಶೇಬನ ಪುಂಡನ್ನು ಅಣಗಿಸುವಂತೆ ಮೂರು ದಿನಗಳೊಳಗೆ ಸೈನ್ಯವನ್ನು ಕೂಡಿಸಿಕೊಂಡು ಬಾ ಎಂದು ದಾವೀದನು ತನ್ನ ಸೇನಾನಿಯಾದ ಅಮಾಸನಿಗೆ ಅಪ್ಪಣೆ ಕೊಟ್ಟನು. ಆದರೆ ಇಂಥಾ ಕಾರ್ಯಗಳಲ್ಲಿ ಅಮಾಸನು ಯೋವಾಬನಷ್ಟು ಬುದ್ಧಿ ಸಾಮರ್ಥ್ಯಗಳುಳ್ಳವನಲ್ಲದ್ದರಿಂದ ಕ್ಲಪ್ತ ಕಾಲವು ಮೀರಿ ಹೋಯಿತು. ಆದಕಾರಣ ದಾವೀದನು ಆತುರಪಟ್ಟವನಾಗಿ ಯೋವಾಬನನ್ನೂ ಮೈಗಾವಲಿನವರನ್ನೂ ಸಿದ್ಧಮಾಡಿ ದಂಗೆಗಾರರ ಮೇಲೆ ಕಳುಹಿಸಿದನು. ಆಗ ಅಮಾಸನು ಅರಸನ ಅಪ್ಪಣೆಯ ಮೇರೆಗೆ ಸೇನೆಯನ್ನು ಕೂಡಿಸಿಕೊಂಡು ಬರುತ್ತಾ ಯೋವಾಬನನ್ನು ಗಿಬಿಯೋನಿನ ಹತ್ತಿರ ಸಂಧಿಸಿದನು. ಅಮಾಸನಿಗೆ ಯೋವಾಬನು ಜ್ಞಾತಿಯಾಗಿದ್ದದರಿಂದ ಅತಿಪ್ರೀತಿಯನ್ನು ನಟಿಸಿ ಗಾಢಾಲಿಂಗನವನ್ನು ಮಾಡುವವನಂತೆ ಅವನ ದಾಡಿಯನ್ನು ಹಿಡಿದುಕೊಂಡನು. ಹೀಗೆ ಮಾಡಿದ್ದರಿಂದ ಯೋವಾಬನು ಅಂಗಿಯೊಳಗೆ ಬಚ್ಚಿಟ್ಟುಕೊಂಡಿದ್ದ ಕತ್ತಿಯು ಜಾರಿ ಬಿತ್ತು. ಅದನ್ನು ಯೋವಾಬನು ತೆಗೆದುಕೊಂಡು ಅಮಾಸನನ್ನು ಆ ಕತ್ತಿಯಿಂದ ತಿವಿದು ಕೊಂದನು. ಹೀಗೆ ಯೋವಾಬನು ಎದುರಾಳಿಯನ್ನು ದೂರಮಾಡುವದಕ್ಕಾಗಿ ಪೂರ್ವದಲ್ಲಿ ಅಬ್ನೇರನನ್ನು ಕೊಂದದು ಹ್ಯಾಗೋ ಹಾಗೆಯೇ ತಿರಿಗಿ ಈ ಅಮಾಸನನ್ನೂ ಕೊಲ್ಲುವದಕ್ಕೆ ಒಂದಿಷ್ಟಾದರೂ ಮನಸ್ಸಿನಲ್ಲಿ ಸಂಕೋಚಪಡಲಿಲ್ಲ. ಯೋವಾಬನು ತನಗೆ ನೆಂಟನಾಗಿದ್ದುದರಿಂದಲೂ ಸಹಾಯಕಾರಿಯಾಗಿದ್ದದರಿಂದಲೂ ದಾವೀದನು ಅವನ ಅಕ್ರಮವನ್ನು ಈ ಎರಡನೇ ಸಲವೂ ಮನ್ನಿಸಬೇಕಾಯಿತು.

## ದಂಗೆಯನ್ನು ಅಣಗಿಸಿದ್ದು.

[ii ಸಮು. xx. 10—22.]

ಅಮಾಸನನ್ನು ಕೊಂದಬಳಿಕ ಯೋವಾಬನು ತನ್ನ ಭಟರನ್ನು ಕರೆದುಕೊಂಡು ಶೇಬನನ್ನು ದಂಡಿಸುವ ಉದ್ದೇಶದಿಂದ ಮುಂದಕ್ಕೆ ಸಾಗಿ ಹೋದನು. ಆದರೆ ಅವನ ಭಟರಲ್ಲೊಬ್ಬನು ಅಮಾಸನ ಶವದ ಬಳಿಯಲ್ಲಿ ನಿಂತುಕೊಂಡು — “ಯೋವಾಬನಿಗೆ ಅನುಕೂಲಿಸುವವನೂ, ದಾವೀದನ ಕಡೆಯವನೂ ಯಾವನೋ ಅವನು ಯೋವಾಬನ ಹಿಂದೆ ಓಡಲಿ” ಎಂದು ಕೂಗಿ ಹೇಳುತ್ತಾ ಇದ್ದನು. ಮೊದಲು ಜನರು ಸತ್ತ ತಮ್ಮ ನಾಯಕನ ಶವದ ಬಳಿಗೆ ಬಂದು ನಿಂತಿದ್ದರು. ಆದರೆ ಆ ಮನುಷ್ಯನು ಆ ಶವವನ್ನು ಹೊಲದಲ್ಲಿ ಒಂದು ಕಡೆಗೆ ಎಳೆದುಹಾಕಿ, ಬಟ್ಟೆಯನ್ನು ಹೊದಿಸಿದ ಮೇಲೆ ಅವರೆಲ್ಲರು ಯೋವಾಬನನ್ನು ಹಿಂಬಾಲಿಸಿ ಹೋದರು.

ಶೇಬನೂ ಅವನಿಗೆ ಸೇರಿದವರೂ ಯೋವಾಬನನ್ನು ಎದುರಿಸಲಶಕ್ತರಾಗಿ ಓಡಿಹೋಗಿ ಉತ್ತರ ಭಾಗದಲ್ಲಿ ಡಾನ್ ದೇಶದ ಕೊನೆಯಲ್ಲಿರುವ ಬೇತ್ಮಾಖಾ ಎಂಬಲ್ಲಿಯ ಪುರಾತನ ಪಟ್ಟಣವಾದ ಆಬೇಲಿಗೆ ಸೇರುವವರೆಗೂ ಹಿಮ್ಮೆಟ್ಟಿದರು. ಇಲ್ಲಿ ಶೇಬನಿಗೆ ಆಶ್ರಯ ದೊರಕಲಿಲ್ಲ. ಯಾಕಂದರೆ ನೆರೆಹೊರೆಯಲ್ಲಿದ್ದ ಯೌವನಸ್ಥರೆಲ್ಲರೂ ಬಂದು ದಾವೀದನ ದಂಡಿನೊಳಗೆ ಸೇರಿಕೊಂಡು ಆಬೇಲ್ ಪಟ್ಟಣವನ್ನು ಮುತ್ತಿಗೆ ಹಾಕುವದಕ್ಕೆ ಯೋವಾಬನಿಗೆ ಸಹಾಯ ಮಾಡಿದರು. ಆ ಪಟ್ಟಣವನ್ನು ಮುತ್ತಿಗೆ ಹಾಕಿ ಅದರ ಕೋಟೆಯ ಸುತ್ತಲು ಅಲ್ಲಲ್ಲಿ ಮಣ್ಣಿನ ತಿಟ್ಟುಗಳನ್ನು ಮಾಡಿ ಅವುಗಳ ಮೇಲಿನಿಂದ ಪಟ್ಟಣದ ಗೋಡೆಗಳನ್ನು ಕೆಡಹುತ್ತಿದ್ದರು. ಆಗ ಆ ಪಟ್ಟಣದ ನಿವಾಸಿನಿಯಾದ ಒಬ್ಬ ವಿವೇಕ ಸ್ತ್ರೀಯಳು ಗೋಡೆಯ ಸಮೀಪಕ್ಕೆ ಬಂದು ಯೋವಾಬನನ್ನು ಕೂಗಿ ಕರೆದಳು; ಯೋವಾಬನು ಅವಳ ಸಮೀಪಕ್ಕೆ ಬಂದಾಗ ಅವಳು ಅವನಿಗೆ — ಈ ಪಟ್ಟಣದ ನಿವಾಸಿಗಳು ಯಾವಾಗಲೂ ಇಸ್ರಯೇಲಿನ ನ್ಯಾಯ ವಿಧಿಗಳ ಪ್ರಕಾರ ನಡೆದುಕೊಳ್ಳುತ್ತಿದ್ದಾಗ್ಯೂ ಈಗ ಇಂಥಾ ಪಟ್ಟಣವನ್ನು ಧ್ವಂಸ ಮಾಡುವದಕ್ಕೆ ನೀನು ಎತ್ತುಗಡೆ ಮಾಡುವದೇನು? ಎಂದು ಅವನನ್ನು ಗದರಿಸಿದಳು. ಅದಕ್ಕೆ ಯೋವಾಬನು — ಪಟ್ಟಣವನ್ನು ಧ್ವಂಸ ಮಾಡುವ ಉದ್ದೇಶ ತನ್ನೊಳಗಿಲ್ಲವೆಂತಲೂ, ಶೇಬನೆಂಬುವ ಒಬ್ಬನು ಇಸ್ರಯೇಲಿನ ಅರಸನ ಮೇಲೆ ತಿರುಗಿಬಿದ್ದು ಈ ಪಟ್ಟಣವನ್ನಾಶ್ರಯಿಸಿಕೊಂಡಿರುವದರಿಂದ ಅವನನ್ನು ಹಿಡಿಯುವದಕ್ಕೆ ತಾನು ಬಂದೆನೆಂತಲೂ ಪ್ರತ್ಯುತ್ತರ ಕೊಟ್ಟನು. ಆಗ ಆ ಸ್ತ್ರೀಯಳು ಹೋಗಿ ಪಟ್ಟಣದ ಹಿರಿಯರಿಗೆ ಯೋವಾಬನ ವೃತ್ತಾಂತವನ್ನು ತಿಳಿಸಿ ಅವರು ದಂಗೆಗಾರನಾದ ಶೇಬನನ್ನು ಕೊಂದು ಅವನ ತಲೆಯನ್ನು ಪಟ್ಟಣದ ಗೋಡೆಯ ಆಚೆಗೆ ಬಿಸಾಡುವ ಹಾಗೆ ಪ್ರೇರಿಸಿದಳು. ಅವರು ಹಾಗೆಯೇ ಶೇಬನನ್ನು ಕೊಂದು ಅವನ ತಲೆಯನ್ನು ಗೋಡೆಯಿಂದೀಚೆ ಹಾಕಿದರು. ಯೋವಾಬನು ಅದನ್ನು ನೋಡಿ ತನ್ನ ಸೈನ್ಯಸಮೇತನಾಗಿ ಯೆರೂಸಲೇಮಿಗೆ ಹಿಂತಿರುಗಿ ಬಂದನು.

# ಏಳನೇ ಅಧ್ಯಾಯ.

## ದಾವೀದನ ಜೀವಮಾನದ ಅಂತ್ಯದಿವಸಗಳು.

### ದೇವಾಲಯವನ್ನು ಕಟ್ಟಿಸುವದಕ್ಕೆ ಪ್ರಯತ್ನಪಟ್ಟದ್ದು.

[i ದಿನಚರ್ಯ. xxii; xxviii; xxix.]

ದಾವೀದನು ತನ್ನ ಜೀವಮಾನದಲ್ಲಿ ಉಳಿದ ದಿವಸಗಳೆಲ್ಲವನ್ನೂ ಸುಖವಾಗಿಯೂ, ನಿಮ್ಮಳವಾಗಿಯೂ ಕಳೆದನು. ಯಾಕಂದರೆ ಈ ಕಾಲದ ಚರಿತ್ರೆಯಲ್ಲಿ ಯುದ್ಧಗಳನ್ನು ಕುರಿತು ಯಾವ ಸೂಚನೆಯೂ ಇಲ್ಲ. ಆದರೆ ದಾವೀದನು ದೇವಾಲಯವನ್ನು ಕಟ್ಟಿಸುವ ಕಾರ್ಯವನ್ನು ಪೂರಯಿಸುವದಕ್ಕಾಗಿ ಸಿದ್ಧಮಾಡುತ್ತಿದ್ದ ವಿಷಯವು ಮಾತ್ರ ಈ ಚರಿತ್ರೆಯಲ್ಲಿ ಪ್ರಾಮುಖ್ಯವಾಗಿ ಬರೆದಿದೆ. ಆತನು ದೇವಾಲಯವನ್ನು ಕಟ್ಟುವದಕ್ಕೆ ಅವಶ್ಯವಾದ ದೇವದಾರು ಮರಗಳು, ಕಲ್ಲು, ಚಿನ್ನ, ಬೆಳ್ಳಿ, ಹವಳ ಮೊದಲಾದ ಎಲ್ಲಾ ಸಾಮಗ್ರಿಗಳನ್ನು ಸಂಗ್ರಹಿಸಿಟ್ಟನು. ಆದರೆ ಆತನು ದೇವಾಲಯವನ್ನು ಕಟ್ಟುವದಕ್ಕೆ ಆರಂಭಿಸ ಕೂಡದೆಂತ ಪ್ರವಾದಿಯು ಹೇಳಿದ್ದರಿಂದ ಆತನು ತನ್ನ ಸ್ವಂತ ಹಸ್ತದಿಂದ ಅದನ್ನು ಕಟ್ಟುವದಕ್ಕೆ ತೊಡಗಲಿಲ್ಲ. ಸೊಲೋಮೋನನು ಗದ್ದಿಗೆಗೆ ಬಂದ ಕೂಡಲೆ ದೇವಾಲಯವನ್ನು ಕಟ್ಟುವದಕ್ಕೆ ಪ್ರಾರಂಭ ಮಾಡುವಂತೆ ಸಮಸ್ತವನ್ನು ಸಿದ್ಧಮಾಡಿಟ್ಟನು. ಇದಕ್ಕೋಸ್ಕರ ದಾವೀದನು ಸ್ವಂತ ಹಣವನ್ನು ಬಹಳ ವೆಚ್ಚಮಾಡಿದನು. ಯಾಕಂದರೆ ದೇವರ ಕಾರ್ಯಕ್ಕೆ ಹಣವನ್ನು ಖರ್ಚುಮಾಡುವದೇ ಸರ್ವೋತ್ತಮವಾದ ವಿನಿಯೋಗವೆಂದು ಆತನು ಪೂರ್ಣವಾಗಿ ನಂಬಿದ್ದನು. ಆತನ ಇಂಥಾ ಉದಾರಗುಣವನ್ನು ನೋಡಿ ಇಸ್ರಯೇಲ್ಯರಲ್ಲಿ ಶ್ರೀಮಂತರು ಸಹ ಈ ಕಾರ್ಯಕ್ಕೆ ಚಿನ್ನ, ಬೆಳ್ಳಿ ಮುಂತಾದವುಗಳನ್ನು ಕಾಣಿಕೆಯಾಗಿ ಯೆರೂಸಲೇಮಿಗೆ ದಾವೀದನ ಬಳಿಗೆ ಕಳುಹಿಸಿಕೊಟ್ಟರು.

### ವೃದ್ಧ ದಶೆ.

[i ಅರಸು. i. 1—4.]

ದಾವೀದನು ಚಿಕ್ಕ ಪ್ರಾಯದಲ್ಲಿ ಅನುಭವಿಸಿದ ಕಷ್ಟಗಳೂ ನಡಿಸಿದ ಸಾಹಸ ಕಾರ್ಯಗಳೂ ಆತನು ಕ್ಲುಪ್ತಕಾಲಕ್ಕೆ ಮುಂಚೆಯೇ ವೃದ್ಧನಾಗುವದಕ್ಕೆ ತಕ್ಕ ಕಾರಣಗಳಾಗಿದ್ದವು.

Digitized by ROJA MUTHIAH RESEARCH LIBRARY

ಎಪ್ಪತ್ತು ವರ್ಷ ತುಂಬುವದಕ್ಕಿಂತ ಮುಂಚೆಯೇ ಆತನು ಅತಿ ಬಲಹೀನನಾದದರಿಂದ ಆತನ ಸೇವಕರು ಎಷ್ಟು ಪ್ರಯಾಸಪಟ್ಟಾಗ್ಯೂ ಆತನ ದೇಹಕ್ಕೆ ತಕ್ಕ ಉಷ್ಣವನ್ನು ಉಂಟುಮಾಡಲಾರದೆ ಹೋದರು. ಆದಕಾರಣ ಅವರು ಗಲಿಲಾಯದಲ್ಲಿನ ಷೂನೇಮಿನವಳಾದ ಅಬಿಷಾಗಳನ್ನು ಆತನಿಗೆ ದಾದಿಯಾಗಿ ಇರುವ ಹಾಗೆ ಅರಸನ ಬಳಿಯಲ್ಲಿ ಇರಿಸಿದರು.

### ಆತನ ಕಡೇ ಮಾತುಗಳು.

[ii ಸಮು. xxiii. 1—7.[

ದಾವೀದನು ಮುದುಕನಾಗಿಯೂ ಬಹಳ ಬಲಹೀನನಾಗಿಯೂ ಇದ್ದಾಗ್ಯೂ ಆತನ ಕವಿತಾವಿದ್ಯೆಯ ಜ್ವಾಲೆಯು ಆಗಿಂದಾಗ್ಯೆ ಆತನಲ್ಲಿ ಪ್ರಜ್ವಲಿಸುತ್ತಿತ್ತು. ಆತನ ಯೌವನಕಾಲದ ಕವನಗಳು ದೇವಭಕ್ತಿಯುತವಾದವುಗಳಾಗಿ ಶೋಭಿಸುತ್ತಿದ್ದವಾದರೆ ಆತನ "ಅಂತ್ಯೋಕ್ತಿಗಳು" ದೀರ್ಘಾಲೋಚನೆಯಿಂದಲೂ ಬಹುಕಾಲದ ಅನುಭವಪೂರ್ವಕವಾದ ಜ್ಞಾನದಿಂದಲೂ ಮತ್ತು ಬಹುಕಾಲ ಭಗವಂತನಲ್ಲಿ ಇಟ್ಟ ಪೂರ್ಣ ನಂಬಿಕೆಯಿಂದಲೂ ಹೊಳೆಯುತ್ತವೆ. ಆತನು ತನ್ನ ಜ್ಞಾಪಕಕ್ಕೆ ಬಂದ ತನ್ನ ಹಿಂದಣ ಜೀವಮಾನವನ್ನೂ ನಾತಾನನ ಪ್ರವಾದನೆಯ ಪ್ರಕಾರ ಮುಂದೆ ಲಭಿಸುವದಕ್ಕಿರುವ ಭವಿಷ್ಯಜ್ಜೀವಮಾನವನ್ನೂ ಚನ್ನಾಗಿ ಆಲೋಚಿಸಿ ಹೀಗೆ ಹಾಡಿದನು —

"ಈಶಾಯನ ಮಗನಾದ ದಾವೀದನೂ, ಉಚ್ಚಸ್ಥಿತಿಗೆ ಬಂದವನೂ
ಯಾಕೋಬ ದೇವರಿಂದ ಅಭಿಷೇಕಿಸಲ್ಪಟ್ಟವನೂ
ಇಸ್ರಾಯೇಲಿನ ರಮ್ಯ ಕೀರ್ತನೆಗಾರನೂ ನುಡಿದದ್ದು —
ಯೆಹೋವನ ಆತ್ಮನು ನನ್ನಿಂದ ಮಾತನಾಡಿದನು
ಆತನ ನುಡಿ ನನ್ನ ಬಾಯಿಯಲ್ಲಿ ಇತ್ತು.
ಇಸ್ರಯೇಲಿನ ದೇವರು ಹೇಳಿದ್ದು,
ಇಸ್ರಯೇಲಿನ ಬಂಡೆ ನನ್ನ ಸಂಗಡ ಮಾತಾಡಿದ್ದು —
ಮನುಷ್ಯರ ಮೇಲೆ ನೀತಿವಂತನಾದ ಅರಸನು ಯೆಹೋವನ ಭಯದಲ್ಲಿ
  ಆಳುವನು.
ಆ ಆಳಿಕೆಯು ಮೇಘವಿಮುಕ್ತನಾದ ಬಾಲಸೂರ್ಯನ ಪ್ರಕಾಶದಂತೆಯೂ
ಮಳೆ ಬಂದಮೇಲೆ ಭೂಮಿಯಿಂದ ಮೊಳೆಯುವ ಹುಲ್ಲಿನ ಹಾಗೆಯೂ
  ಇರುವದು.
ನನ್ನ ಮನೆಯು ದೇವರ ಬಳಿಯಲ್ಲಿ ಹಾಗೆಯೇ ಅಲ್ಲವೋ?
ಯಾಕಂದರೆ ಆತನು ನನಗೆ ನಿತ್ಯ ಒಡಂಬಡಿಕೆಯನ್ನು ಮಾಡಿದ್ದಾನೆ.
ಅದನ್ನು ಎಲ್ಲಾ ವಿಷಯಗಳಲ್ಲಿ ನ್ಯಾಯವಾಗಿಯೂ ತಪ್ಪದಂತೆಯೂ
  ನೆರವೇರಿಸಿದ್ದಾನೆ.



ಆತನೇ ನನ್ನ ಸಮಸ್ತ ರಕ್ಷಣೆಯೂ ನನ್ನ ಸಮಸ್ತ ಅಭಿಲಾಷೆಯೂ ಆಗಿ
ಆ ಅಭಿಲಾಷೆಯನ್ನು ಅಭಿವೃದ್ಧಿ ಮಾಡನೋ?
ಆದರೆ ಬೆಲಿಯಾಳನ ಮಕ್ಕಳು ತಳ್ಳಿಬಿಟ್ಟ ಮುಳ್ಳುಗಳಂತಿದ್ದಾರೆ,
ಅವುಗಳನ್ನು ಯಾರೂ ತಮ್ಮ ಕೈಗಳಿಂದ ಮುಟ್ಟರು.
ಆದರೆ ಅವುಗಳನ್ನು ಮುಟ್ಟುವವನು ಕೊಡಲಿ ಕಟ್ಟಿಗೆ ಈಟಿಗಳುಳ್ಳವನಾಗಿರಬೇಕು.
ಮತ್ತು ಅವು ಬೆಂಕಿಯಲ್ಲಿ ಸುಟ್ಟುಹೋಗುವವು."

ನ್ಯಾಯವಾದ ರಾಜ್ಯಪರಿಪಾಲನೆಯಿಂದುಂಟಾಗುವ ಸುಖವನ್ನೂ ದುರ್ಬಲವಾದ ಆಳಿಕೆಯಿಂದುಂಟಾಗುವ ಹಿಂಸೆಯನ್ನೂ ಬಹಳ ವಿಶದವಾಗಿ ದಾವೀದನು ಈ ಕೀರ್ತನೆಯಲ್ಲಿ ವರ್ಣಿಸಿದ್ದಾನೆ. ತನ್ನ ಮನೆಯು ನಿರಂತರವೂ ದೇವರಲ್ಲಿ ಸ್ಥಾಪಿತವಾಗುವದೆಂದು ನಾತಾನನು ಹೇಳಿದ ಪ್ರವಾದನೆಯ ಸತ್ಯವನ್ನು ದಾವೀದನು ನಿಷ್ಕಪಟವಾದ ಪೂರ್ಣ ವಿಶ್ವಾಸದಿಂದ ಗ್ರಹಿಸಿದನೆಂದು ಈ ಕಾವ್ಯದಲ್ಲಿ ಕಾಣಬರುತ್ತೆ. ಆತನು ದೇವರಿಂದ ಬಂದ ಈ ವಾಗ್ದತ್ತಕ್ಕಾಗಿ ನಿರೀಕ್ಷಿಸುತ್ತಾ ಅದರ ಬಲದಿಂದಲೇ ಬದುಕಿದನು. ಈ ವಾಗ್ದತ್ತದಲ್ಲಿಯೇ ಆತನು ಮುಂದೆ ಬರುವದಕ್ಕಿದ್ದ ಮೆಸ್ಸೀಯನ ರೂಪವನ್ನು ದರ್ಶಿಸಿ ಆ ದರ್ಶನದಿಂದಲೇ ರಕ್ಷಿಸಲ್ಪಟ್ಟನು.

### ಅದೋನಿಜನು ತಿರುಗಿಬಿದ್ದದ್ದು.

[i ಅರಸು. i. 5—10.]

ದಾವೀದನು ತನ್ನ ತರುವಾಯ ಸಿಂಹಾಸನಾರೂಢನಾಗುವವನ್ಯಾರೆಂಬುವದನ್ನು ಇನ್ನು ಬಹಿರಂಗ ಮಾಡಿರಲಿಲ್ಲ. ಆದರೆ ಅಬ್ಸಲೋಮನ ಮರಣಾನಂತರ ಆತನ ನಾಲ್ಕನೇ ಮಗನಾದ ಅದೋನಿಜನೇ (ಇವನು ಹಗ್ಗಿತಳ ಮಗನಾಗಿದ್ದನು) ಪಟ್ಟಕ್ಕೆ ಹಕ್ಕುದಾರನೆಂದು ಸರ್ವರೂ ಭಾವಿಸುತ್ತಿದ್ದರು. ದಾವೀದನು ತಾನು ಬತ್ಷೇಬಳಿಗೆ ಮಾಡಿದ ವಾಗ್ದತ್ತದ ಪ್ರಕಾರ ಸೊಲೊಮೋನನನ್ನು ಗದ್ದಿಗೆಯ ಮೇಲೆ ಕುಳ್ಳಿರಿಸುವದಕ್ಕೆ ತೀರ್ಮಾನಿಸಿದ್ದನು. ಆದರೆ ಈ ಮಾತು ರಾಜಸಭೆಯಲ್ಲಿ ಮಾತ್ರ ವಾಡಿಕೆಯಾಗಿತ್ತೇ ಹೊರತು ಬೇರೆ ಯಾರಿಗೂ ತಿಳಿದಿರಲಿಲ್ಲ. ಅದೋನಿಜನು ಸೌಂದರ್ಯದಲ್ಲಿಯೂ ವ್ಯರ್ಥ ಡಂಭದಲ್ಲಿಯೂ ಅತ್ಯಾಶೆಯಲ್ಲಿಯೂ ಅಬ್ಸಲೋಮನನ್ನು ಹೋಲುತಿದ್ದದರಿಂದ ಅವನ ತಂದೆಯು ಅವನ ಹಿರೀ ಅಣ್ಣನ ವಿಷಯದಲ್ಲಿ ತೋರಿಸಿದ್ದ ಸಲಿಗೆಯನ್ನೇ ಇವನಿಗೂ ತೋರಿಸಿದ್ದನು. ದಾವೀದನು ತನ್ನ ಮಗನಾದ ಸೊಲೋಮೋನನೇ ಅರಸನಾಗುವದಕ್ಕೆ ಯೋಗ್ಯನೆಂದು ನಿಸ್ಸಂದೇಹವಾಗಿ ನಂಬಿಕೊಂಡಿದ್ದನು. ಆದರೆ ಅದೋನಿಜನು ತನಗೆ ಬೇಕಾದ ಕುದುರೆ ರಥಗಳನ್ನೂ ಐವತ್ತು ಮಂದಿ ಸವಾರರನ್ನೂ ಮೊದಲು ಸಿದ್ಧಮಾಡಿಕೊಂಡು ಯೋವಾಬನನ್ನು ತನ್ನ ಸೇನಾನಿಯನ್ನಾಗಿಯೂ ಅಬಿಯಾತರನನ್ನು ತನ್ನ ಯಾಜಕನನ್ನಾಗಿಯೂ ನೇಮಿಸಿಕೊಂಡನು. ಯಾಕಂದರೆ ಇವರಿಬ್ಬರು ಅವನ ಪಕ್ಷವಾಗಿ ಸೇರಿಕೊಳ್ಳುವದಕ್ಕೆ ತಮ್ಮ ಪೂರ್ಣ ಇಷ್ಟವನ್ನು ತೋರ್ಪಡಿಸಿದ್ದರು. ಇವನು ಗದ್ದಿಗೆಗೆ ತನ್ನ ಜನ್ಮದಿಂದ ಹಕ್ಕುದಾರನಾಗಿದ್ದಾನೆಂತಲೂ ದಾವೀದನು ಬಲಹೀನನಾಗಿಯೂ ಹಾಸಿಗೆಹಿಡಿದವನಾಗಿಯೂ ಇದ್ದದರಿಂದ ರಾಜ್ಯಭಾರವನ್ನು ನಡಸಲಾರನೆಂತಲೂ ಜನರೆಲ್ಲರು ಎಣಿಸಿ, ಯುವ



Digitized by ROJA MUTHIAH RESEARCH LIBRARY

ರಾಜನಿಗೆ ಪಟ್ಟಾಭಿಷೇಕ ಮಾಡುವದು ಅತ್ಯವಶ್ಯವೆಂದು ನಂಬಿದ್ದರು. ಆದಕಾರಣ ಅದೋನಿಜನು ತನ್ನ ಒಳಸಂಚಿನಲ್ಲಿ ಸೇರಿದ್ದವರನ್ನೂ ಸೊಲೋಮೋನನ ಹೊರತು ಮಿಕ್ಕ ತನ್ನ ಅಣ್ಣತಮ್ಮಂದಿರನ್ನೂ ಪಟ್ಟದ ದಕ್ಷಿಣ ದಿಕ್ಕಿನಲ್ಲಿ ಮಡಿವಾಳನ ಭಾವಿ ಎಂದರ್ಥವುಳ್ಳ ಎನ್‌ರೋಗೆಲ್ ಬಳಿಯಲ್ಲಿ ಒಂದು ಔತಣವನ್ನು ಸಿದ್ಧಮಾಡಿಸಿ ಇವರೆಲ್ಲರನ್ನು ಆ ಔತಣಕ್ಕೆ ಬರಮಾಡಿಕೊಂಡನು.

## ಸೊಲೊಮೋನನ ಪಟ್ಟಾಭಿಷೇಕ.

[i ಅರಸು. i. 11—53.]

ಅದೋನಿಜನೂ ಅವನ ಪಕ್ಷದವರೂ ಕೂಡಿಕೊಂಡ ಸಮಾಚಾರವು ಸೊಲೊಮೋನನ ಶಿಕ್ಷಕನಾಗಿದ್ದ ನಾತಾನನಿಗೆ ತಿಳಿಯ ಬಂದಾಗ ಆತನು ತನ್ನ ವಿದ್ಯಾರ್ಥಿಗೆ ಅಪಾಯವು ಸಂಭವಿಸುವದೆಂತ ಭೀತಿಗೊಂಡು ತಕ್ಷಣವೇ ಬತ್ಷೇಬಳ ಬಳಿಗೆ ಹೋಗಿ ಅರಸನು ಆಕೆಯ ಮಗನ ವಿಷಯ ತನಗೆ ಮಾಡಿದ್ದ ವಾಗ್ದತ್ತವನ್ನು ತಿರಿಗಿ ಅರಸನಿಗೆ ಜ್ಞಾಪಕಪಡಿಸುವ ಹಾಗೆ ಆಕೆಯನ್ನು ಬಲಾತ್ಕಾರ ಮಾಡಿದನು; ಅದೋನಿಜನ ಕೃತ್ರಿಮವನ್ನು ಕೂಡ ಅರಸನಿಗೆ ತಿಳಿಸಬೇಕೆಂದು ಆಕೆಗೆ ಆಜ್ಞಾಪಿಸಿದನು. ಬತ್ಷೇಬಳು ತಾನು ಕೇಳಿದ ವೃತ್ತಾಂತವನ್ನೆಲ್ಲಾ ಅರಸನಿಗೆ ಶ್ರುತಪಡಿಸಿದಳು. ನಾತಾನನೂ ಹಿಂದೆಯೇ ಹೋಗಿ, ಬತ್ಷೇಬಳು ಹೇಳಿದ್ದನ್ನೆಲ್ಲಾ ದೃಢಪಡಿಸಿದನು. ಆಗ ವೃದ್ಧನಾದ ಅರಸನು ತನ್ನನ್ನು ಸಮಸ್ತ ಸಂಕಷ್ಟಗಳಿಂದ ಪಾರುಮಾಡಿಸಿದ ಭಗವಂತನ ಹೆಸರಿನ ಮೇಲೆ ಆಣೆ ಇಟ್ಟು ಆ ದಿನವೇ ಸೊಲೊಮೋನನನ್ನು ಪಟ್ಟಾಭಿಷಿಕ್ತನನ್ನಾಗ ಮಾಡುವದಕ್ಕೆ ನಿರ್ಣಯಿಸಿದನು. ಅರಸನ ಆಜ್ಞೆಯ ಪ್ರಕಾರ ನಾತಾನನೂ ಚದೋಕನೂ ಅರಸನ ಮೈಗಾವಲಿಯವರೊಂದಿಗೆ ಸೊಲೊಮೋನನನ್ನು ಪಟ್ಟದ ಉತ್ತರದಲ್ಲಿದ್ದ ಗಿಹೋನಿಗೆ ಕರೆದುಕೊಂಡು ಹೋಗಿ ಅಲ್ಲಿ ಅವನನ್ನು ಅಭಿಷೇಕದ ನಿಖಿಲ ಆಚಾರಗಳಿಂದ ಅಭಿಷಿಕ್ತನನ್ನಾಗ ಮಾಡಿ, ಅಲ್ಲಿಂದ ಅವನನ್ನು ಕರೆತಂದು ಅವನ ತಂದೆಯ ಗದ್ದಿಗೆಯ ಮೇಲೆ ಕೂರಿಸಿದರು. ಸೊಲೊಮೋನನ ಪಟ್ಟಾಭಿಷೇಕದ ಸಮಾಚಾರವನ್ನು ಅದೋನಿಜನೂ ಅವನ ಪಕ್ಷದವರೂ ಕೇಳಿದಾಗ ಭಯದಿಂದ ತುಂಬಿದವರಾಗಿ ಚೆದರಿ ಓಡಿಹೋದರು. ಯಾಕಂದರೆ ಇವರು ಸೊಲೊಮೋನನ ಮುಂದೆ ನಿಲ್ಲುವದಕ್ಕೂ ಅಶಕ್ತರಾಗಿದ್ದರು. ಅದೋನಿಜನು ಮಾತ್ರ ಯಜ್ಞವೇದಿಯ ಮರೆಹೊಕ್ಕನು.

## ದಾವೀದನ ಮರಣ.

[i ಅರಸು. ii. 1—11.]

ಬಹುಶಃ ಸೊಲೊಮೋನನು ಅಭಿಷಿಕ್ತನಾದ ಸ್ವಲ್ಪ ಕಾಲದೊಳಗಾಗಿ ದಾವೀದನು ತನ್ನ ಅಂತ್ಯಕಾಲವು ಸಮೀಪವಾಯಿತೆಂದು ಅರಿತು ತನ್ನ ಮರಣಶಾಸನವನ್ನು ಕೈಗೊಳ್ಳುವದಕ್ಕೋಸ್ಕರ ಸೊಲೊಮೋನನನ್ನು ತನ್ನ ಬಳಿಗೆ ಕರೇಕಳುಹಿಸಿದನು ಸೊಲೊಮೋನನು ಅಲ್ಲಿಗೆ ಬಂದಮೇಲೆ ದಾವೀದನು ಅವನಿಗೆ ಯೆಹೋವನ ಆಜ್ಞೆಗಳ ಪ್ರಕಾರ ಪ್ರವರ್ತಿಸಿ ಸಿಂಹಾ





ಸನದ ಸ್ಥಿರತ್ವಕ್ಕೆ ಮುಖ್ಯಾಧಾರವಾಗಿರುವ ಆತನ ಸಮಸ್ತ ಕಟ್ಟಳೆಗಳನ್ನು ಕೈಕೊಳ್ಳಬೇಕೆಂದು ಬುದ್ಧಿ ಹೇಳಿದನು. ತರುವಾಯ ಅಬ್ನೇರನನ್ನೂ ಅಮಾಸನನ್ನೂ ಕೊಂದ ಕ್ರೂರ ಕೃತ್ಯಕ್ಕೋಸ್ಕರ ಯೋವಾಬನಿಗೆ ತಪ್ಪದೆ ದಂಡನೆಯನ್ನು ವಿಧಿಸಬೇಕೆಂದು ಅಪ್ಪಣೆ ಮಾಡಿದನು. ಮತ್ತು ಅಬ್ಸಲೋಮನು ದಂಗೆ ಎದ್ದಿದ್ದ ಕಾಲದಲ್ಲಿ ತನ್ನನ್ನು ದೂಷಿಸಿದ ಶಿಮ್ಮೆಯನ್ನು ಸಹಾ ಶಿಕ್ಷಿಸುವಂತೆ ಹೇಳಿದನು. ದಾವೀದನು ತಾನೇ ಇವರಿಗೆ ಕ್ಷಮಾಪಣೆ ಕೊಟ್ಟಿದ್ದನು ಹೌದು. ಆದರೆ ಪ್ರಾಚೀನ ಕಾಲದಲ್ಲಿದ್ದ ಒಬ್ಬ ಅರಸನಿಂದ ಕೊಡಲ್ಪಟ್ಟ ಕ್ಷಮಾಪಣೆಗಳೂ ಒಡಂಬಡಿಕೆಗಳೂ ಆ ಅರಸನು ಮಡಿಯುವ ಪರಿಯಂತರವೇ ಆಚರಣೆಯಲ್ಲಿರುತ್ತಿದ್ದವು. ಈ ಪದ್ಧತಿಯ ಪ್ರಕಾರ ಮೇಲ್ಕಂಡ ದುಷ್ಟರನ್ನು ಕೊಲ್ಲಿಸುವದಾಗಲಿ ಮನ್ನಿಸುವದಾಗಲಿ ಸೊಲೊಮೋನನ ಅಧೀನದಲ್ಲಿತ್ತು. ಆತನು ತನ್ನ ಮನಸ್ಸು ಬಂದಂತೆ ಮಾಡಬಹುದಾಗಿತ್ತು. ಮತ್ತು ಅರಸನಾದ ದಾವೀದನು ತಾನು ಮಹಾನಾಯಿಮಿನಲ್ಲಿ ವಾಸಿಸುತ್ತಿರುವಾಗ ತನಗೆ ಅತ್ಯಂತೋಪಕಾರಿಯಾಗಿದ್ದ ಗಿಲ್ಯಾದಿನವನಾದ ಬಾರ್ಜಿಲ್ಲಾಯಿಯನ್ನೂ ಅವನ ಕುಟುಂಬವನ್ನೂ ಕಾಪಾಡುವ ಹಾಗೆ ಸೊಲೊಮೋನನ ವಶಕ್ಕೆ ಅವರನ್ನು ಒಪ್ಪಿಸಿದನು. ಇಂತು ದಾವೀದನ ನಲವತ್ತು ವರ್ಷದ ದೀರ್ಘವಾದ ಆಳಿಕೆಗೆ ಅಂತ್ಯಕಾಲ ಬಂದಿತು. ಆತನು ಎಪ್ಪತ್ತು ವರ್ಷ ಪ್ರಾಯದವನಾಗಿ ಸತ್ತನು. "ಅವನು ತನ್ನ ಪಿತೃಗಳ ಸಂಗಡ ಮಲಗಿಕೊಂಡನು, ಮತ್ತು ದಾವೀದನ ಪಟ್ಣದಲ್ಲಿ ಹೂಣಲ್ಪಟ್ಟನು."

## ದಾವೀದನ ಗುಣಕಥನವು.

ಹಳೇ ಒಡಂಬಡಿಕೆಯಲ್ಲಿ ಕಂಡು ಬರುವ ಎಲ್ಲಾ ಭಕ್ತರಿಗಿಂತಲೂ ದಾವೀದನು ಅನೇಕವಿಧ ಗುಣಾತಿಶಯಗಳಲ್ಲಿಯೂ ಬುದ್ಧಿ ಕೌಶಲ್ಯದಲ್ಲಿಯೂ ಶ್ರೇಷ್ಠನಾಗಿದ್ದನು. ಆತನು ಧ್ಯಾನನಿಮಗ್ನನೂ ಕಾರ್ಯಾಸಕ್ತನೂ ಕವಿತಾವಿಶಾರದನೂ ನಾನಾವಿಧವಿಷಯ ಜ್ಞಾನವುಳ್ಳವನೂ ಆಗಿದ್ದನು. ಆತನ ಧ್ಯಾನಶೀಲತೆಯು ಆತನನ್ನು ಏಕಾಂತವಾಸಕ್ಕೂ ಸಾಧಾರಣ ತರದ ಬಾಳಿಗೂ ಯೋಗ್ಯನನ್ನಾಗ ಮಾಡಿತು. ಆತನು ಯುದ್ಧಾಸಕ್ತ ವೀರನಾಗಿದ್ದುದರಿಂದಲೂ ಕಾರ್ಯನಿರ್ವಾಹಶಕ್ತಿಯಲ್ಲಿ ಕೇವಲ ಸಮರ್ಥನಾಗಿದ್ದುದರಿಂದಲೂ ಆತನು ಎಂಥಾ ಅಪಾಯಸ್ಥಿತಿಯಲ್ಲಾದರೂ ಹಿಂಜರಿಯದವನಾಗಿದ್ದನು. ಅಲ್ಲದೆ ಗಲಭೆಯಿಂದ ತುಂಬಿದ್ದ ಆ ಕಾಲದಲ್ಲಿಯೂ ರಾಜ್ಯಭಾರವನ್ನು ನಡಿಸುವದಕ್ಕೆ ಯೋಗ್ಯನಾಗಿದ್ದನು. ಭಗವಂತನು ಜಗತ್ಸೃಷ್ಟಿಯಲ್ಲಿ ಪ್ರಕಟಿಸಿರುವ ಸೌಂದರ್ಯವನ್ನು ಗ್ರಹಿಸುವ ಸೂಕ್ಷ್ಮ ಜ್ಞಾನವುಳ್ಳವನಾಗಿಯೂ, ಸಂಗೀತಾಮೃತಸಾರದ ಮಾಧುರ್ಯವನ್ನು ಗ್ರಹಿಸುವ ರಸಜ್ಞನಾಗಿಯೂ, ಜನರ ನಂಬಿಕೆಯನ್ನೂ ಅಭಿಮಾನವನ್ನೂ ಆಕರ್ಷಿಸಿಕೊಳ್ಳುವ ಮುಖವರ್ಚಸ್ಸುಳ್ಳವನಾಗಿಯೂ ಇದ್ದನು. ಆತನು ಕೆಟ್ಟದ್ದನ್ನು ಮಾಡುವದಕ್ಕಾಗಲಿ ಒಳ್ಳೇದನ್ನು ಮಾಡುವದಕ್ಕಾಗಲಿ ಹಿಂತೆಗೆಯದ ಮಹಾ ದೃಢ ಮನಸ್ಸುಳ್ಳವನಾಗಿಯೂ ಇದ್ದನು. ಆತನು ಸೂಕ್ಷ್ಮ ಗ್ರಾಹಕಶಕ್ತಿಯೂ ಸುಲಭವಾಗಿ ಚಾಂಚಲ್ಯಭಾವಕ್ಕೆ ಮನಕೊಡುವ ಚಿತ್ತವೃತ್ತಿಯೂ ಉಳ್ಳವನಾಗಿದ್ದದರಿಂದ ಅನೇಕಾವರ್ತಿ ಆತನು ಮಾಡಿದ ಕಾರ್ಯಗಳು ಆತನನ್ನು ನಿಂದೆಗೆ ಗುರಿಮಾಡಿರುವವು. ಮತ್ತು ಕೆಲಸಮಯಗಳಲ್ಲಿ ಪ್ರಬಲತರವಾದ ಅಪರಾಧಗಳಲ್ಲಿ ಆತನನ್ನು ದೊಬ್ಬಿದುವು. ದೈವಾ

Digitized by ROJA MUTHIAH RESEARCH LIBRARY

ಜ್ಞೆಗಳ ವಿಷಯದಲ್ಲಿ ಆತನಿಗಿದ್ದ ಲಕ್ಷ್ಯವೂ ಆತನ ಆತ್ಮಾನುಭವವೂ ಚಿರಸ್ಥಾಯಿಯಾದ ಸತ್ಯದ ಅರುಹೂ ಆತನೊಳಗಿದ್ದ ಇತರ ಎಲ್ಲಾ ಆಶೆಗಳಿಗಿಂತಲೂ ಶ್ರೇಷ್ಠವಾದವುಗಳಾಗಿದ್ದುದರಿಂದ ಆತನು ಪಾಪದ ಅಸಹ್ಯತೆಯನ್ನು ಕಂಡುಕೊಂಡು, ಆ ಪಾಪಗಳ ಕ್ಷಮಾಪಣೆಯನ್ನು ಬೇಡುವವನಾಗಿದ್ದನು. ಆತನ ಗೌರವಕ್ಕೆ ಕುಂದು ತಂದ ಕಲೆಗಳು ಆತನೊಳಗೆ ವಿಶೇಷವಾಗಿದ್ದವು. ಆತನಲ್ಲಿ ಆಗಾಗ್ಗೆ ಹೊರಪಡುತ್ತಿದ್ದ ವಂಚಕಕಾರ್ಯಗಳೂ, ಸ್ವೇಚ್ಛಾಪ್ರವರ್ತನೆಗಳೂ, ನಿಂದ್ಯವಾದ ಪಿತೃವಾತ್ಸಲ್ಯ, ನಿರ್ದಯವುಳ್ಳ ಕ್ರೂರತ್ವ, ಇವುಗಳನ್ನು ಕುರಿತು ಓದುವಾಗ ನಮ್ಮ ಮನ ತತ್ತರಗೊಳ್ಳುತ್ತದೆ. ಎಲ್ಲಾ ವಿಷಯಗಳಲ್ಲಿ ಅನಾಗರಿಕತೆಯೂ ಕ್ರೂರತ್ವವೂ ಅಸ್ಥಿರತ್ವವೂ ತುಂಬಿದ ಆ ಯುಗದಲ್ಲಿ ಆತನು ಹುಟ್ಟಿದ್ದುದರಿಂದ ಆ ಕಾಲಕ್ಕೆ ಅನುಸಾರವಾಗಿ ಪ್ರವರ್ತಿಸಿದನು. ಆತನಲ್ಲಿ ಪುಷ್ಕಳ ಸದ್ಗುಣಗಳು ಶೋಭಿಸುತ್ತಿದ್ದವು. ಈ ಸದ್ಗುಣಗಳು ಆತನ ಇತರ ಎಲ್ಲಾ ದುರ್ಗುಣಗಳನ್ನು ಮುಚ್ಚಿ ಬಿಟ್ಟವು. ಸ್ಮರಣೀಯವಾದ ಈತನ ಚರಿತ್ರೆಯಲ್ಲಿ ಮೃದುವಾದ ಆತನ ಪ್ರೀತಿಭಾವ, ನಿಷ್ಕಳಂಕವಾದ ಉದ್ದೇಶಗಳು, ಪಿತೃಧರ್ಮವು, ನ್ಯಾಯಶೀಲತೆಯು, ರಾಜ್ಯವ್ಯವಹಾರಗಳಲ್ಲಿ ಏಕದೃಷ್ಟಿಯು, ವಿವೇಕ, ಶೂರತ್ವ, ದೇಶಾಭಿಮಾನ, ಪರರ ವಿಷಯದಲ್ಲಿ ಗಣನೆ, ಶತ್ರುಗಳಲ್ಲಿ ಉದಾರಭಾವ, ಸ್ನೇಹಧರ್ಮದಲ್ಲಿ ನಂಬಿಕೆ ಇವುಗಳ ಸಾದೃಶ್ಯಗಳು ಅನಂತವಾಗಿವೆ. ಆತನಲ್ಲಿ ಪ್ರಾಮುಖ್ಯವಾಗಿ ಹೊಳೆಯುತ್ತಿದ್ದ ಸದ್ಗುಣವು ಭಕ್ತಿಯೇ. ಇದು ಸತ್ಯಕ್ರಿಯಾಸಹಿತವಾದದ್ದಾಗಿ ಆತನಿಗೆ ಸುಕಾಲಗಳಲ್ಲಿ ದೇವರಲ್ಲಿದ್ದ ಉತ್ಸಾಹವೂ ಕ್ಷೀಣದಶೆಯಲ್ಲಿ ಭಗವಂತನ ಮೇಲಿಟ್ಟಿದ್ದ ಭರವಸವೂ ಯೆಹೋವನ ಕಡೆಗೆ ತಿರುಗುವ ಹಾಗೆ ಪಶ್ಚಾತ್ತಾಪ ಯುಕ್ತವಾದ ಮನವನ್ನು ಹುಟ್ಟಿಸುತ್ತಿದ್ದುವು. ಕಷ್ಟಗಳು ಸಂಭವಿಸಿದಾಗ ಆತನು ನಿಜವಾದ ನಮ್ರಭಾವದಿಂದ ತನ್ನನ್ನು ದೇವರ ಚಿತ್ತಕ್ಕೊಳಪಡಿಸಿಕೊಳ್ಳುತ್ತಿದ್ದನು. ಆತನು ದೇವರ ಮೇಲೆ ಇಟ್ಟ ಭರವಸವು ಆತನು ಪ್ರಾಯದಲ್ಲಿಯೂ ಅನುಭವದಲ್ಲಿಯೂ ಬೆಳೆದಹಾಗೆಲ್ಲಾ ಬಲವಾಗಿ ಪ್ರಕಾಶವಾಗಿ ಅಭಿವೃದ್ಧಿಯಾಯಿತು. ಈತನ ಗುಣಶೀಲಭಾವಗಳು ಕೇವಲ ಅಸಾಧಾರಣವಾದುದರಿಂದಲೂ ನಾನಾವಿಧ ಲಕ್ಷಣಗಳಿಂದೊಡಗೂಡಿರುವದರಿಂದಲೂ ಚರಿತ್ರಕಾರರೂ ಕವಿಗಳೂ ಅದನ್ನು ತೃಪ್ತಿಕರವಾಗಿ ವರ್ಣಿಸಲಾರದೆ ಬಿಟ್ಟಿದ್ದಾರೆ.

# ಪರಿಶಿಷ್ಟವು

## ದಾವೀದನ ರಾಜ್ಯದಲ್ಲಿ ಮುಲ್ಕಿ ಮತ್ತು ಸೈನ್ಯಸಂಬಂಧದ ಸಂಸ್ಥಾಪನೆ.

### ಸೈನ್ಯ.

ಪೂರ್ವಕಾಲದಲ್ಲಿದ್ದ ಎಲ್ಲಾ ಜನಾಂಗಗಳವರ ಹಾಗೆ ಇಸ್ರಾಯೇಲಿನವರಿಗೆ ಸಹಾ ಜನಾಂಗವೇ ಸೈನ್ಯವಾಗಿತ್ತು, ಎಂದರೆ—ದೇಹದಾರ್ಢ್ಯವುಳ್ಳ ಪುರುಷರೆಲ್ಲರು ಯುದ್ಧಕ್ಕೆ ಯಾವಾಗಲೂ ಸಿದ್ಧರಾಗಿರುವ ಹಂಗಿನಲ್ಲಿದ್ದರು. ಆದರೆ ದಾವೀದನ ಆಳಿಕೆಯಲ್ಲಿ ಪ್ರತ್ಯೇಕವಾಗಿ ಒಂದು ಸೈನ್ಯವೇ ಸ್ಥಾಪಿಸಲ್ಪಟ್ಟಿತು. ಸುಲಿಗೆಯ ಕಾಲದಲ್ಲಿ ದಾವೀದನಿಗ ಸೇರಿಕೊಂಡ ಶೂರರಾದ ಆರುನೂರು ಮಂದಿ ಯುದ್ಧವನ್ನು ತಮ್ಮ ವೃತ್ತಿಯಾಗಿ ಮಾಡಿಕೊಂಡು ಯಾವಾಗಲೂ ಆಯುಧಪಾಣಿಗಳಾಗಿರುತ್ತಿದ್ದುದರಿಂದ ಇವರೇ ಮುಂದೆ ಸೈನ್ಯಸಂಸ್ಥಾಪನಿಗೆ ಮೂಲಪುರುಷರಾಗಿದ್ದರು. ಅಬ್ಸಲೋಮನು ತಿರುಗಿ ಬಿದ್ದ ಕಾಲದಲ್ಲಿ ಇವರನ್ನು ಕುರಿತ ಸೂಚನೆಯು ಬಂದದೆ. "ಗಾತಿನಿಂದ ಅವನ ಸಂಗಡ ಬಂದ ಆರುನೂರು ಮಂದಿ ಗಿಬ್ಬೊರಿಮ್" (ii ಸಮು. xv. 18.) ಬಹುಶಃ ಇವರು ದಾವೀದನಲ್ಲಿಟ್ಟಿದ್ದ ವಿಶ್ವಾಸವೇ ಆತನನ್ನು ಅನೇಕ ಗಂಡಾಂತರಗಳಿಂದ ತಪ್ಪಿಸಿರ ಬೇಕು. ಗಿಬ್ಬೊರಿಮ್ ಎಂಬುವ ಪದವು "ವೀರರು" "ಹಳಬರು" "ಬಲಶಾಲಿಗಳು" ಎಂದು ಭಾಷಾಂತರೀಕರಿಸಲ್ಪಟ್ಟಿದೆ. ದಾವೀದನ ಚರಿತ್ರೆಯೊಳಗೆ "ಬಲಶಾಲಿಗಳು" ಎಂದು ಬರುವ ಪದವು ಈ ಗುಂಪನ್ನೇ ಸೂಚಿಸುತ್ತದೆಂದು ನಾವರಿಯಬೇಕು. ಎರಡನೇ ಸಮುವೇಲನ 23 ನೇ ಅಧ್ಯಾಯ 23 ನೇ ವಚನದಲ್ಲಿ ಹೇಳಿರುವ "ಮೂವತ್ತು ಮಂದಿ" ಬಹುಶಃ ಈ ಆರುನೂರು ಮಂದಿಯೊಳಗೆ ದಂಡಿನ ನಾಯಕರಾಗಿರಬಹುದು. ಇವರು ಯುದ್ಧಪರಿಚಯವುಳ್ಳವರಾಗಿದ್ದುದರಿಂದ ತರುವಾಯ ಕ್ರಮವಾದ ಸೈನ್ಯವು ಸ್ಥಾಪನೆಯಾದ ಬಳಿಕ ಸೇನಾಪತಿಗಳಾಗಿ ನೇಮಕವಾದರೆಂದು ನಾವು ಊಹಿಸಬಹುದು. ಎರಡನೇ ಸಮುವೇಲನು 23 ನೇ ಅಧ್ಯಾಯ 24—39 ರಲ್ಲಿ ಅವರ ಹೆಸರುಗಳ ಪಟ್ಟಿಯೊಂದಿದೆ. ದಾವೀದನ ದಂಡಿನೊಳಗೆ ಹೆಸರುವಾಸಿಯಾದವರೂ ಯೋವಾಬನ ಕೈಕೆಳಗೆ ದೊಡ್ಡ ಉದ್ಯೋಗಸ್ಥರೂ ಆಗಿದ್ದ "ಮೂರು ಮಂದಿ" ಯ ಹೆಸರುಗಳು—ಒಂದೇ ಕಾಳಗದೊಳಗೆ ಮುನ್ನೂರು ಮಂದಿಯನ್ನು ಕೊಂದ ಹಕಮೋನಿನ ಮಗನಾದ ಯಾಷೋಬೀಮನು, ದೋಡೋನ ಮಗನಾದ ಎಲಿಯೇಜರನು, ಅಗೀಯ ಮಗನಾದ ಷಾಮ್ಮನು. ಮೂವತ್ತು ಮಂದಿ ಸೇನಾನಾಯಕರೊಳಗೆ ಶ್ರೇಷ್ಠನಾದವನು ಯೋವಾಬನ ತಮ್ಮನಾದ ಅಬೀಷಾಯನು.

Digitized by ROJA MUTHIAH RESEARCH LIBRARY

ಗಿಬ್ಬೋರಿಮ್ ಮಾತ್ರವಲ್ಲದೆ ಮೈಗಾವಲಿನವರ ಬೇರೊಂದು ದಳವಿದ್ದ ಹಾಗೆ ತೋರುತ್ತದೆ. ಈ ದಳದವರಿಗೆ ಕೆರೇತ್ಯರು ಪೆಲೇತ್ಯರು ಎಂದು ಹೆಸರು. ಈ ಹೆಸರು ಕ್ರೇತೆಯವರು ಫಿಲಿಷ್ಟಿಯರು ಎಂಬ ಹೆಸರುಗಳಿಗೆ ಬಹಳ ಸಂಬಂಧಪಟ್ಟ ಹಾಗಿರುವದರಿಂದ ಈ ಸೈನ್ಯಕ್ಕೆ ದಾವೀದನು ಆ ಎರಡು ಜನಾಂಗಗಳವರೊಳಗಿಂದ ಜನಗಳನ್ನು ಕಟ್ಟಿದನೆಂದು ಕೆಲವರು ಊಹಿಸುತ್ತಾರೆ. ಇದು ನಿಜವೆಂದು ಸ್ಥಾಪಿಸಲಾಗದು. ಕೆಲವರು ಈ ಪದಗಳಿಗೆ ಮಾರಕರು ಅಥವಾ ದೂತರು ಎಂಬುವ ಅರ್ಥವಾಗುತ್ತದೆಂದು ಹೇಳುತ್ತಾರೆ.

ಅಬ್ಸಲೋಮನ ತಿರುಗಿಬೀಳುವಿಕೆಗೆ ಸ್ವಲ್ಪ ಕಾಲಕ್ಕೆ ಮುಂಚೆ ದಾವೀದನು ಪರದೇಶೀಯರದೊಂದು ಚಿಕ್ಕ ದಂಡನ್ನು ಗಾತು ಊರಿನಿಂದ ಬರಮಾಡಿಕೊಂಡು ಅವರನ್ನೆಲ್ಲಾ ಇತ್ತಾಯನ ಕೈಕೆಳಗೆ ಕೊಟ್ಟಿದ್ದನು. ಇವನು ಅರಸನಿಗೆ ತುಂಬಾ ನಂಬಿಗಸ್ತನಾಗಿದ್ದು ಎಫ್ರಾಯಿಮ್ ಅಡವಿಯ ಯುದ್ಧದಲ್ಲಿ ಸೈನ್ಯದ ಮೂರು ಭಾಗಗಳಲ್ಲೊಂದು ಭಾಗಕ್ಕೆ ನಾಯಕನಾಗಿ ನೇಮಿಸಲ್ಪಟ್ಟಿದ್ದನು.

ಯುದ್ಧವು ಸಂಭವಿಸಿದಾಗಲೆಲ್ಲಾ ಈ ಚಿಕ್ಕ ದಂಡುಗಳಿಗಿಂತ ಹೆಚ್ಚು ಮಂದಿ ಬೇಕಾಗಿದ್ದರೆ ಆ ಕ್ಷಣವೇ ತುತೂರಿಯನ್ನೂದಿ ಜನಾಂಗದೊಳಗೆ ಬಲಿಷ್ಠರಾದವರೆಲ್ಲರು ಒಂದು ಸ್ಥಳಕ್ಕೆ ಕೂಡಿಬರ ಬೇಕೆಂದು ಸಾರಿಹೇಳಿ, ಹಾಗೆ ಬಂದವರೊಳಗೆ ಪರಾಕ್ರಮಶಾಲಿಗಳಾದವರನ್ನು ಮಾತ್ರ ಆಯ್ದುಕೊಳ್ಳುತ್ತಿದ್ದರು.

i ದಿನಚರ್ಯ 27 ನೇ ಅಧ್ಯಾಯ 1–24 ನೇ ವಚನಗಳಲ್ಲಿ ದೇಶದೊಳಗಣ ಯುದ್ಧಕ್ಕೆ ಸಿದ್ಧವಾಗಿದ್ದ ಭಟರ ಸಂಖ್ಯೆಯು ಬರೆಯಲ್ಪಟ್ಟಿದೆ. ಇವರ ಸಂಖ್ಯೆ ೨,೮೮,೦೦೦. ಈ ಸಂಖ್ಯೆ ಹನ್ನೆರಡು ಭಾಗಗಳಾಗಿ ವಿಭಾಗಿಸಲ್ಪಟ್ಟಿತೆಂದೂ ಒಂದೊಂದು ಭಾಗವಾದ ೨೪,೦೦೦ ಮಂದಿಗೆ ಒಬ್ಬೊಬ್ಬ ಸೇನಾಪತಿಯಿದ್ದನೆಂದೂ ತೋರುತ್ತದೆ. ಪ್ರತಿ ಒಂದು ಭಾಗವು ವಂತಿನ ಪ್ರಕಾರ ಒಂದೊಂದು ತಿಂಗಳು ಚಾಕರಿಮಾಡ ಬೇಕಾಗಿತ್ತು. ಅಬ್ಸಲೋಮ ಅದೋನಿಜರ ತಿರುಗಿಬೀಳುವಿಕೆಯ ವಿಷಯದಲ್ಲಿಯಾದರೂ ಮತ್ತು ಯಾವ ಯುದ್ಧಗಳಲ್ಲಿಯಾದರೂ ಇವರನ್ನು ಕುರಿತ ಸೂಚನೆ ಇಲ್ಲದ್ದರಿಂದ ಕೆಲವರು ಈ ಏರ್ಪಾಟು ಮಾಡಬೇಕೆಂದು ದಾವೀದನು ಉದ್ದೇಶಿಸಿದ್ದನೇ ಹೊರತು ಅದನ್ನು ಸ್ಥಾಪಿಸಲಿಲ್ಲವೆಂದು ಭಾವಿಸುತ್ತಾರೆ. ಆದರೆ ಇದರ ನಿಮಿತ್ತವಾಗಿಯೇ ಖಾನೆಷುಮಾರಿ ಲೆಖ್ಖ ಮಾಡಲ್ಪಟ್ಟಿತೆಂತಲೂ, ಸಾಂಕ್ರಾಮಿಕ ರೋಗದ ಬಾಧೆ ಸಂಭವವಾದಾಗ ಆ ಉದ್ದೇಶವು ನಿರರ್ಥಕವಾಗಿ ಹೋಯಿತೆಂತಲೂ ಊಹಿಸ ಬಹುದು. ಈ ಭಾವನೆಗೆ ಅದೇ ಪರಿಚ್ಛೇದದ 23, 24 ನೇ ವಚನಗಳು ಆಧಾರವಾಗಿವೆ. ಈ ವಚನಗಳು ಪರಿಷ್ಕಾರವಾಗಿ ಆ ಅರ್ಥವನ್ನು ತಿಳಿಸದಿದ್ದರೂ, ಅವು ಖಾನೆಷುಮಾರಿ ಲೆಖ್ಖವನ್ನೇ ಸೂಚಿಸುತ್ತವೆಂಬುದಕ್ಕೆ ಸಂಶಯವಿಲ್ಲ.



## ದಾವೀದನ ರಾಜಾದಾಯಕ್ಕೆ ಮೂಲಗಳು.

[i ದಿನಚರ್ಯ. xxvii. 25—31.]

ದಾವೀದನ ಕೋಶಾಧಿಕಾರಿಗಳ ಹೆಸರುಗಳ ಪಟ್ಟಿಯೊಂದು ಬರೆಯಲ್ಪಟ್ಟಿದೆ. ಇದರಿಂದ ದಾವೀದನ ಸ್ಥಿರಚರಾಸ್ತಿ ಯಾವತ್ತೂ ಹನ್ನೆರಡು ಮೂಲಗಳಿಂದ ಉತ್ಪತ್ತಿಯಾಗುತ್ತಿತ್ತು ಎಂದು ನಾವು ತಿಳುಕೊಳ್ಳ ಬಹುದು.

1 ಯೆರೂಸಲೇಮಿನೊಳಗೆ ರೊಕ್ಕವೂ ಬೆಲೆಯುಳ್ಳ ಲೋಹಗಳೂ ಇಡಲ್ಪಟ್ಟ ಭಂಡಾರ.

2 ಅರಸನ ಮಾನ್ಯಭೂಮಿಗಳಿಂದಾಗುವ ಹುಟ್ಟುವಳಿಯ ಉಗ್ರಾಣಗಳು ದೇಶದೊಳಗೆ ಅಲ್ಲಲ್ಲಿ ಪಟ್ಣಗಳೊಳಗೂ ಕೋಟೆಗಳೊಳಗೂ ಇದ್ದವು.

3 ಅರಸನ ಮಾನ್ಯಭೂಮಿಯ ಸಾಗುವಳಿ.

4 ದ್ರಾಕ್ಷೆಯ ತೋಟಗಳು.

5 ದ್ರಾಕ್ಷೆಯ ರಸದ ಆಲೆಗಳು.

6 ಕಾರ್ಮೇಲು ಗುಡ್ಡಕ್ಕೆ ತೆಂಕಣ ಕಡೆಯ ಸಮುದ್ರ ತೀರದ ಮೈದಾನಿನಲ್ಲಿ ಇಪ್ಪೆ, ಅಂಜೂರದ ತೋಟಗಳು.

7 ಎಣ್ಣೆಯ ಉಗ್ರಾಣಗಳು.

8 ಶಾರೋನಿನೊಳಗೆ ಪಶುಗಳ ಮಂದೆಯು.

9 ಇತರ ಸ್ಥಳಗಳಲ್ಲಿನ ಮಂದೆಗಳು.

10 ಒಂಟೆಗಳ ಮಂದೆಗಳು.

11 ಕತ್ತೆಗಳ ಮಂದೆಗಳು.

12 ಕುರಿಗಳ ಮಂದೆಗಳು.

ಇಸ್ರಾಯೇಲರು ತಮ್ಮ ಅರಸನಿಗೆ ಭೂಸ್ವಾಸ್ಥ್ಯವನ್ನು ಅಥವಾ ಅವುಗಳ ಸಾಗುವಳಿಯ ಹುಟ್ಟುವಳಿಯಲ್ಲಿ ಕೆಲವು ಭಾಗ ಹಕ್ಕನ್ನು ನೇಮಿಸಿಕೊಟ್ಟ ಹಾಗೆ ಕಾಣಬರುತ್ತದೆ. ಇವುಗಳ ಆದಯದಿಂದಲೇ ಅರಮನೆಯ ಖರ್ಚುಗಳೆಲ್ಲಾ ನಿರ್ವಹಿಸಲ್ಪಡುತ್ತಿದ್ದವು. ಯಾಕಂದರೆ ಪ್ರಜೆಗಳಿಂದ ವಸೂಲ್ಮಾಡಿದ ತೆರಿಗೆ ಬಹಳ ಸ್ವಲ್ಪವಾಗಿತ್ತು. ಆದರೆ ದಾವೀದನಿಗೆ ಒಳಪಟ್ಟವರಾದ ಪರರಾಜರು "ಬಹುಮಾನಗಳನ್ನು ತಂದೊಪ್ಪಿಸುತ್ತಿದ್ದರು" ಎಂದು ಸತ್ಯವೇದದಲ್ಲಿ ಹೇಳಿರುವ ಪ್ರಕಾರ ಪರರಾಜರು ಕೊಟ್ಟ ಕಪ್ಪವೂ ಸ್ವಂತ ಭೂಮಿಗಳಿಂದಲೂ ಮಂದೆಗಳಿಂದಲೂ ಉತ್ಪನ್ನವಾದ ಆದಾಯವೂ ಮಾತ್ರವೇ ದಾವೀದನ ರಾಜಾದಾಯಕ್ಕೆ ಮೂಲಗಳಾಗಿದ್ದವು.

## ದಾವೀದನ ರಾಜ್ಯದ ಮೂಲ್ಕಿ ಅಧಿಕಾರಿಗಳು.

ಈ ಹುದ್ದೇದಾರರ ಹೆಸರುಗಳ ಪಟ್ಟಿಗಳು ಎರಡನೇ ಸಮುವೇಲನ viii. 16—18 ರಲ್ಲಿಯೂ, xx. 23—26 ರಲ್ಲಿಯೂ, i ದಿನಚರ್ಯ. xviii. 15—17; xxvii. 32—34 ರಲ್ಲಿಯೂ ಬರೆಯಲ್ಪಟ್ಟಿವೆ. ಅವರ್ಯಾರಂದರೆ—(1) ಪ್ರಧಾನ ಯಾಜಕರಾದ ಚದೋಕನು

Digitized by ROJA MUTHIAH RESEARCH LIBRARY

ಅಬಿಯಾತರನು (ii ಸಮು. viii. 17 ರಲ್ಲಿ "ಅಬಿಯ ತರನ ಮಗನಾದ ಅಹಿಮೆಲೇಕ
ಎಂಬುವದಕ್ಕೆ ಬದಲಾಗಿ ಅಹಿಮೆಲೇಕನ ಮಗನಾದ ಅಬಿಯಾತರನೆಂದು ಓದಬೇಕು.) ಇ
ದಾವೀದನ ಆಳಿಕೆಯೊಳಗೆ ಕಡೇ ವರೆಗೂ ಯಾಜಕರಾಗಿದ್ದರು. (2) ದಪ್ತರದಾರನ
ಅಹಿಲೂದನ ಮಗನಾಗಿದ್ದ ಯೆಹೋಷಪಾಟನು, ಇವನು ರಾಜ್ಯದಲ್ಲಿ ನಡೆಯುವ ಸ
ಕಾರ್ಯಗಳನ್ನು ಬರೆದಿಡುತ್ತಿದ್ದನು. (3) ಲೇಖಕನು ಅಥವಾ ಗುಮಾಸ್ತನಾಗಿದ್ದ ಸೆ
ನು ಇಲ್ಲವೇ ಷಾವ್ಸನು. ಇವನು ಅರಸನ ಆಜ್ಞೆಗಳನ್ನೂ ಉದ್ದೇಶಗಳನ್ನೂ ಬರೆದು ಯಾ
ಮುಟ್ಟಬೇಕೋ ಅಂಥವರಿಗೆ ತಲ್ಪಿಸುತ್ತಿದ್ದನು. (4) "ಶ್ರೇಷ್ಠ ಪ್ರಭುವು" ಈ ಉದ್ಯೋ
ಗವನ್ನು ದಾವೀದನ ಕುಮಾರರೂ ಗಿಲ್ಯಾದಿನೊಳಗಣ ಯಾಯಿರಾರು ಜಿಲ್ಲೆಯ
ನಾದ ಈರನೂ ಮಾಡುತ್ತಿದ್ದರು. (ii ಸಮು. xx. 26.) ಈ ಸಂದರ್ಭದಲ್ಲಿ ಪ್ರಯೆ
ಗಿಸಲ್ಪಟ್ಟ ಹೀಬ್ರು ಪದವು ಇತರ ಸ್ಥಳಗಳಲ್ಲಿ "ಯಾಜಕನು" ಎಂದು ಭಾಷಾಂತರ ಮಾ
ಟ್ಟಿದೆ. ii ಸಮುವೇಲ xx ನೇ ಅಧ್ಯಾಯ 25, 26, ವಚನಗಳಲ್ಲಿ—"ಮತ್ತು ಚದೆ
ಕನು ಅಬ್ಯಾತಾರನು ಯಾಜಕರಾಗಿದ್ದರು. ಯಾಯಿರಾರ್ಯನಾದ ಈರನು ಕೂಡ ದಾವಿ
ನಿಗೆ ಯಾಜಕನಾಗಿದ್ದನು" ಎಂದು ಓದಬೇಕು. ಚದೋಕನು ಅರಸನಿಗೆ ಪುರೋಹಿತನಾ
ದ್ದಂತೆ ಇವನು ಕೂಡ ಅರಮನೆಯ ಯಾಜಕನು ಇಲ್ಲವೆ ಅರಸನಿಗೆ ಪುರೋಹಿತನಾಗಿದ್ದ
ಕನ್‌ಸ್ಟಾಂಟಿನ್ ಚಕ್ರವರ್ತಿಗೆ ಬಿಶಪನಾಗಿದ್ದವನು ಮಾಡುತ್ತಿದ್ದ ಉದ್ಯೋಗವನ್ನೇ ದಾವಿ
ನಿಗೆ ಈರನು ಮಾಡುತ್ತಿದ್ದನು. ಅಂದರೆ—ಅರಮನೆಯಲ್ಲಿ ಆರಾಧನೆ ಮುಂತಾದ್ದು ಜರ
ಸುವದು, ರಾಜ್ಯವ್ಯವಹಾರಗಳಲ್ಲಿ ಆಲೋಚನೆ ಹೇಳುವದು, ಮೊದಲಾದ ಕೆಲಸಗಳ
ಮಾಡುತ್ತಿದ್ದನು. ಆದರೆ ಈ ವಿಷಯದಲ್ಲಿ ಪರಿಷ್ಕಾರವಾಗ ಬೇಕಾದ ಒಂದು ಕಷ್ಟವು (
ವದಂದರೆ ii ಸಮುವೇಲ viii. 18 ನೇ ವಚನದ ಪ್ರಕಾರ ದಾವೀದನ ಕುಮಾರರು ಸಹ
ಕೆಲಸ ಮಾಡುತ್ತಿದ್ದಂತೆ ವ್ಯಕ್ತವಾಗುತ್ತದೆ. ಇವರು ಆರೋನನ ಸಂತತಿಯವರಲ್ಲ. ಅ
ಪ್ರಕಾರ ನಾತಾನನ ಮಗನಾದ ಜಬುದನು ಸಹಾ ಸೊಲೊಮೋನನಿಗೆ "ಯಾಜಕನಾ
ದ್ದನು." ಇವನಾದರೂ ಯಾಜಕ ಸಂತತಿಯವನಾಗಿರಲಿಲ್ಲ. ಇದೆಲ್ಲವನ್ನೂ ಪರ್ಯಾಲೆ
ಚಿಸಿ ನೋಡಿದರೆ ಬಹುಶಃ ಈ ಉದ್ಯೋಗವು ಗೌರವಕ್ಕೋಸ್ಕರ ಕೊಟ್ಟಿತ್ತೇ ಹೊರತು ಯ
ಸಂಸ್ಕಾರವನ್ನು ನಡಿಸುವ ಅಧಿಕಾರವು ಅವರಿಗೆ ಕೊಡಲ್ಪಟ್ಟಿರಲಿಲ್ಲವೆಂದು ನಾವು ಊಹಿ
ತಕ್ಕದ್ದು. (5) "ಅರಸನ ಸ್ನೇಹಿತನು." ಈ ಉದ್ಯೋಗವು ಅರ್ಕಿಯನಾದ ಹುಷಾಯನಿ
ನೇಮಕವಾಗಿತ್ತು. ಅರಸನಿಗೆ ರಾಜ್ಯವ್ಯವಹಾರಗಳಲ್ಲಿ ಆಲೋಚನೆ ಹೇಳುವದೇ ಈ ಉದ್ಯೋ
ಗದ ಉದ್ದೇಶವು. ಈ ಉದ್ಯೋಗಸ್ಥನು ಖಾಸಾ ಮಂತ್ರಿಯಂತಿದ್ದನೆಂದು ಹೇಳಬಹುದು.

Digitized by ROJA MUTHIAH RESEARCH LIBRARY

ರುತ್ತದೆ.
ವರು ಫ
ದಾವೀದ
ಊಹಿಸು
ಅಥವಾ
ಶೀಯರದ
ಇತ್ತಾಯ
ಯಿಮ್
ನಾಗಿ ನೇ
ದ್ದರೆ ಆ
ಕೂಡಿಬರ
ಮಾತ್ರ ಅ
ಯುದ್ಧಕ್ಕೆ
ಈ ಸಂಖ
೨೪,೦೦೦
ವಂತಿನ ಪ್ರ
ನಿಜರ ತಿರ
ಇವರನ್ನು
ದನು ಉ
ನಿಮಿತ್ತವ
ಬಾಧೆ ಸಂ
ಈ ಭಾವ
ಪರಿಷ್ಕಾರ
ತ್ತವೆಂಬು

18 MAY 2009

ಪುಸ್ತಕಸೂಚಿ
ವ. ಸಂ: Q, 6:2 N
ಕ್ರ. ಸಂ: 4538.
…ಥಾಮಸನ್ (ಪಿ).

ವ. ಸಂ: Q, 6:2 N
ಕ್ರ. ಸಂ: 4538.
ಕ. ಸಾ. ಪ.
ಗ್ರಂಥ ಭಂಡಾರ

# Books for Bible Studen

## ಸತ್ಯವೇದ ಪಾಠಕರಿಗೆ ಅವಶ್ಯವಾದ ಪುಸ್ತಕಗಳು

| | | ರೂ. |
|---|---|---|
| ೧ | ಯೆಶಾಯನ ಪ್ರವಾದಗಳು (I--XXXIX ಅಧ್ಯಾಯಗಳು) | ೦ |
| ೨ | ಪ್ರೇಷಿತನಾದ ಪೌಲನ ಪತ್ರಿಕೆಗಳು | ೦ |
| ೩ | ಕ್ರೈಸ್ತ ಜೀವನ್ಮುಕ್ತಿ ವಿವೇಕ | ೦ |
| ೪ | ಯಾಕೋಬನ ಪತ್ರಿಕೆಯ ವ್ಯಾಖ್ಯಾನವು | ೦ |
| ೫ | ಶ್ರೀ ಪೌಲನ ಚರಿತ್ರೆ | ೦ |
| ೬ | ಶ್ರೀ ಪೇತ್ರನ ೧ ನೇ ಪತ್ರಿಕೆಯ ವ್ಯಾಖ್ಯಾನ | ೦ |
| ೭ | ಹಳೇ ಒಡಂಬಡಿಕೆಗೂ ಹೊಸ ಒಡಂಬಡಿಕೆಗೂ ಇರುವ ಚರಿತ್ರ ಸಂಮಂಧ | ೦ |
| ೮ | ಶ್ರೀ ಯೋಹಾನನ ಚರಿತ್ರೆ | ೦ |
| ೯ | ಆದಿಕಾಂಡ (ಉತ್ಪತ್ತಿ) ಎಂಬ ಸದ್ವೇದ ಭಾಗದ ನೂತನ ಭಾಷಾಂತರ, ಸಟೀಕ | ೧ |
| ೧೦ | ಅರಸನಾದ ದಾವೀದನ ಚರಿತ್ರೆ | ೦ |

ಈ ಪುಸ್ತಕಗಳೂ ಇನ್ನೂ ಅನೇಕ ಪ್ರಯೋಜನಕರವಾದ ಪುಸ್ತ
ಕೆಳಗೆ ನಮೂದಿಸಿರುವ ಸ್ಥಳಗಳಲ್ಲಿ ದೊರೆಯುತ್ತವೆ—

ಬೆಂಗಳೂರು : ಮೇನ್ ಗಾರ್ಡಿನ ಹತ್ತರವಿರುವ ಪುಸ್ತಕಶಾಲೆ
ಚಿಕ್ಕಬಳ್ಳಾಪುರ : ಲನ್‌ಡನ್ ಮಿಷನ್ ರೀಡಿಂಗ್ ರೂಮ್
ತುಮಕೂರು : ಮಿಷನ್ ಬುಕ್ ಡಿಪೊ
ಮೈಸೂರು : ಸಿ. ಎಲ್. ಎಸ್. ಬುಕ್ ಡಿಪೊ
ಮಂಗಳೂರು : ಬಾಸೆಲ್ ಮಿಷನ್ ಬುಕ್ ಡಿಪೊ
ಶಿವಮೊಗ್ಗ : ಮಿಷನ್ ಬುಕ್ ಡಿಪೊ

Digitized by ROJA MUTHIAH RESEARCH LIBRARY